CC-O. In Public Domain. Digitized by eGangotri

ಹದಿ ಹರೆಯ

ಮಾನಸಿಕ ಸಮಸ್ಯೆಗಳು

ಡಾ|| ಸಿ. ಆರ್. ಚಂದ್ರಶೇಖರ್

ಬೆಳ್ಳಿ ಬೆಳಕು
25
1960 - 1985
ನವಕರ್ನಾಟಕ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹದಿಹರೆಯ

ಮಾನಸಿಕ ಸಮಸ್ಯೆಗಳು

ಡಾ|| ಸಿ. ಆರ್. ಚಂದ್ರಶೇಖರ್

ನವಕರ್ನಾಟಕ ಪ್ರಕಾಶನ

Sri Vidyabharathi Book Centre, Sringeri

ಪ್ರಥಮ ಮುದ್ರಣ : ಡಿಸೆಂಬರ್ 1986
CC-O. In Public Domain. Digitized by eGangotri

ಬೆಲೆ : ರೂ. 7-50

© ಶ್ರೀಮತಿ ಡಿ. ಎಸ್. ರಾಜೇಶ್ವರಿ

ರಕ್ಷಾ ಕವಚ : ಬಿ. ಜಿ. ಗುಜ್ಜಾರಪ್ಪ

ಮುದ್ರಕರು :
ಜನಶಕ್ತಿ ಪ್ರಿಂಟರ್ಸ್
5ನೇ ಮುಖ್ಯ ರಸ್ತೆ
ಗಾಂಧಿನಗರ, ಬೆಂಗಳೂರು-560 009

ಪ್ರಕಾಶಕರು :
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
Sri Vidyabharathi Book Centre, Sringeri
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

CC-O. In Public Domain. Digitized by eGangotri

ಲೇಖಕನ ಮಾತು

ಹದಿವಯಸ್ಸು ಬಾಳಿನ ವಸಂತ. ಈ ಅವಧಿಯಲ್ಲಿ ಬಾಲ್ಯದ ಮುಗ್ಧತೆ, ಅಸಹಾಯಕತೆ, ಪರಾವಲಂಬಿತನ ಕಳೆದು, ಪ್ರೌಢತೆ ಕಾಲಿಡುತ್ತದೆ. ವ್ಯಕ್ತಿ ದೈಹಿಕವಾಗಿ, ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಬೆಳೆಯುತ್ತಾನೆ. ಅವನ ಮುಂದಿನ ಜೀವನದ ರೂಪು ರೇಖೆಗಳು ನಿರ್ದಿಷ್ಟ ರೀತಿಯಲ್ಲಿ ಮೂಡ ತೊಡಗುತ್ತವೆ. ತನ್ನ ಜೀವನದ ದಿಕ್ಕನ್ನೇ ಬದಲಾಯಿಸುವ ಮುಖ್ಯ ಪರೀಕ್ಷೆಗಳು ಈ ಅವಧಿಯಲ್ಲಿ ನಡೆಯುತ್ತವೆ. ತನ್ನ ಉದ್ಯೋಗವೇನು, ತನ್ನ ಸ್ಥಾನಮಾನವೇನು, ತನ್ನ ಗುರಿ ಏನು ಎಂದು ವ್ಯಕ್ತಿ ನಿರ್ಧರಿಸಬೇಕಾಗುವುದು ಈ ವಯಸ್ಸಿನಲ್ಲೇ. ಕಲ್ಪನೆಗೂ ವಾಸ್ತವಿಕತೆಗೂ ಇರುವ ಅಂತರವನ್ನು ಅರಿತು, ಸಮಾಜದ ರೀತಿ ನೀತಿಗಳಿಗೆ ಹೊಂದಿಕೊಂಡು, ಸಂತೋಷದಿಂದ ಬಾಳುವುದನ್ನು ಕಲಿಯಬೇಕಾಗುತ್ತದೆ.

ಈ ಬೆಳವಣಿಗೆ, ಬದಲಾವಣೆಯ ಹದಿವಯಸ್ಸು, ವ್ಯಕ್ತಿಯ ಮನಸ್ಸಿನಲ್ಲಿ ಸಾಕಷ್ಟು ಗೊಂದಲವನ್ನುಂಟುಮಾಡುತ್ತದೆ. ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಈ ವಿಚಾರಗಳಲ್ಲಿ ದೊಡ್ಡವರಿಂದ ಸರಿಯಾದ ಮಾರ್ಗದರ್ಶನ, ಪ್ರೋತ್ಸಾಹ, ಮಾಹಿತಿ ದೊರೆತರೆ ಸರಿ, ಇಲ್ಲದೇ ಹೋದರೆ ಹದಿವಯಸ್ಸಿನವರ ಸ್ಥಿತಿ ಗೊಂದಲಮಯವಾಗುತ್ತದೆ. ಇದರಿಂದಾಗಿ ಅವರು ಮಾನಸಿಕವಾಗಿ ಅಸ್ವಸ್ಥರಾಗಬಹುದು. ದೊಡ್ಡವರಿಗೆ ಪಥ್ಯವಾಗದ ನಡೆ ನುಡಿಯನ್ನು ಪ್ರಕಟಿಸಬಹುದು.

ಈ ಪುಸ್ತಕದಲ್ಲಿ ಹದಿವಯಸ್ಸಿನವರ ಮಾನಸಿಕ ಸಮಸ್ಯೆಗಳನ್ನು ಉದಾಹರಣೆ ಸಹಿತ ವಿವರಿಸಲಾಗಿದೆ. ಹದಿವಯಸ್ಸಿನವರ ಬಗ್ಗೆ ನಮ್ಮ ತಿಳಿವಳಿಕೆ ಹೆಚ್ಚಬೇಕು. ಅವರ ಕಷ್ಟಸುಖ ಸಮಸ್ಯೆಗಳಿಗೆ ಇತರರು ಸಹಾನುಭೂತಿಯಿಂದ ಸ್ಪಂದಿಸಬೇಕು. ಅವರ ಮಾನಸಿಕ ಆರೋಗ್ಯ ವೃದ್ಧಿಸಿ, ಅವರು ಸದೃಢ ಪ್ರೌಢರಾಗಬೇಕು ಎಂಬುದೇ ಲೇಖಕನ ಆಶಯ.

ಡಾ॥ ಸಿ. ಆರ್. ಚಂದ್ರಶೇಖರ್
ಮನೋವೈದ್ಯರು
ನಿಮ್ಹಾನ್ಸ್, ಬೆಂಗಳೂರು–29

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

1. ಹದಿವಯಸ್ಸಿನ ಹಲವು ಮುಖಗಳು ... 5
2. ಓದಿದ್ದನ್ನು ಮರೆಯುವ ಮಹಾದೇವ ... 31
3. ವಿಚಿತ್ರವಾಗಿ ವರ್ತಿಸುವ ವನಿತಾ ... 42
4. ಶಕ್ತಿ ಕಳೆದುಕೊಂಡ ರಮಾಕಾಂತ ... 53
5. ಮಂಕಾಗಿ ಕೂರುವ ಶಿವರಾಜ ... 62
6. ತನ್ನ ರೂಪಿನ ಬಗ್ಗೆ ಚಿಂತಿಸಿ ಕೊರಗುವ ಯುವಕ ... 73
7. ಭ್ರಮಾಧೀನ ಯೋಗೀಶ ... 81
8. ಹರೆಯದಲ್ಲೇ ಮದುವೆಯಾದ ಹುಡುಗಿ ... 92
9. ಹರೆಯದವರ ಅವಶ್ಯಕತೆಗಳು ... 101

Sri Vidyabharathi Book Centre, Sringeri

CC-O. In Public Domain. Digitized by eGangotri

ಹದಿವಯಸ್ಸಿನ ಹಲವು ಮುಖಗಳು

ವಸಂತ ಮಾಸ. ಕಬ್ಬನ್ ಪಾರ್ಕ್‌ನ ಗಿಡ ಮರಗಳೆಲ್ಲ ಹೊಸ ಉಡುಗೆ ಯುಟ್ಟು ನಿಂತಿವೆ. ಹಸಿರು, ಹಳದಿ, ಕೆಂಪು ಮಿಶ್ರಿತ ಚಿಗುರಾದ ಎಲೆಗಳು, ಕಾಮನ ಬಿಲ್ಲನ್ನೂ ನಾಚಿಸುವಂತೆ ಹಲವು ಹನ್ನೊಂದು ಬಣ್ಣದ ಹೂಗಳಿಂದ ಸಿಂಗಾರಗೊಂಡಿವೆ. ಮಳೆ ಇಲ್ಲದೆ, ಹಸಿರು ಹುಲ್ಲಿಲ್ಲದಿದ್ದರೂ ತಲೆ ಎತ್ತಿ ನೋಡಿದರೆ, ಕಣ್ಣಿಗೆ ಹಬ್ಬವಾಗುತ್ತಿದೆ. ಹದಿವಯಸ್ಸಿನವರೇ ಇರುವ ಒಂದು ಗುಂಪು ರನ್ನಿಂಗ್, ಜಾಗಿಂಗ್ ಇತ್ಯಾದಿ ಕಸರತ್ತು ಮಾಡಿ, ತಾರಸ್ವರದಲ್ಲಿ ಮಾತನಾಡುತ್ತಾ ಕುಳಿತಿದೆ. ಹತ್ತಿರದಲ್ಲಿ ಕುಳಿತವರ, ಸುತ್ತ ಮುತ್ತ ಓಡಾಡು ವವರ ಪರಿವೆ ಇಲ್ಲದೆ, ತಮ್ಮ ತಮ್ಮ ಆಸಕ್ತ ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ.

"ನಮ್ ಗೋವಿಂದ ಈ ಹೊತ್ತು ಹೀರೋ ಕಣ್ರೋ" ಎಂದ ಮೋನ ಉರುಫ್ ಮೋಹನಚಂದ್ರ.

"ಹೌದಾ ಗುರೂ, ಹೀರೋ ಕೆಲ್ಸ ಏನಮ್ಮಾ ಮಾಡ್ದ. ಯಾವುದಾದ್ರೂ ಹುಡುಗೀಗೆ ಕಣ್ ಹೊಡೆದ್ನಾ, ಯಾರ್‍ಜೊತೇಲಾದ್ರೂ ಫೈಟಿಂಗ್ ಮಾಡಿದ್ನಾ?" ಎಂದ ಕೇಟಿ, ಅಂದರೆ ಕೆ. ತಿಮ್ಮೇಗೌಡ.

"ಇಲ್ಲಮ್ಮಾ, ಇನ್ನೂ ಅಷ್ಟು ಧೈರ್ಯ ಎಲ್ ಬರ್‍ಬೇಕು ಈ ನಮ್ಮಗಂಗೆ. ರಜನೀಕಾಂತ್ ಪಿಕ್ಚರ್ ರಿಲೀಸ್ ಆಯ್ತಲ್ಲ ಈ ಹೊತ್ತು. ಇವನು ಮಾರ್ನಿಂಗ್ ಶೋ ನೋಡಿ ಬಂದವ್ನೆ."

"ಹೌದಾ! ಟಿಕೇಟ್ ಯಾರಮ್ಮಾ ತಂದು ಕೊಟ್ರು ಈ ಬಕರನಿಗೆ" ವಿಚಾರಿಸಿದ ಬಾಲಿ ಅಲಿಯಾಸ್ ಬಾಲಗೋಪಾಲ ಸ್ವಾಮಿ.

"ಯಾಕೋಲೇ ಮೈಕಡೀತದಾ. ಟಿಕೇಟ್ ತರ್‍ಸ್ಕೊಳ್ಳೋಕೆ ನಾನೇನ್ ಹೆಂಗಸಾ? ನಾನೇ ಹೋಗಿ ಕ್ಯೂನಲ್ಲಿ ನಿಂತು ತಕೊಂಡೆ. ನೋಡು ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಶ್‌ನಲ್ಲಿ ನನ್ನ ಶರ್ಟ್ ಹರಿದೋಯ್ತು" ಗೋವಿಂದ ತನ್ನ ಸಾಹಸಕ್ಕೆ ಸಾಕ್ಷಿ ಒದಗಿಸಿದ.

"ಹೌದೇನೋ ಗೋವಿಂದು. ಕಂಗ್ರಾಟ್ಸ್ ಕಣಮ್ಮ, ನಿಜಕ್ಕೂ ನೀನು ಹೀರೋನೆ. ಹೆಂಗೈತೋ ಪಿಕ್ಚರ್ರೂ?" ಪ್ರಶ್ನಿಸಿದ ಪಿಲ್ಲಿ ಉರುಫ್ ಪಿ. ಲೋಕೇಶ.

"ಪಿಕ್ಚರ್ ಬೊಂಬಾಟಾಗೈತಮ್ಮ. ರಜನೀಕಾಂತ್ ಏನು ಆಕ್ಟಿಂಗ್ ಮಾಡವ್ನೆ ಗೊತ್ತಾ. ಅವನ ಒಂದೊಂದು ಪಂಚ್‌ಗೆ ಕೇಡಿಗಳು ಉರುಳಿಹೋಗ್ತಾರೆ. ಫೈಟಿಂಗ್ ಮಾಡಿದ್ರೆ ಹಂಗೆ ಮಾಡ್ಬೇಕು" ಗೋವಿಂದ ತನ್ನ ಆರಾಧ್ಯ ಮೂರ್ತಿಯು ಬಗ್ಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ.

"ಗೋವಿಂದ, ರಜನೀಕಾಂತನ ಒಂದು ಸ್ಟೈಲ್‌ನ ಮಾಡಿ ತೋರಿಸೋ" ಪಿಲ್ಲಿ ಕೇಳಿದ. ಗೋವಿಂದ ಉತ್ಸಾಹದಿಂದ ಅದನ್ನು ಅಭಿನಯಿಸಿ ತೋರಿಸಿದ. ಎಲ್ಲರೂ ಚಪ್ಪಾಳೆ ಹೊಡೆದು ಅವನನ್ನು ಪ್ರೋತ್ಸಾಹಿಸಿದರು. ಆ ಕ್ಷಣದಲ್ಲಿ ಗೋವಿಂದ ಆ ಗುಂಪಿನ ಹೀರೋ ಆಗಿಬಿಟ್ಟ. ಅವನು ಮತ್ತು ಕೇಟಿ ಒಂದು ಫೈಟಿಂಗ್ ಸೀನನ್ನು ಅನುಕರಿಸತೊಡಗಿದರು. ಮೊದಲು ದೃಷ್ಟಿಯುದ್ಧ ಮಾಡಿದರು. ಆಮೇಲೆ ಕೈಕೈ ಮಿಲಾಯಿಸಿದರು. ಕರಾಟೆ ಪಟುಗಳ ವಿವಿಧ ಭಂಗಿಗಳನ್ನು ಅಭಿನಯಿಸಿದರು. ಹೂಂಕರಿಸಿ ಚೀತ್ಕಾರ ಮಾಡಿದರು. ಅವರ ಒಂದೊಂದು ಆಕ್ಷನ್‌ಗೂ, ಜೊತೆಗಾರರು ಸೀಟಿ ಹೊಡೆದು ಮೆಚ್ಚುಗೆ ತೋರಿಸಿದರು. ಈ ಆಟ ಸ್ವಲ್ಪ ಹೊತ್ತು ನಡೆದು, ಬಳಿಕ ಕುಳಿತು ಸುಧಾರಿಸಿ ಕೊಂಡರು.

"ಲೇಯ್, ಎಲ್ರೂ ನಾಳೆ ಐದೈದು ರೂಪಾಯಿ ತನ್ರೋ, ಮುಂದಿನ್ ವಾರ ಅಣ್ಣಾವ್ರು ಪಿಕ್ಚರ್ ರಿಲೀಸ್ ಆಗ್ತೈತೆ. ಮಾಟ್ನಿ ಶೋಗೆ ನಾವೆಲ್ಲ ಹೋಗ್ಬೇಕು. ನಮಗೆ ಹತ್ತು ಟಿಕೀಟ್ ಬೇಕು ಅಂತ ಸಂಘದೋರಿಗೆ ಹೇಳಿ ದ್ದೀನಿ" ಬಾಲಿ ಅನೌನ್ಸ್ ಮಾಡಿದ. ಅದನ್ನು ಹೇಳಿ ಎಲ್ಲರೂ ಹೋ ಎಂದು ಕೂಗಿ ತಮ್ಮ ಸಂತೋಷವನ್ನು ಪ್ರಕಟಿಸಿದರು.

"ಬಾಲಿ ನಾಳೆ ದುಡ್ಡು ಕೊಡೋಕೆ ನನಗೆ ಆಗೊಲ್ಲವೋ." ಮೋನ ಅಳುಮೋರೆ ಮಾಡಿದ.

"ದುಡ್ಡು ಕೊಡದಿದ್ದರೆ ಟಿಕೀಟ್ ಇಲ್ಲ ಅಷ್ಟೆ" ಬಾಲಿ ಖಡಾಖಂಡಿತವಾಗಿ ನುಡಿದ.

"ನನಗೆ ಬರ್ಲೋದಿಕ್ಕೆ ಆಸೆ ಕಣೋ. ಈಗ ಕಾಸು ಕೇಳಿದ್ರೆ ನನ್ನ ಅಪ್ಪ ಅಮ್ಮ ಕೊಡೊಲ್ಲವೋ. ಬಾಯಿಗೆ ಬಂದಾಗೆ ಬೈತಾರೋ. ಪ್ಲೀಸ್ ಬಾಲಿ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಲ ಕೊಡಿಸು ಇಲ್ಲ ನೀನೇ ಕೊಟ್ಬಿರು, ನಾನು ನಿನಗೆ ಆಮೇಲೆ ಕೊಡ್ತೀನಿ", ಮೋನ ಗೋಗರೆದ. ಅಳತೊಡಗಿದ.

"ನಿನ್ನದು ಯಾವಾಗ್ಲೂ ಇದೇ ಗೋಳು...ಹೋಗ್ಲಿ ಅಳಬೇಡ. ನಾನು ಕೊಟ್ಬಿರ್ತೀನೆ. ಎಲ್ಲರೂ ಕೇಳಿ. ಈ ಸಲ ನಾವು ನಾಲ್ಕಡಿ ಅಗಲದ ಸ್ಟಾರ್ ಮಾಡ್ಬೇಕು. ಅಣ್ಣಾವ್ರ ಚಿತ್ರಗಳನ್ನೆಲ್ಲಾ ಕತ್ತರಿಸಿ ರೆಡಿ ಮಾಡ್ಕೊಳ್ಳಿ. ನಾಳೆ ಸಾಯಂಕಾಲ ಕೇಟಿ ಮನೆ ಹಿತ್ಲಲ್ಲಿ ಸೇರಿ ಸ್ಟಾರ್ ಮಾಡೋಣ. ಎಲ್ಲರಿಗೂ ಒಪ್ಪಿಗೇನಾ ?" ಬಾಲಿ ಕೇಳಿದ.

"ನಾಳಿದ್ದು ಟೆಸ್ಟ್ ಇದೆ ಕಣೋ ನನಗೆ. ಏನೂ ಓದೇ ಇಲ್ಲ. ನಮ್ಮ ಫಿಸಿಕ್ಸ್ ಟೀಚರ್ ನಕ್ಷತ್ರಿಕ ಇದ್ದಂಗೆ. ಸುಮ್ನೆ ಗೋಳುಹೊಯ್ದುಕೊಳ್ತಾನೆ" ಪಿಲ್ಲಿ ತನ್ನ ಕಷ್ಟವನ್ನು ಹೇಳಿಕೊಂಡ.

"ಅದೆಲ್ಲ ನನಗೆ ಗೊತ್ತಿಲ್ಲ. ಟೆಸ್ಟ್‌ಗೆ, ನಿಮ್ಮ ಫಿಸಿಕ್ಸ್ ಟೀಚರ್‌ಗೆ ಗೋಲಿ ಹೊಡಿ. ಸ್ಟಾರ್ ಮಾಡೋದಿಕ್ಕೆ ನಾಳೆ ನೀನು ಕೇಟಿ ಮನೆಗೆ ಬರಲೇಬೇಕು. ಹೋದಸಲ ನಮ್ಮ ಎನಿಮಿ ಗುಂಪನ್ನು ಸೋಲಿಸಿದ್ವಿ. ಈ ಸಲ ಅವರು ನಮ್ಮನ್ನು ಸೋಲಿಸೋದಕ್ಕೆ ಖಂಡಿತ ಪ್ರಯತ್ನಿಸ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರ್ದು. ನಮ್ಮ ಸ್ಟಾರ್ ಚೆನ್ನಾಗಿರಬೇಕು. ಒಪ್ಪಿಗೇನಾ."

ಮರು ಮಾತಿಲ್ಲದೆ ಎಲ್ಲರೂ ಒಪ್ಪಿದರು.

* * *

"ಅಷ್ಟೊತ್ತಿಂದಾ ರೂಮ್ನಲ್ಲಿ ಸೇರ್ಕೊಂಡು ಏನೋ ಮಾಡ್ತಿದ್ದೀಯಾ. ಅಂಗಡೀಗೆ ಹೋಗಿ ಸಾಮಾನು ತಗೊಂಡ್ಬಾಂತ ನಾನು ಹೇಳಿ ಒಂದು ಗಂಟೆ ಆಯಿತು...ಗೋಪೀ ಹೇಳಿದ್ದು ಕೇಳಿಸ್ತಾ..."ಅಡುಗೆ ಮನೆಯಿಂದ ಕಮಲಮ್ಮ ಅಸಹನೆಯಿಂದ ಕೂಗಿದರು.

"ಬಂದೇ ಅಮ್ಮ. ಎಷ್ಟು ಅವಸರ ಮಾಡ್ತಿ." ರೂಮಿನಿಂದಲೇ ಉತ್ತರಿಸಿದ ಆಕೆಯ ಹದಿನೈದು ವರ್ಷದ ಮಗ ರಾಮು.

"ರೂಮ್ನಿಂದ ಹೊರಕ್ಕೆ ಬಾರೋ. ಒಳ್ಳೆ ಹೆಂಗಸಿನ ಹಾಗೆ ಕನ್ನಡಿ ಮುಂದೆ ಗಂಟೆಗಟ್ಟಳೆ ನಿಂತ್ಕೊಳ್ತಾನೆ." ಸಿಡುಕಿದರು. ಐದು ನಿಮಿಷದ ನಂತರ ತಮ್ಮ ಮುಂದೆ ನಿಂತ ಗೋಪಿಯ ಕೇಶಾಲಂಕಾರವನ್ನು ನೋಡಿ ನಗತೊಡಗಿದರು. 'ಇದೇನೋ ಅವತಾರ ನಿಂದು' ಎಂದರು. ಅವರ ಈ ಪ್ರತಿಕ್ರಿಯೆಗೆ ಗೋಪಿ ನಾಚಿಕೊಳ್ಳದೆ ತಲೆ ತಗ್ಗಿಸಿ ನಿಂತ. 'ಇದು ಕಮಲಹಾಸನ್ ಸ್ಟೈಲ್ ಕಣಮ್ಮ. ಚೆನ್ನಾಗಿಲ್ಲವಾ' ಎಂದ. 'ಹೋಗೋ ಹುಚ್ಚು ಮುಂಡೇದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ ಅಂತೆ ಚಂದ. ಬೇಗ ಅಂಗಡೀಗೆ ಹೋಗಿ ಈ ಸಾಮಾನನ್ನು ತಗೊಂಡ್ಬಾ.
ನಿಮ್ಮ ತಂದೆ ಬರೋದರೊಳಗೆ ಕ್ರಾಪ್ ಸರಿ ಮಾಡ್ಕೋ. ನಿನ್ನ ಈ
ಅವತಾರವನ್ನು ಕಂಡರೆ ಬೈದಾರು' ಎಂದು ಬುದ್ಧಿ ಹೇಳಿದರು. 'ಹೋಗಮ್ಮ
ನಿಮಗೆ ಒಳ್ಳೆ ಟೇಸ್ಟೇ ಇಲ್ಲ. ಅರ್ಧ ಘಂಟೆಯಿಂದ ಕಷ್ಟ ಪಟ್ಟಿದ್ದೇನೆ. ಎಷ್ಟು
ಚೆನ್ನಾಗಿದೆ ಹೇರ್ ಸ್ಟೈಲು. ನೀವು ಹಳೇ ಕಾಲದೋರು. ಹರಳೆಣ್ಣೆ ಹಾಕಿ
ಠೀಡಿ ಬಾಚಿಕೊಂಡು ಕೋತಿ ಮರಿ ತರ ಇದ್ರೆ ನಿಮಗೆ ಒಪ್ಪಿಗೆ ಆಗತ್ತೆ ಅಲ್ವಾ'
ಎಂದು ಸಿಡುಕಿ, ಚೀಲ ದುಡ್ಡು ತೆಗೆದುಕೊಂಡು ಹೊರಟ. ಅವನ
ಉತ್ಸಾಹಕ್ಕೆ ತಣ್ಣೀರನ್ನು ಎರಚಿದ್ದ ತಾಯಿಯ ಬಗ್ಗೆ ಅವನಿಗೆ ಕೋಪ
ಬಂದಿತ್ತು. ಅವನ ಗುಂಪಿನ ಗೆಳೆಯರೆಲ್ಲ 'ಅವನನ್ನು ಕಮಲಹಾಸನ್
ಜೂನಿಯರ್ ಅಂತನೇ ಕರೆಯೋದು. ಈಗ ಅವರಲ್ಲಿ ಯಾರಾದರೂ ಒಬ್ಬರು
ಸಿಕ್ಕಿ ತನ್ನ ಅಲಂಕಾರವನ್ನು ನೋಡುವಂತಾದರೆ ಎಷ್ಟು ಚೆನ್ನ ಎನಿಸಿತು. ಈ
ಆಲೋಚನೆ ಬಂದ ಕೂಡಲೇ, ಗೋಪಿ, ದಿಕ್ಕು ಬದಲಿಸಿ, ತನ್ನ ಸ್ನೇಹಿತ
ಪಾರ್ಥಿಬನ್ ಮನೆಯ ಕಡೆಗೆ ಹೆಜ್ಜೆ ಹಾಕಿದ. ಪಾರ್ಥಿಬನ್ ಕಮಲಹಾಸನ್‌ನ
ಫ್ಯಾನ್. ಅವನಿಗೆ ತನ್ನ ಹೇರ್ ಸ್ಟೈಲ್‌ನ ತೋರಿಸಿ ಶಭಾಷ್ ಎನ್ನಿಸಿ
ಕೊಳ್ಳಲು ತವಕ ಪಟ್ಟ. ಎದುರುಗಡೆಯಿಂದ ನಾಲ್ಕು ಹುಡುಗಿಯರು
ಬರುತ್ತಿರುವುದನ್ನು ಕಂಡು, ಕಮಲಹಾಸನ್ ರೀತಿಯಲ್ಲಿ ಎದೆಯುಬ್ಬಿಸಿ ನಡೆದ.
ತಥ್ ಈ ಹಾಳು ಬ್ಯಾಗ್ ಕೈಯಲ್ಲಿಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.
ಎರಡೂ ಕೈಗಳನ್ನು ಪ್ಯಾಂಟ್ ಜೇಬಿನಲ್ಲಿ ಇಳಿಬಿಟ್ಟು. ಸಾಫ್ಟ್ ಆಗಿ ಸಿಳ್ಳು
ಹಾಕುತ್ತಾ ನಡೆದಿದ್ದರೆ, ಈ ಹುಡುಗಿಯರು ಮೆಚ್ಚಿಕೊಳ್ಳುತ್ತಿದ್ದರು ಎಂದು
ಕೊಂಡ. ತನ್ನನ್ನು ನೋಡಿ, ಆ ಹುಡುಗಿಯರಲ್ಲಿ ಒಬ್ಬಳು ಕಿಸಕ್ಕನೆ
ನಕ್ಕಿದ್ದನ್ನು ಕಂಡು ಗೋಪಿ ಗಲಿಬಿಲಿಗೊಂಡ. ಆ ನಗುವಿನ ಅರ್ಥವೇನು ?
ಅದು ಮೆಚ್ಚುಗೆಯನ್ನು ಸೂಚಿಸಿತೆ ಅಥವಾ ಅಪಹಾಸ್ಯವೋ. ಒಟ್ಟಿನಲ್ಲಿ
ಒಂದು ಪ್ರತಿಕ್ರಿಯೆ ಬಂತಲ್ಲಾ ಅಷ್ಟೇ ಸಾಕು. ಅಮ್ಮ ಹೇಳಿದ ಹಾಗೆ ನಾನು
ಈ ಸ್ಟೈಲ್‌ನಲ್ಲಿ ವಿಚಿತ್ರವಾಗಿ ಕಾಣುತ್ತಿದ್ದೇನೆಯೋ. ಅಷ್ಟರಲ್ಲಿ ಪಾರ್ಥಿಬನ್
ಮನೆ ಸಿಕ್ಕಿತು. ಬಾಗಿಲಲ್ಲೇ ಆತ ನಿಂತಿದ್ದಾನೆ. ಗೋಪಿ ಸಂಭ್ರಮದಿಂದ
ಹೋಗಿ ಅವನ ಮುಂದೆ ನಿಂತ. 'ಹಲೋ ಕಮಲಹಾಸನ್ ಜೂನಿಯರ್...
ಓಹ್ ಗೋಪಿ ತುಂಬಾ ಚೆನ್ನಾಗಿ ಕಾಣ್ತೀಯಮ್ಮ, 'ನೀ ರೊಂಬ ನಲ್ಲ ಇರಕ್ಕೆ.
ಕಂಗ್ರಾಟ್ಸ್' ಎಂದು ಅವನು ನುಡಿದಾಗ, ಗೋಪಿಗೆ ತನ್ನ ಶ್ರಮವೆಲ್ಲಾ
ಸಾರ್ಥಕವಾಯಿತು ಎಂಬ ಧನ್ಯತೆ ಮೂಡಿ, ಖುಷಿ ಆಯಿತು.

Sri Vidyabharathi Book Centre, Sringeri

* * *

 CC-O. In Public Domain. Digitized by eGangotri

"ಏನೇ, ಇಷ್ಟು ಹೊತ್ತಿನಲ್ಲಿ ಎಲ್ಲಿಗೇ ಹೊರಟಿದ್ದೀಯಾ ?' ಗೌರಮ್ಮ ತಮ್ಮ ಹದಿನಾಲ್ಕು ವರ್ಷದ ಮಗಳು ವಿಜಿಯನ್ನು ಕೇಳಿದಳು. ಗೋಡೆಯ ಮೇಲಿನ ಗಡಿಯಾರ ಆ ಸಮಯಕ್ಕೆ ಸರಿಯಾಗಿ ಏಳು ಘಂಟೆ ಹೊಡೆಯಿತು. ಕತ್ತಲಾವರಿಸಿ, ಬೀದಿ ದೀಪಗಳು ಹತ್ತಿಕೊಂಡವು.

"ಪ್ರಶಾಂತಿ ಮನೇಗೆ ಹೋಗಿ ಬರ್ತೇನಮ್ಮ. ಒಟ್ಟಿಗೆ ಓದಿಕೊಳ್ಳೋಣ ಬಾರೆ ಅಂತ ಕರೆದಿದ್ದಾಳೆ." ಕಾಲಿಗೆ ಚಪ್ಪಲಿ ಹಾಕಿಕೊಳ್ಳುತ್ತಾ ಉತ್ತರಿಸಿದಳು ವಿಜಿ.

"ಒಳಕ್ಕೆ ನಡಿಯೇ, ಪ್ರಶಾಂತಿ ಮನೆಗೆ ಈ ಕತ್ತಲಲ್ಲಿ ಹೋಗ್ತಾಳಂತೆ. ಬುದ್ಧಿ ನೆಟ್ಟಗಿದೆ ತಾನೇ. ಪ್ರಶಾಂತಿ ಮನೆ ಹತ್ತಿರದಲ್ಲಿದೆ ಏನು ? ಇಲ್ಲೇ ಕುಕ್ಕರಿಸಿ ಓದ್ಕೋ" ಗೌರಮ್ಮ ಸಿಡುಕಿದರು.

"ಯಾಕಮ್ಮಾ ಹೋಗಬಾರದು. ಏನಾಗಿದೆ ನಿನಗೆ ಈ ಹೊತ್ತು. ಪ್ರಶಾಂತಿ ಮನೆ ನನಗೇನು ಹೊಸದೇ. ಎಷ್ಟು ಸಲ ಹೋಗಿಲ್ಲ. ಬರ್ತೀನಿ ಅಂತ ಹೇಳಿಟ್ಟಿದೀನಿ. ಕಾಯ್ತಿರ್ತಾಳೆ, ನಾನು ಹೋಗ್ಲೇ ಬೇಕು" ವಿಜಿ ತುಟಿಯುಬ್ಬಿಸಿದಳು.

"ಯಾಕೇ ಖರ್ಚಿಗೆ ಬೇಕೇನೇ. ನೀನಿನ್ನೂ ಎಳೇ ಹುಡುಗಿ ಅಂತ ತಿಳಿದ್ಕೊಂಡಿದ್ದೀಯಾ. ದೊಡ್ಡವಳಾದಿ ಹಸೇ ಮ್ಯೆ. ಈ ಮುಸ್ಸಂಜೆ ಹೊತ್ನಲ್ಲಿ ಹೊರಗಡೆ ಹೋದರೆ ಕೆಟ್ಟದಾದೀತು. ನೋಡಿದವರು ಏನೆಂದಾರು. ಹೋಗು ಮರ್ಯಾದೆಯಿಂದ ರೂಮ್ನಲ್ಲಿ ಕುಳಿತು ಓದಿಕೋ. ಆಗೋಲ್ಲ ಅಂದೆಯೋ, ನಿಮ್ಮ ತಂದೆಗೆ ಹೇಳಿ, ಸ್ಕೂಲ್ ಬಿಡಿಸಿ ಬಿಡ್ತೇನೆ. ನೀನು ಓದಿ, ಡಿಗ್ರಿ ತಗೊಂಡು, ಈ ಪ್ರಪಂಚವನ್ನು ಆಳಬೇಕಾದ್ದಿಲ್ಲ. ಲಕ್ಷಣವಾಗಿ ಮನೆಯೊಳಗಿದ್ದುಕೊಂಡು ಅಡುಗೆ, ಹಾಡು, ಹಸೆ ಕಲಿತ್ಕೋ" ಎಂದು ಗೌರಮ್ಮ ಆಜ್ಞಾಪಿಸಿದರು.

"ಥೂ ಹೋಗಮ್ಮ. ಹಳೇ ಮುದಿಗೊಡ್ಡಿನ ತರಹ ಮಾತಾಡ್ತಿದೀಯ. ದೊಡ್ಡವಳಾದ ತಪ್ಪಿಗೆ, ಜೈಲಿನ ಖೈದಿ ತರ, ಮನೆಯೊಳಗೆ ಬಿದ್ದಿರೋದಕ್ಕೆ ನಾನು ತಯಾರಿಲ್ಲ. ನಾನು ಸ್ಕೂಲಿಗೂ ಹೋಗ್ತೀನಿ, ನಂತರ ಕಾಲೇಜಿಗೂ ಹೋಗ್ತೇನೆ, ನನ್ನನ್ನು ನೀವು ತಡೆಯೋದಕ್ಕೆ ಸಾಧ್ಯವಿಲ್ಲ. ನನ್ನ ಸ್ನೇಹಿತೆಯರೂ ದೊಡ್ಡವರಾಗಿದ್ದಾರೆ. ಅವರ ಅಮ್ಮಂದಿರು ನಿನ್ನ ತರಾ ಆಡ್ತಿಲ್ಲ. ತಿಳಿಕೋ" ವಿಜಿ ಪ್ರತಿಭಟಿಸಿದಳು.

"ಯಾಕೋ ನಿನ್ನ ನಾಲಗೆ ಉದ್ದವಾಗ್ತಾ ಇದೆ ವಿಜಿ. ಇದಕ್ಕೆ ಕಾರಣ ನಿನ್ನ ತಂದೆ. ಅವರು ನಿನಗೆ ಹೆಚ್ಚು ಸ್ವಾತಂತ್ರ್ಯ ಕೊಟ್ಟು ಮುದ್ದು ಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಳು ಮಾಡಿಬಿಟ್ರು. ಈ ಹೊತ್ತು ಅವರು ಬರಲಿ. ನಾನು ತೀರ್ಮಾನಮಾಡೇ ಬಿಡ್ತೀನಿ. ಬೆಳೆದ ಮಗಳು ಏನೂ ಅಚಾತುರ್ಯ ಮಾಡಿಕೊಳ್ಳದೆ ಮಾನವಾಗಿರ ಬೇಕೂಂದ್ರೆ, ಅವಳನ್ನು ಸ್ಕೂಲಿಗೆ ಕಳುಹಿಸಬೇಡಿ ಅಂತ ಹೇಳ್ತೀನಿ."

"ನಾನು ನಿನ್ನ ಮಾತು ಕೇಳೋವಳಲ್ಲ, ನನ್ನ ಜವಾಬ್ದಾರಿ ನನಗೆ ಗೊತ್ತಿದೆ. ಸ್ನೇಹಿತೆ ಮನೆಗೆ ಹೋದಾಕ್ಷಣಕ್ಕೆ ನಾನು ಕೆಟ್ಹೋಗ್ತೀನಾ? ಪ್ರಶಾಂತಿ ಮನೇಲಿ ಹುಲಿ ಕರಡಿಗಳಿಲ್ಲ, ನನ್ನನ್ನು ತಿಂದು ಹಾಕ್ಬಿಡೋಕೆ, ಈ ಮನೆಗಿಂತ, ಆ ಮನೇವರೇ ನನ್ನ ಹೆಚ್ಚು ಪ್ರೀತಿವಿಶ್ವಾಸದಿಂದ ನೋಡ್ತಾರೆ. ಈಗ ನಾನು ಹೋಗೋಳೆ..." ಎಂದು ವಿಜಿ ಹೊರಟೇ ಬಿಟ್ಟಳು. ಅವಳ ಈ ಪ್ರತಿಭಟನೆ ಮತ್ತು ವರ್ತನೆಯಿಂದ ಗೌರಮ್ಮ ಮೂಕರಾದರು. ತಕ್ಷಣ ಏನು ಮಾಡಬೇಕೆಂದೇ ಹೊಳೆಯಲಿಲ್ಲ. ತಾವು ಹೆತ್ತು ಬೆಳೆಸಿದ ಮಗಳು ಈಗ ತಮ್ಮ ಮಾತಿಗೆ ಸ್ವಲ್ಪವೂ ಗೌರವ ಕೊಡದೆ, ಧಿಕ್ಕರಿಸಿ ಹೊರಟು ಹೋದದ್ದನ್ನು ಕಂಡು ಅವರಿಗೆ ಅಳು ಬಂದು ಬಿಟ್ಟಿತು. 'ದೇವರೇ, ನಾನು ಹೇಳಿದ್ದರಲ್ಲಿ ಏನು ತಪ್ಪಿದೆ. ಮೈ ನೆರೆದ ಹುಡುಗಿ, ಕತ್ತಲಲ್ಲಿ ಒಂಟಿಯಾಗಿ ಹೋಗುವುದು ಅಪಾಯವಲ್ಲವೇ. ಇಷ್ಟನ್ನು ಅವಳು ಅರ್ಥಮಾಡಿಕೊಳ್ಳ ಲಿಲ್ಲವಲ್ಲ. ಇನ್ನೇನು ಗತಿ, ಮುಂದೆ ಇವಳು ತಮ್ಮ ಕೈಗೆ ಸಿಗುತ್ತಾಳೆಯೇ. ಏನಾದರೂ ಹೆಚ್ಚು ಕಡಿಮೆಯಾದರೆ, ತಾವಲ್ಲವೇ ಕಷ್ಟವನ್ನು ಅನುಭವಿಸು ವವರು. ಭಗವಂತಾ ಇವಳಿಗೆ ಒಳ್ಳೆಯ ಬುದ್ಧಿ ಕೊಡಪ್ಪಾ' ಎಂದು ಪ್ರಾರ್ಥಿಸಿದರು.

* * *

"ಅಬ್ಬಬ್ಬಬ್ಬಾ... ನನ್ನ ಕೈಲಿ ಆಗೋದಿಲ್ಲಪ್ಪ ಸಾಕು, ಈ ಮೇಷ್ಟರ ಕೆಲಸವೂ ಸಾಕು, ಈ ಘಟಿಂಗರ ಸಹವಾಸವೂ ಸಾಕು. ರಾಜೀನಾಮೆ ಕೊಟ್ಟು ಹೋಗಿಬಿಡ್ತೀನಿ" ತಮ್ಮ ತಲೆಯ ಮೇಲಿನ ಟೋಪಿಯನ್ನು ಮೇಜಿನ ಮೇಲಿಟ್ಟು ಕರ್ಚೀಫಿನಿಂದ ಮುಖವನ್ನು ಒರೆಸಿಕೊಂಡು, ನಿಟ್ಟುಸಿರು ಬಿಟ್ಟರು ಕೇಶವ ಅಯ್ಯಂಗಾರ್ಯರು.

"ಏನಾಯಿತು ಅಯ್ಯಂಗಾರ್ರೇ ಏಕೆ ಇಷ್ಟೊಂದು ಅಸಮಾಧಾನ, ಕೋಪ?" ರಾಜಶೇಖರಯ್ಯ ವಿಚಾರಿಸಿದರು.

"ಇನ್ನೂ ಏನೇನಾಗಬೇಕು ರಾಜಶೇಖರಯ್ಯನವರೇ, ಈಗಿನ ಕಾಲದ ಹುಡುಗರು ಎಷ್ಟು ಕೆಟ್ಟು ಹೋಗಿದ್ದಾರೆಂದರೆ ಅದನ್ನು ವರ್ಣಿಸೋದಕ್ಕೆ ಆ ಆದಿಶೇಷನಿಂದಲೂ ಸಾಧ್ಯವಿಲ್ಲ. ತಂದೆ ತಾಯಿಗಳ ಅಕ್ಕರೆಯಲ್ಲಿ ಬೆಳೆದವರಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಮಕ್ಕಳು. ಬಾಲವಿಲ್ಲದ ಕಪಿಗಳು ರಾಕ್ಷಸ ಸಂತಾನ ಅಂತೀನಿ. ಗುರುಹಿರಿಯ ರೆಂದರೆ ಇನಿತೂ ಭಯವಿಲ್ಲ, ಭಕ್ತಿ ಇಲ್ಲ. ಇವರೇನು ಇಲ್ಲಿಗೆ ವಿದ್ಯೆ ಕಲಿಯಲು ಬರುತ್ತಾರೋ ಇಲ್ಲಾ ನಮ್ಮನ್ನು ಹಿಂಸೆ ಮಾಡಿ ಗೋಳಾಡಿಸಲು ಬರುತ್ತಾರೋ ಅವರೇ ಹೇಳಬೇಕು. ಯಾವ ಜನ್ಮದಲ್ಲಿ ಏನು ಪಾಪ ಕರ್ಮ ಮಾಡಿ, ಈ ಜನ್ಮ ದಲ್ಲಿ ನಾನೂ ನೀವೂ ಮೇಷ್ಟರಾದೆವೋ ತಿಳಿಯದು. ಪ್ರಾರಬ್ಧ ಕರ್ಮ ಅನುಭವಿಸಬೇಕು. ಈ ಕೆಲಸ ಬಿಟ್ಟರೆ, ಅನ್ನಕ್ಕೆ ಗತಿ ಇಲ್ಲವಾಗಿ, ಬಾಯಿ ಮುಚ್ಚಿಕೊಂಡು ಸಹಿಸಬೇಕಾಗಿದೆ. ಈ ಹೈಕಳು ಹೀಗೆ ಮಾಡಬಹುದೇ ನೀವೇ ಹೇಳಿ, ಅಯ್ಯಂಗಾರ್ಯರು ತಮ್ಮ ಅಸಮಾಧಾನವನ್ನು ತೋಡಿ ಕೊಂಡರು. "ಏನು ಮಾಡಿದರು ಹೇಳಿ ಅಯ್ಯಂಗಾರ್ರೇ" ವಿಜ್ಞಾನದ ಟೀಚರ್ ವಿಷ್ಣುಮೂರ್ತಿ ಸಹಾನುಭೂತಿಯಿಂದ ವಿಚಾರಿಸಿದರು.

"ನಾನು ಬೋರ್ಡ್ ಮೇಲೆ ಪಾಠದ ಮುಖ್ಯಾಂಶಗಳನ್ನು ಬರೀತಾ ಇದ್ದೇನೆ. ಈ ಮಂಗಗಳು ಹಿಂದಿನ ಬೆಂಚಿನ ಮೇಲೆ ಪಟಾಕಿ ಹಚ್ಚಿದರು. ಆ ಶಬ್ದ ಕೇಳಿ ಗಾಬರಿಯಾಗಿ ಮುಂದಕ್ಕೆ ತಿರುಗುವಾಗ ಆಯ ತಪ್ಪಿ ಬಿದ್ದೆ. ಎಡ ಪೃಷ್ಠಕ್ಕೆ ಬಲವಾದ ಏಟು ಬಿದ್ದಿದೆ. ನಾನು ನೋವಿನಿಂದ ನರಳಿದರೆ, ಈ ದಂಡ ಪಿಂಡ ಮುಂಡೇವು ಹೋ ಎಂದು ನಗುತ್ತಿವೆ. ನನಗೆ ಸಿಟ್ಟು ಬಂದು, ಹಾಜರಿಪುಸ್ತಕ ತರಿಸಿ ಪ್ರತಿಯೊಬ್ಬನಿಗೂ ಒಂದು ವಾರ ಆಬ್ಸೆಂಟ್ ಮಾರ್ಕ್ ಮಾಡಿದ್ದೇನೆ. ನೀವು ಬಂದು ಕ್ಷಮೆ ಕೇಳುವತನಕ ನಾನು ನಿಮಗೆ ಪಾಠ ಮಾಡೋಲ್ಲ ಅಂತ ಹೇಳಿ ಬಂದಿದ್ದೇನೆ..."

ನಗು ಬರುತ್ತಿದ್ದರೂ ತಡೆದುಕೊಂಡ ರಾಜಶೇಖರಯ್ಯ "ಅಯ್ಯಂಗಾರ್ರೇ,ಹುಡುಗರು ಕ್ಷಮೆ ಕೇಳಿದರೇ" ಎಂದರು.

"ಎಲ್ಲಿ ಕೇಳುತ್ತಾವೆ. ಗಂಡ ಸತ್ತ ಮುಂಡೆಯರಂತೆ ತಲೆ ತಗ್ಗಿಸಿ ನಿಂತಿದ್ದುವು..."ಅಷ್ಟರಲ್ಲಿ ಸ್ಟಾಫ್‌ರೂಮಿನ ಬಾಗಿಲಲ್ಲಿ ಹತ್ತಾರು ವಿದ್ಯಾರ್ಥಿ ಗಳು ಬಂದು ನಿಂತಿದ್ದರು. ಉಪಾಧ್ಯಾಯರುಗಳನ್ನು ಕಂಡು ತಲೆ ತಗ್ಗಿ ಸಿದರು.

"ನೀವೆಲ್ಲ ಎಂಟನೇ ತರಗತಿ ಬಿ. ಸೆಕ್ಷನ್‌ನವರಲ್ಲವೇ" ರಾಜಶೇಖರಯ್ಯ ವಿಚಾರಿಸಿದರು.

"ಹೌದು ಸಾರ್" ಏಕ ಸ್ವರದ ಉತ್ತರ ಬಂತು.

"ನೀವೇನಾ ಕ್ಲಾಸಿನಲ್ಲಿ ಪಟಾಕಿ ಹೊಡೆದದ್ದು !"

"ಹೌದು ಸಾರ್ ತಪ್ಪು ಮಾಡಿದೆವು. ಕ್ಷಮೆ ಕೇಳಲು ಬಂದಿದ್ದೇವೆ." ಎಂದ ಅವರಲ್ಲಿ ಒಬ್ಬ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಮಾಡಬಾರದ್ದನ್ನು ಮಾಡಿ, ಈಗ ಬಂದಿದ್ದಾರೆ ಕ್ಷಮೆ ಕೇಳೋದಿಕ್ಕೆ ನಾಚಿಕೆಯಾಗುವುದಿಲ್ಲವೇ ನಿಮಗೆ!" ಅಯ್ಯಂಗಾರ್ಯರು ಗುಡುಗಿದರು.

"ಸರ್, ನಿಮಗೆ ತುಂಬಾ ಪೆಟ್ಟಾಯಿತೇ, ಇನ್ನೂ ನೋವಿದೆಯಾ. ನೀವು ಬೀಳಲಿ, ನೋವು ಮಾಡಿಕೊಳ್ಳಲಿ ಎಂದು ನಾವು ಆಸೆಪಟ್ಟಿರಲಿಲ್ಲ. ನಮ್ಮ ತಪ್ಪನ್ನು ದಯವಿಟ್ಟು ಕ್ಷಮಿಸಿಬಿಡಿ ಸಾರ್. ನಮ್ಮದು ಹುಡುಗು ಬುದ್ಧಿ. ಸ್ವಲ್ಪ ತಮಾಷೆ ಮಾಡೋಣ ಎನಿಸಿ, ಪಟಾಕಿ ಹೊಡೆದೆವು. ಇನ್ನೆಂದಿಗೂ ಈ ರೀತಿ ಮಾಡೆವು. ಕ್ಷಮಿಸಿ ಸಾರ್. ನೀವು ನಮಗೆ ಬೇಕಾದ ಶಿಕ್ಷೆ ಕೊಡಿ. ಆದರೆ ಕ್ಲಾಸಿಗೆ ಬಂದು ಪಾಠ ಮಾಡಿ ಸಾರ್."

"ಆಯಿತು ಹೋಗಿ ಅಯ್ಯಂಗಾರ್ಯರು ನಿಮ್ಮನ್ನು ಕ್ಷಮಿಸುತ್ತಾರೆ. ಬಂದು ಪಾಠಮಾಡುತ್ತಾರೆ. ಯಾವ ಮೇಷ್ಟ್ರಿಗೂ ನೀವು ಈ ರೀತಿಯ ತಮಾಷೆ ಮಾಡಬೇಡಿ. ತಿಳಿಯಿತಾ" ಎಂದು ರಾಜಶೇಖರಯ್ಯ ಅವರನ್ನು ಕಳುಹಿಸಿದರು.

"ಈ ಹುಡುಗರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆಯಲ್ಲಾ ರಾಜಶೇಖರಯ್ಯ, ಒಮ್ಮೆ ತೀಟೆ ಮಾಡಿ,ತಮಾಷೆ ಮಾಡಿ ನಮ್ಮನ್ನು ಗೋಳಾಡಿಸುತ್ತಾರೆ. ಇನ್ನೊಮ್ಮೆ ಮನೆ ಮಂದಿಯ ಹಾಗೆ ಕಕ್ಕುಲತೆಯಿಂದ ಪ್ರೀತಿ, ಮಮತೆಯನ್ನು ತೋರಿಸುತ್ತಾರೆ. ಶಿಕ್ಷಿಸಿ, ಹೊಡೆದೋಡಿಸಿದರೂ, ಸಾಕಿದ ನಾಯಂತೆ, ಬಾಲ ಅಲ್ಲಾಡಿಸುತ್ತಾ ಮತ್ತೆ ಹತ್ತಿರ ಬರುತ್ತಾರೆ. ಇದೇನು ಮಾಯೆ" ಅಯ್ಯಂಗಾರ್ರು ಉದ್ಗರಿಸಿದರು.

"ಹೌದು, ಅಯ್ಯಂಗಾರ್ಯರೇ, ಈ ವಿಪರ್ಯಾಸಕ್ಕೆ ಕಾರಣ ಅವರಲ್ಲ. ಅವರ ವಯಸ್ಸು, ಹರೆಯದ ಮನಸ್ಸು, ಮರ್ಕಟ ಮನಸ್ಸು" ಎಂದರು ರಾಜಶೇಖರಯ್ಯ.

* * *

"ಇದೇನು ಜಾನಕಮ್ಮ, ಇರೋ ಒಬ್ಬ ಮಗಳ ಮೇಲೆ ರೇಗಾಡ್ತಾ ಇದ್ದೀರಿ" ಎಂದು ಮನೆಯೊಳಕ್ಕೆ ಬಂದ ರಾಜಮ್ಮ ಮಾತು ತೆಗೆದರು.

"ಬನ್ನಿ ರಾಜಮ್ಮ ಏಕೆ, ಇತ್ತೀಚೆಗೆ ನೀವು ನಮ್ಮ ಮನೆಗೆ ಬರೋದೇ ಅಪರೂಪವಾಗೋಯ್ತಲ್ಲ. ಬನ್ನಿ ಕುಳಿತುಕೊಳ್ಳಿ...ಹೋಗೇ...ರಾಜಮ್ಮ ನೋರಿಗೆ ಒಂದು ಲೋಟ ಮಜ್ಜಿಗೆ ಮಾಡಿ ತಗೊಂಡು ಬಾ. ಇದನ್ನೂ ನಾನು ಬಾಯಿ ಬಿಟ್ಟು ಹೇಳ್ಬೇಕೆ."

"ಏನೂ ಬೇಡ ಜಾನಕಮ್ಮ, ಈಗ ತಾನೇ ಊಟ ಮುಗಿಸಿಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಬರ್ತಿದ್ದೇನೆ. ರಾಧಾ ಏನೂ ಮಾಡೋದಕ್ಕೆ ಹೋಗ್ಬೇಡ ಬಾ ಕೂತುಕೋ... ಏನು ತಪ್ಪು ಮಾಡಿ ನಿನ್ನ ತಾಯಿ ಕೈಲಿ ಬೈಸಿಕೊಂಡೆ !

"ನಾನೇನೂ ಮಾಡ್ಲಿಲ್ಲ ಆಂಟಿ, ಅಮ್ಮ ಸುಮ್ನೆ ನನ್ನ ಬೈತಿರ್ತಾರೆ" ರಾಧ ದೂರಿದಳು.

"ಚಿತ್ರಾಂಗಿಣಿ ಕಣೆ ನೀನು. ನೀನು ಏನೂ ಮಾಡ್ದೆ ನಾನು ನಿನ್ನನ್ನು ಬೈತಿರ್ತೀನಲ್ಲವೇ ? ನೋಡಿ ರಾಜಮ್ಮ ಇವಳ ಅವತಾರನ್ನ ಸ್ವಲ್ಪ ಕಣ್ಣು ಬಿಟ್ಟು ನೋಡಿ. ನಾಟಕದವಳ ಹಾಗೆ ಮುಂದಲೆ ಕೂದಲನ್ನು ಕತ್ತರಿಸಿ ಕೊಂಡಿರೋ ಚೆಂದ ನೋಡಿ. ಅವಳ ಹುಬ್ಬು ನೋಡಿ. ನಾಚಿಕೆ ಇಲ್ದೆ ಗಂಡಸರ ಹಾಗೆ ಶೇವ್ ಮಾಡಿಕೊಂಡಿದ್ದಾಳೆ...ಎಲ್ಲೋ ಕೈ ತೋರ್ಸೆ ಅಚ್ಚು ಕಟ್ಟಾಗಿ ಗಾಜಿನ ಬಳೆಗಳನ್ನು ಹಾಕ್ಕೋ ಅಂದರೆ, ಲಂಬಾಣಿಗಳ ತರ ಪ್ಲಾಸ್ಟಿಕ್ ಕಡಗವನ್ನು ತಗಲು ಹಾಕ್ಕೊಂಡಿದ್ದಾಳೆ. ಇವೆಲ್ಲ ಯಾವ ದೇವರಿಗೆ ಪ್ರೀತಿ ಅಂತೀನಿ. ನೀವೇ ಹೇಳಿ'.

"ಹೋಗಲಿ ಬಿಡಿ ಜಾನಕಮ್ಮ. ಚಿಕ್ಕವಯಸ್ಸು ಏನೇನೋ ಆಸೆಗಳಿರುತ್ವೆ ಇದೆಲ್ಲಾ ಈಗಿನ ಫ್ಯಾಷನ್, ಮಾಡಿಕೊಂಡು ಸಂತೋಷ ಪಡ್ಲಿ. ಮದುವೆ ಆದ ಮೇಲೆ ಅತ್ತೆ ಮನೆಯಲ್ಲಿ ಗರತಿ ಗೌರಮ್ಮನ ಹಾಗೆ ಇರೋದು ಮುಂದೆ ಇದ್ದೇ ಇರುತ್ತಲ್ಲ."

"ಏನು ಚಿಕ್ಕ ವಯಸ್ಸು ರಾಜಮ್ಮ, ಈ ಯುಗಾದಿಗೆ ಹದಿನಾರು ವರ್ಷ ತುಂಬಿತಲ್ಲ, ಮುಂದಿನ ವರ್ಷ ಹೆಚ್ಚೆಂದರೆ ಇನ್ನೆರಡು ವರ್ಷದಲ್ಲಿ ಇವಳ ಮದುವೆ ಮಾಡಬೇಕಲ್ಲ. ಸರಿಯಾದ ಗಂಡನ್ನು ಈಗಲಿಂದಲೇ ಹುಡುಕ ಬೇಕಲ್ಲ, ನಮ್ಮದು ಸಂಪ್ರದಾಯಸ್ಥ ಮನೆತನ. ಅವಳು ಹೀಗೆ ಫ್ಯಾಶನ್ ಮಾಡ್ಕೊಂಡು ತಿರುಗಿದರೆ, ನಮ್ಮ ಜನ ಏನೆಂದಾರು? ಇವಳನ್ನು ಸೊಸೆ ಮಾಡ್ಕೊಳ್ಳೋದಿಕ್ಕೆ ಯಾರು ಮುಂದೆ ಬರ್ತಾರೆ ?"

'ಬೇಡ, ನನ್ನನ್ನು ಯಾರೂ ಮದುವೆ ಮಾಡ್ಕೊಳ್ಳೋದು ಬೇಡ, ಆಂಟಿ, ನಾನು ಮದುವೆ ಮಾಡ್ಕೊಳ್ಳದೆ ಹಾಗೇ ಇದ್ದು ಬಿಡ್ತೇನೆ ಅಷ್ಟೇ' ರಾಧಾ ಸಿಡುಕಿದಳು.

"ಬಿಡ್ತು ಅನ್ನು ರಾಧಾ, ನಿನ್ನಂತಹ ರೂಪವತಿ ಹುಡುಗೀನ ಮದುವೆ ಯಾಗೋದಕ್ಕೆ ಗಂಡುಗಳು ಕ್ಯೂ ನಿಲ್ತಾರೆ. ನೀನು ನಿನ್ನ ಮನಸ್ಸು ಇಷ್ಟ ಪಟ್ಟವನನ್ನು ಆರಿಸಿ ಮದುವೆಯಾಗುವಂತೆ. ಆಮೇಲೆ ನನ್ನನ್ನು, ನಿನ್ನ ತಂದೆತಾಯಿಯನ್ನು ಮರೆತುಬಿಡ್ತೀಯೋ" ರಾಜಮ್ಮ ಹಾಸ್ಯಮಾಡಿದರು.

Sri Vidyabharathi Book Centre, Sringeri

"ಹೋಗಿ ಆಂಟಿ. ನೀವು ಯಾವಾಗಲೂ ಹೀಗೆ 'ಏನಾದರೂ ಒಂದು

CC-O. In Public Domain. Digitized by eGangotri

ತಮಾಷೆ ಮಾತನ್ನು ಹೇಳ್ತಿರ್ತೀರಾ. ನಾನು ಎಲ್ಲೇ 'ಇರಲಿ ನಿಮ್ಮನ್ನೆಲ್ಲಾ ಖಂಡಿತ ಮರೆಯೋಲ್ಲ. ಈ ಅಮ್ಮನ್ನಂತೂ ಹೇಗೆ ಮರೆಯೋಕೆ ಸಾಧ್ಯ. ಎಷ್ಟು ಕಿರಿ ಕಿರಿ ಮಾಡ್ತಾಳೆ. ನನ್ನ ಅಲಂಕಾರ ನೋಡೇ ಈ ರೀತಿ ಆಡೋಳು, ನನ್ನ ಸ್ನೇಹಿತರ ಅಲಂಕಾರ ನೋಡಿದ್ರೆ ಕುಣಿದಾಡ್ಬಿಡ್ತಾಳೆ. ನಾನಾದರೂ ಲಕ್ಷಣವಾಗಿ ಸೀರೆ ಉಡ್ತೀನೆ. ಅವರು ಶರ್ಟು, ಪ್ಯಾಂಟು ಹಾಕ್ಕೊಳ್ತಾರೆ. ಬಾಬ್ ಕಟ್, ಬಾಯ್ ಕಟ್ ಮಾಡಿಸ್ಕೊಂಡಿದಾರೆ. ಕಿವಿಗೆ, ಮೂಗಿಗೆ ಯಾವ ಆಭರಣವೂ ಇಲ್ಲ. ಅವೆಲ್ಲ ಗುಲಾಮಗಿರಿಯ, ಮೂಢ ನಂಬಿಕೆಗಳ ಸಂಕೇತ ಅಂತಾರೆ. ನನ್ನನ್ನೇ ಗರತಿ ಗೌರಮ್ಮನ ತರ ಇದ್ದೀಯಾ ಅಂತ ಚುಡಾಯಿಸ್ತಾರೆ. ಅಮ್ಮನಿಗೆ ಇದೆಲ್ಲ ಅರ್ಥವೇ ಆಗೋಲ್ಲ. 1940ನೇ ಇಸವೀನಲ್ಲಿ ಅವರು ಹೇಗಿದ್ದರೋ, ಈಗ 1986ರಲ್ಲಿ ನನ್ನನ್ನು ಹಾಗೇ ಇರು ಅಂತ ಹೇಳ್ತಾರಲ್ಲ ಇದು ನ್ಯಾಯವಾ ? ನೀವೇ ಹೇಳಿ ಆಂಟಿ."

"ಅಲ್ಲಾ ರಾಜಮ್ಮ. ಕಾಲ ಬದಲಾಯಿತು ಅಂದರೆ, ರೀತಿ ನೀತಿಗಳು ಬದಲಾಗ್ತಾವಾ ? ಹೆಣ್ಣಾಗಿ ನಾನು ಗಂಡಸಿನಂತೆ ಇರ್ತೀನೆ, ಅವನ ಹಾಗೆ ಬಟ್ಟೆ ಹಾಕಿಕೊಳ್ತೀನೆ ಅಂದ್ರೆ ಅದು ಸರೀನಾ. ಹೆಣ್ಣಿಗೆ ಸೀರೆಯೇ ಲಕ್ಷಣ. ಉದ್ದನೆ ಕೂದಲನ್ನು ಜಡೆ ಹಾಕಿ, ಗಂಟು ಕಟ್ಟಿ ಮುಡಿತುಂಬ ಹೂಮುಡಿದು ಕೊಂಡು, ಕೈ ತುಂಬ ಬಳೆ ತೊಟ್ಟು ನಿಂತರೆ, ದೃಷ್ಟಿ ನಿವಾರಿಸಬೇಕಾಗುತ್ತೆ. ಅದು ಬಿಟ್ಟು ಕೂದಲು ಕತ್ತರಿಸಿಕೊಂಡು, ಬರಿ ಮೂಗು, ಬರಿಕತ್ತು, ಬರಿಗೈ ಯಲ್ಲಿ, ತಿರುಪೆಯವರ ಹಾಗೆ ಇಜಾರ ತೊಟ್ಟುಕೊಂಡರೆ, ನೋಡೋದಿಕ್ಕೆ ಅಸಹ್ಯ ಆಗತ್ತಪ್ಪ. ಈಗಿನ ಕಾಲದ ಹುಡುಗಿಯರಿಗೆ ಆ ದೇವರೇ ಸರಿಯಾದ ಬುದ್ಧಿ ಕೊಡಬೇಕು. ನೋಡಮ್ಮ ರಾಧ. ನೀನು ಗಂಡನ ಮನೆಗೆ ಹೋದ ಮೇಲೆ, ಏನು ಬೇಕಾದರೂ ಮಾಡಿಕೋ. ನಿನ್ನ ಗಂಡನ್ನ ಒಪ್ಪಿಸಿ ಯಾವ ರೀತಿ ಬೇಕಾದರೂ ಅಲಂಕಾರ ಮಾಡ್ಕೋ, ಆದರೆ ನಮ್ಮ ಮನೇಲಿರೋ ತನಕ, ನಿನ್ನ ಹೆತ್ತು ಸಾಕಿದ ನಮ್ಮ ಮಾತಿಗೆ ಸ್ವಲ್ಪ ಬೆಲೆ ಕೊಟ್ಟು, ಸಂಪ್ರ ದಾಯದ ರೀತಿಯಲ್ಲಿ ನಡಕೋ ತಿಳೀತಾ" ಎಂದರು.

"ಕೇಳಿದ್ರಾ ಆಂಟಿ. ಅಮ್ಮ ಹೇಳೋ ಮಾತನ್ನ, ಹಳೇ ಸಂಪ್ರದಾಯ ಗಳ ಕಂದಾಚಾರಗಳ ಸರಪಣಿಗಳಿಂದ ನನ್ನಂತವರನ್ನು ಕಟ್ಟಿ ಹಾಕಿ, ನಮ್ಮ ಆಸೆ, ಆಕಾಂಕ್ಷೆಗಳನ್ನು ಬಲಿಹಾಕುವ ಹಿರಿಯರಿಗೆ ಧಿಕ್ಕಾರ. ಕಾಲಕ್ಕೆ ತಕ್ಕಂತೆ ಬದಲಾಗಬೇಕೆಂಬ ಕಾಮನ್‌ಸೆನ್ಸ್ ದೊಡ್ಡವರಿಗಿಲ್ಲ. ಇದು ನಮ್ಮ ದೌರ್ಭಾಗ್ಯ" ರಾಧಾ ಆವೇಶದಿಂದ ನುಡಿದಳು.

* * *

Sri Vidyabharathi Book Centre, Sringeri

CC-O. In Public Domain. Digitized by eGangotri

"ಈ ದೊಡ್ಡವರು ಹಿಪೋಕ್ರೈಟ್‌ಗಳು ರವಿ. ಯಾವಾಗ್ಲೂ ಅವರು ಹೇಳುವುದೊಂದು, ಮಾಡುವುದು ಮತ್ತೊಂದು. ಅವರಿಂದ ನಮಗೆ ಮಾರ್ಗ ದರ್ಶನ ಸಿಗುವುದಿಲ್ಲ. ನಾವು ಬಂಡೇಳಬೇಕು. ನಮ್ಮ ಮಾರ್ಗವನ್ನು ನಾವೇ ಹುಡುಕಿಕೊಳ್ಳಬೇಕು."

"ಹೌದು ರಮ, ನೀನು ಹೇಳುವುದು ನೂರಕ್ಕೆ ನೂರು ನಿಜ. ದೊಡ್ಡವರು ಚಿಕ್ಕವರಿಗೆ ಬಂಡಿಗಟ್ಟಳೆ ಉಪದೇಶ ಮಾಡ್ತಾರೆಯೇ ಹೊರತು, ತಾವು ಉಪದೇಶ ಮಾಡಿದ್ದರಲ್ಲಿ ಹೆಚ್ಚಿನವನ್ನು ಪಾಲಿಸೋದೇ ಇಲ್ಲ. ಮಾತಿನಲ್ಲಿ ಸತ್ಯ, ಪ್ರಾಮಾಣಿಕತೆ, ಪ್ರೀತಿ, ಕರುಣೆ ಬಗ್ಗೆ ಧಾರಾಳವಾಗಿಹೇಳೋವರು, ಕೃತಿಯಲ್ಲಿ ಬರೀ ಸುಳ್ಳು, ಮೋಸ, ವಂಚನೆ, ಕೋಪ. ದ್ವೇಷವನ್ನೇ ತೋರಿಸ್ತಾರೆ. ಇವರನ್ನು ನಾವು ನಂಬಬಾರದು."

"ನಮ್ಮ ತಂದೆ, ಫ್ಯಾಕ್ಟರೀನಲ್ಲಿ ಮೇನೇಜರ್. ನಿನ್ನೆ ಒಂದು ಫಂಕ್ಷನ್ ಇತ್ತು. ಅವರು ಕಾರ್ಮಿಕರನ್ನು ಕುರಿತು ಭಾಷಣ ಬಿಗಿದರು. ಪ್ರಾಮಾಣಿಕರಾಗಿರಿ. ಫ್ಯಾಕ್ಟರಿ ನಿಮ್ಮ ತಾಯಿ ಇದ್ದ ಹಾಗೆ. ಅದಕ್ಕೆ ವಂಚನೆ ಮಾಡಬೇಡಿ. ಅದರ ಉಳಿವೇ ನಿಮ್ಮ ಉಳಿವು. ಫ್ಯಾಕ್ಟರಿ ಮುಂದುವರೆದು ಅಭಿವೃದ್ಧಿ ಹೊಂದಿದರೆ ನಿಮ್ಮ ಕಲ್ಯಾಣವಾಗುತ್ತೆ ಅಂತ ಕೊರೆದರು. ಆದರೆ ಇವರೇ ಫ್ಯಾಕ್ಟರಿಯ ವ್ಯವಹಾರ ಒಂದರಲ್ಲಿ, ಆಸಕ್ತ ಪಾರ್ಟಿಯಿಂದ ದುಡ್ಡು ತೆಗೆದು ಕೊಂಡು, ಫ್ಯಾಕ್ಟರಿಗೆ ಮೋಸ ಮಾಡಿರೋದನ್ನು ತಿಳಿದು, ಮೈಯೆಲ್ಲ ಉರಿದು ಹೋಗುತ್ತೆ." ರಮೇಶ ನುಡಿದ.

"ನಮ್ಮಮ್ಮನೂ ಅಷ್ಟೆ. ಮಹಿಳಾ ಸಮಾಜದಲ್ಲಿ ಹೆಣ್ಣಿನ ಶೋಷಣೆ ಬಗ್ಗೆ ಆವೇಶದಿಂದ ಮಾತಾಡಿ ಚಪ್ಪಾಳೆ ಗಿಟ್ಟಿಸ್ತಾಳೆ. ಆದರೆ ಮನೆಗೆ ಬಂದು, ಮನೆ ಕೆಲಸದೋಳಿಗೆ ಕಿರುಕುಳ ಕೊಡ್ತಾಳೆ. ಪಾಪ, ಆಕೆ ಒಂದು ದಿನ ಖಾಯಿಲೆ ಬಂದೋ, ಅವಳ ಮಗೂಗೆ ತೊಂದರೆ ಆಗಿಯೋ ಕೆಲಸಕ್ಕೆ ಬರದೇ ಹೋದರೆ, ಅವಳ್ನ ಬಾಯಿಗೆ ಬಂದಂತೆ ಬೈಯ್ಯೋದಲ್ಲದೆ, ಸಂಬಳ ಕಟ್ ಮಾಡ್ತಾಳೆ. ಮನೆಯ ಬಳಿಗೆ ಭಿಕ್ಷುಕಿಯರು ಬಂದರೆ ಸಿಡುಕುತ್ತಾಳೆ." ಸುಧಾ ತನ್ನ ಅನುಭವವನ್ನು ತಿಳಿಸಿದಳು.

"ನಮ್ಮ ತಂದೆ, ಚಿಕ್ಕಪ್ಪ ಚೇನ್ ಸ್ಮೋಕರ್ಸ್. ಇಂಜಿನ್ ಹೊಗೆ ಬಿಟ್ಟ ಹಾಗೆ ಹೊಗೆ ಬಿಡ್ತಾನೇ ಇರ್ತಾರೆ. ಇಬ್ಬರೂ ವೈದ್ಯರು. ಪ್ರತಿ ಪೇಶಂಟ್‌ಗೆ ಸಿಗರೇಟ್, ಬೀಡಿ ಸೇದಬೇಡಿ ಅಂತ ಬೋಧನೆ ಮಾಡ್ತಾರೆ. ಧೂಮಪಾನ ದಿಂದ ಆಗುವ ಆರೋಗ್ಯ–ಅನಾಹುತಗಳು, ಅಂತ ಲೆಕ್ಚರ್ ಕೊಡ್ತಾರೆ. ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ದಿನ ಸೇದಿದ್ದಕ್ಕೆ ಬಾಯಿಗೆ ಬಂದಂತೆ ಬೈದು, ಅಜೀರ್ಣ ಆಗೋವಷ್ಟು ಬುದ್ಧಿ ಹೇಳಿದರು" ಎಂದು ನಗತೊಡಗಿದ ಶ್ರೀಕಾಂತ.

"ದೊಡ್ಡವರು ತುಂಬಾ ಸ್ವಾರ್ಥಿಗಳು ಶ್ರೀಕಾಂತ್, ಆಸೆ ಬುರುಕರು. ಚಿಕ್ಕವರ ಶಕ್ತಿ ಸಾಮರ್ಥ್ಯ, ಬುದ್ಧಿವಂತಿಕೆಯನ್ನು ಕಂಡು ಹೊಟ್ಟೆ ಕಿಚ್ಚು ಪಡುತ್ತಾರೆ. ಯಾವುದೋ ಕಾಲದಲ್ಲಿ ಓದಿ ನೋಟ್ಸ್ ಮಾಡಿಕೊಂಡ ವಿಷಯಗಳನ್ನು ಟೇಪ್‌ರೆಕಾರ್ಡರ್ ತರ ಒಪ್ಪಿಸ್ತಾರೆ. ಇತ್ತೀಚಿನ ಲಿಟರೇಚರ್‌ನ ಓದೋಲ್ಲ. ನಾವು ಓದಿ ಹೇಳಿದರೆ ನಮ್ಮ ಮೇಲೇ ಕೆಂಡ ಕಾರ್‍ತಾರೆ. ಇವರಿಗೆ ನಾವು ಮರ್ಯಾದೆ ಗೌರವ ಕೊಡಬೇಕಂತೆ. ಅವರು ಮಾಡೊ ಗಿಳಿಪಾಠವನ್ನು ನಿಶ್ಶಬ್ದವಾಗಿ ಕುಳಿತು ಕೇಳಿ ಬರೆದುಕೋಬೇಕಂತೆ. ಹರಳೆಣ್ಣೆ ಕುಡಿದ ಮುಖ ಮಾಡಿಕೊಂಡು ಪಾಠ ಹೇಳೋ ಈ ಟೀಚರ್ಸ್‌ನ ಮನೆಗೆ ಕಳುಹಿಸಬೇಕು. ಇಲ್ಲಾ ಅವರ ಲೆಕ್ಚರ್‌ಗಳನ್ನು ಟೇಪ್ ಮಾಡಿ, ಒಂದು ರೂಮಿನಲ್ಲಿ ಅವರನ್ನು ಕೂರಿಸಿ, ಬೆಳಗಿನಿಂದ ಸಂಜೆ ತನಕ ಹಾಕಿ ಕೇಳಿಸಬೇಕು. ಆಗ ಗೊತ್ತಾಗತ್ತೆ ಅವರಿಗೆ ನಾವು ಪಡೋ ಹಿಂಸೆ, ನೋವು" ಎಂದ ರಮೇಶ.

"ನಮ್ಮ ಸಮಾಜದಲ್ಲಿ ಏನಾದರೂ ಬದಲಾವಣೆ ಆಗಬೇಕಾದರೆ, ನಮ್ಮ ವಯಸ್ಸಿನೋರು ಮುಂದಾಗಬೇಕು. ವಿಶಾಲ ಮನೋಭಾವದಿಂದ, ನಿಸ್ವಾರ್ಥತೆಯಿಂದ, ಪ್ರಾಮಾಣಿಕವಾಗಿ ಬೇರೆಯವರ ಒಳಿತಿಗಾಗಿ ದುಡಿಯಬಲ್ಲ ಮನಸ್ಸಿರುವುದು ಹದಿವಯಸ್ಸಿನವರಿಗೆ ಮಾತ್ರ. ನಾವು ದೊಡ್ಡವರಾಗಿ, ದಾರಿತಪ್ಪುವ ಮುನ್ನ, ಕೆಟ್ಟು ಹೋಗುವ ಮುನ್ನ ನಾವು ಕಾರ್ಯೋನ್ಮುಖರಾಗಬೇಕು. ಈ ವಯಸ್ಸಿನ ಈ ಸುಂದರ ಮನೋಭಾವವೇ ಶಾಶ್ವತವಾಗಿ ಉಳಿಯಲಿ ಎಂದು ಹಾರೈಸಬೇಕು" ರವಿ ಭಾವುಕನಾಗಿ ನುಡಿದ.

* * *

"ನೋಡ್ರಿ ಎಂಥಾ ಕಾಲ ಬಂತು. ಮುಖದ ಮೇಲೆ ಇನ್ನೂ ಸರಿಯಾಗಿ ಮೀಸೆ ಹುಟ್ಟಿಲ್ಲ. ಇನ್ನೂ ಹಾಲು ಕುಡಿಯೋ ವಯಸ್ಸು ಅಂದ್ರೆ ಉತ್ಪ್ರೇಕ್ಷೆ ಅಲ್ಲ. ಹೋಗೋ ಬರೋ ಹೆಣ್ಣು ಮಕ್ಕಳನ್ನು ಚುಡಾಯಿಸ್ತಾ ಇದ್ದಾರಲ್ಲ. ಹರೆಯದ ಹುಡುಗೀರನ್ನ ಕಂಡ್ರೆ ಸೀಟಿ ಹಾಕ್ತಾರೆ. 'ಏನಮ್ಮಾ ಎಷ್ಟಿರ ಬಹುದು ರೇಟು...ಸ್ವಲ್ಪ ದುಬಾರಿ ಆಗಬಹುದು. ಆದರೆ ಮಾಲು ಚೆನ್ನಾಗಿದೆ' ಅಂತ ಅಶ್ಲೀಲವಾಗಿ ಮಾತಾಡ್ತಾರೆ. ಇವರನ್ನ ಹಿಡಿದು ಚರ್ಮ ಸುಲೀಬೇಕು. ಅಪ್ಪ ಅಮ್ಮ ಕಷ್ಟಪಟ್ಟು ತಾವು ದುಡಿದು ಇವರಿಗೆ ಹೊಟ್ಟೆ ತುಂಬೋ ಹಾಗೆ ಊಟ ಹಾಕಿ ಬಿಡ್ತಾರೆ. ಖರ್ಚಿಗೆ ಕಾಸು ಕೊಟ್ಟು ಬಿಡ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರು ದೇವರಿಗೆ ಬಿಟ್ಟ ಬಸವಗಳ ಹಾಗೆ ಕೊಬ್ಬಿದ್ದಾರೆ. ಇವರಿಂದಾಗಿ ನಮ್ಮ ಹೆಣ್ಣು ಮಕ್ಕಳು ಧೈರ್ಯವಾಗಿ ಬೀದಿಯಲ್ಲಿ ಓಡಾಡೋ ಹಾಗಿಲ್ಲವಲ್ಲ, ಪೊಲೀಸಿನವರಿಗೆ ಹೇಳಿ ಬಿಸಿ ಮುಟ್ಟಿಸಬೇಕು. ನಮ್ಮ ಕಾಲದಲ್ಲಿ ಹೀಗಿರಲಿಲ್ಲ ಬಿಡಿ. ಕಾಲ ಕೆಟ್ಟು ಹೋಯ್ತು. ಈಗಿನ ಹುಡುಗರು ಅಪಾಪೋಲಿಗಳು..."

* * *

"ನನ್ನ ಹೃದಯ ದೇವತೆ ಸುಮಾ.

ಈ ಪತ್ರ ನೋಡಿ ನಿನಗೆ ಖಂಡಿತ ಆಶ್ಚರ್ಯವಾಗುತ್ತದೆ. ನೀನು ನನ್ನನ್ನು ನೋಡಿದ್ದೀಯಾ, ಆದರೆ ನಾನು ಯಾರು ಎಂದು ನಿನಗೆ ತಿಳಿದಿಲ್ಲ. ನನ್ನ ಪರಿಚಯ ಮಾಡಿಕೊಂಡು, ನಿನ್ನ ಬಗ್ಗೆ ನನಗಿರುವ ಭಾವನೆಗಳನ್ನು ಹೇಳಿಕೊಳ್ಳಲೆಂದೇ ಈ ಪತ್ರ ಬರೆದಿದ್ದೇನೆ. ಈ ಪತ್ರವನ್ನು ಎಸೆಯದೆ, ಹರಿದು ಹಾಕದೆ ಈ ಅಭಿಮಾನಿ ಪ್ರೇಮಿಯ ಆಂತರಿಕ ಆಸೆ, ಬೇಡಿಕೆಗಳನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ನೀನು ಓದುತ್ತಿರುವ ಕಾಲೇಜಿನಲ್ಲೇ ಕಲಿಯುತ್ತಿದ್ದೇನೆ. ಬಿ. ಎಸ್‌ಸಿ., ಫೈನಲ್ ಇಯರ್‌ನಲ್ಲಿದ್ದೇನೆ. ನಮ್ಮ ತಂದೆ ತಾಯಿ ಚಿಕ್ಕಮಗಳೂರಿನಲ್ಲಿದ್ದಾರೆ. ಕಾಫಿ ಎಸ್ಟೇಟ್, ತೋಟ ಗದ್ದೆ ಇದ್ದು ಸಾಕಷ್ಟು ಅನುಕೂಲವಾಗಿದ್ದೇವೆ. ಒಂದು ತಿಂಗಳ ಹಿಂದೆ ನಾನು ಸ್ಪೋರ್ಟ್ಸ್ ಡೇ ನಲ್ಲಿ ನಿನ್ನನ್ನು ನೋಡಿದೆ. ಆ ಕ್ಷಣವೇ ನೀನು ನನ್ನನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ಬಿಟ್ಟೆ. ಬೆಳಗಿನ ಅರುಣೋದಯದಲ್ಲಿ, ಕಂಗೊಳಿಸುವ ವನಶ್ರೀಯಂತೆ ನಿನ್ನ ಸೌಂದರ್ಯ. ನಾನು ಪ್ರಕೃತಿಯ ಆರಾಧಕ. ಸೃಷ್ಟಿಯಲ್ಲೇ ನೀನು ಒಂದು ಅದ್ಭುತ ಸೃಷ್ಟಿ. ಜಗತ್ತಿನ ಸೌಂದರ್ಯವನ್ನೆಲ್ಲಾ ಒಟ್ಟಿಗೆ ಸೇರಿಸಿ, ಎರಕ ಹೊಯ್ದು ಮಾಡಿರಬಹುದಾದ ಸುವರ್ಣ ಪುತ್ಥಳಿ ನೀನು. ನಿನ್ನನ್ನು ವರ್ಣಿಸಲು ನಾನು ಅಶಕ್ತ. ನಿನ್ನನ್ನು ನೋಡಿದಾಕ್ಷಣದಿಂದ, ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗಿದೆ. ಪ್ರತಿ ಸೆಕೆಂಡೂ, ನಿನ್ನದೇ ನೆನಪು. ನೀನಿಲ್ಲದೆ ನಾನಿಲ್ಲ. ನೀನಿಲ್ಲದೆ ನಾನು ಬದುಕಲಾರೆ ಎಂದು ತೀರ್ಮಾನಿಸಿ ಬಿಟ್ಟಿದ್ದೇನೆ. ಈ ಒಂದು ತಿಂಗಳಲ್ಲಿ ಎಷ್ಟು ಸಲ, ನಿನ್ನನ್ನು ಕಂಡು, ನನ್ನ ಮನೋಭಿಲಾಷೆಯನ್ನು ಹೇಳಿಕೊಳ್ಳಬೇಕೆಂದುಕೊಂಡಿದ್ದೇನೆ. ಆದರೆ ಸಾಧ್ಯವೇ ಆಗಿಲ್ಲ. ನಾನು ನೋಡಿದಾಗಲೆಲ್ಲಾ ನೀನು ನಿನ್ನ ಗೆಳತಿಯರೊಂದಿಗೆ ಇರುತ್ತೀ. ಅದ ಕಾರಣ ಈ ಪತ್ರ ಬರೆದಿದ್ದೇನೆ. ನೀನು ನಾಳೆ ಸಂಜೆ ಐದು ಘಂಟೆಗೆ ಕಬ್ಬನ್ ಪಾರ್ಕಿನ ಸಿಟಿ ಸೆಂಟ್ರಲ್ ಲೈಬ್ರರಿಯ ಮುಂಭಾಗಕ್ಕೆ ಬಾ. ನಾನು ಅಲ್ಲಿ ನಿನಗಾಗಿ ಕಾದಿರುತ್ತೇನೆ. ನಮ್ಮ ಮದುವೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಭವಿಷ್ಯದ ಬಗ್ಗೆ ನಿನ್ನೊಂದಿಗೆ ಚರ್ಚಿಸಬೇಕಾಗಿದೆ. ನಿನ್ನನ್ನು ನಾನು ಸುಖವಾಗಿಟ್ಟಿರುತ್ತೇನೆ. ನಿನ್ನ ಆಣತಿಯನ್ನು ಯಾವುದೇ ಕಾರಣಕ್ಕೂ ಮೀರುವುದಿಲ್ಲ. ನಿನ್ನ ಆಸೆಯೇ ನನ್ನ ಆಸೆ, ನಿನ್ನನ್ನು ಯಾವ ಕಾರಣಕ್ಕೂ ನೋಯಿಸುವುದಿಲ್ಲವೆಂದು ಪ್ರಮಾಣ ಮಾಡಿ ಹೇಳುತ್ತೇನೆ. ನೀನು ನನ್ನವ ಳಾದರೆ ಸಾಕು. ನನಗೆ ಈ ಪ್ರಪಂಚದಲ್ಲಿ ಇನ್ನೇನೂ ಬೇಡ. ನಾಳೆ ನೀನು ಅಲ್ಲಿಗೆ ಬಂದು ನನ್ನನ್ನು ಭೇಟಿ ಮಾಡದಿದ್ದರೆ, ನಾನೇನಾಗುತ್ತೇನೆ ಎಂದು ನನಗೇ ಗೊತ್ತಿಲ್ಲ. ನಾನು ಹುಚ್ಚನಾಗಬಹುದು, ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು. ನನಗಾಗುವ ಈ ಕೆಟ್ಟ ಪರಿಣಾಮಗಳಿಗೆ ನೀನೇ ಹೊಣೆ. ದಯವಿಟ್ಟು ನೆನಪಿಡು, ನಾನು ಬದುಕಿದರೂ ನಿನಗಾಗಿ, ಸತ್ತರೂ ನಿನಗಾಗಿ, ನನ್ನ ಭವಿಷ್ಯವನ್ನು ನೀನೇ ರೂಪಿಸು; ಇತೀ ನಿನ್ನ ಆರಾಧಕ–ಸುರೇಶ್."

"ಪತ್ರ ತುಂಬಾ ಚೆನ್ನಾಗಿ ಬರೆದಿದ್ದೀರಾ! ಏನು ರೋಮಾನ್ಸ್ ಏನು ಕಥೆ. ಎಂತಹ ಹೃದಯ ನಿವೇದನೆ. ಈ ಸುಮ ಈ ಪತ್ರವನ್ನು ನೋಡಿ ತಾನೆಷ್ಟು ಅದೃಷ್ಟಶಾಲಿ ಎಂದುಕೊಂಡಿರಬೇಕು" ಶಾಂತ ನುಡಿದಳು.

"ಸುಮ ಈ ಪತ್ರವನ್ನು ಓದಲೇ ಇಲ್ಲ ಕಣೆ. ಈ ಪತ್ರವನ್ನು ನಾನು ಆಕೆಗೆ ಕೊಡಲಾಗಲೇ ಇಲ್ಲ, ಆಗ ನನ್ನ ವಯಸ್ಸು ಕೇವಲ ಹದಿನೇಳು. ಪತ್ರ ವನ್ನೇನೊ ಬರೆದೆ. ಆದರೆ ಅವಳಿಗೆ ಅದನ್ನು ತಲುಪಿಸುವುದು ಹೇಗೆ ಎಂಬುದು ಗೊತ್ತಾಗಲೇ ಇಲ್ಲ. ಅಂತಹ ದಡ್ಡನಾಗಿದ್ದೆ. ಪುಕ್ಕಲನಾಗಿದ್ದೆ ನಾನು. ನಾನು ಪತ್ರ ಬರೆದ ಎರಡು ವಾರದೊಳಗೆ, ಆಕೆ ಕಾಲೇಜಿಗೆ ಬರುವು ದನ್ನು ನಿಲ್ಲಿಸಿದಳು. ಆಕೆ ತನ್ನ ಸೋದರಮಾವನ ಮನೆಯಲ್ಲಿದ್ದಳಂತೆ, ಆನಂತರ ಕಲ್ಕತ್ತೆಯ ಬಳಿ ಇರುವ ತಂದೆ ತಾಯಿಗಳ ಬಳಿಗೆ ಹೊರಟು ಹೋದಳು. ನಾನು ಪತ್ರದಲ್ಲಿ ಬರೆದಿರುವಂತೆ ಆತ್ಮಹತ್ಯೆಗೆ ಪ್ರಯತ್ನಿಸಲೂ ಇಲ್ಲ. ಹುಚ್ಚನೂ ಆಗಲಿಲ್ಲ. ಅದನ್ನು ಕಂಡು ನನಗೇ ಆಶ್ಚರ್ಯವಾಯಿತು. ಆಮೇಲಿನ ಕಥೆ ನಿನಗೆ ಗೊತ್ತೇ ಇದೆ. ಬಿ.ಎಸ್‌ಸಿ ಮುಗಿಸಿದೆ. ನಿನ್ನಪ್ಪ ತಮ್ಮ ವಶೀಲಿಯಿಂದ ನನಗೊಂದು ಕೆಲಸ ಕೊಡಿಸಿದ್ದಲ್ಲದೆ, ನಿನ್ನನ್ನೂ ನನಗೆ ಗಂಟು ಹಾಕಿಬಿಟ್ಟರು" ಎಂದು ಮೂವತ್ತು ವರ್ಷದ ಸುರೇಶ ನಗತೊಡಗಿದ.

"ಬಹಳ ಚೆನ್ನಾಗಿದೆ ನಿಮ್ಮ ಹದಿಹರೆಯದ ಈ ಪ್ರೇಮ ಪ್ರಕರಣ. ಈ ಪತ್ರ ನನ್ನಲ್ಲಿ ಇರಲಿ ಆಯಿತಾ" ಎಂದು ಮುಗುಳ್ನಕ್ಕಳು ಶಾಂತ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಇನ್ನು ಎಷ್ಟು ದೂರ ಹೋಗ್ಬೇಕೋ, ಇಲ್ಲೇ ಹತ್ತಿರದಲ್ಲಿದೆ ಅಂದೆ" ಶ್ರೀನಿಧಿ ಪ್ರತಿಭಟಿಸಿದ.

"ಆಯ್ತು, ನೋಡು. ಮುಂದೆ ಎಡಕ್ಕೆ ತಿರುಗಿದರೆ ನಾಲ್ಕನೇ ಮನೆ. ನಡಿ" ಧನಂಜಯ ಅವನನ್ನು ಸಮಾಧಾನ ಪಡಿಸಿ ಮುನ್ನಡೆದ. ತೆರೆದ ಮೋರಿಯ ಗಬ್ಬು ನಾತ, ಕಸದ ರಾಶಿ, ಧೂಳು ತುಂಬಿದ ರಸ್ತೆ. ಜೇಬಿನಿಂದ ಕರ್ಚೀಫು ತೆಗೆದು ಮೂಗು ಮುಚ್ಚಿಕೊಂಡ ಶ್ರೀನಿಧಿ. ಕಡಿಮೆ ದರದಲ್ಲಿ ಬ್ರೌನ್ ಶುಗರ್ ದೊರೆಯುತ್ತದೆ ಎಂಬ ಆಸೆ ಹುಟ್ಟಿಸಿ ಈ ನರಕದ ಹಾದಿಗೆ ಕರೆತಂದ ಧನಂಜಯನನ್ನು ಮನಸ್ಸಿನಲ್ಲೇ ಶಪಿಸಿದ. ಹೇಗೋ ಒಂದು ವಾರಕ್ಕಾಗು ವಷ್ಟು ಬ್ರೌನ್ ಶುಗರ್ ಸಿಕ್ಕಿದರೆ ಸಾಕು, ಅದಿಲ್ಲದೆ ಬದುಕು ಅಸಹನೀಯ ವಾಗಿತ್ತು. ನಿನ್ನೆಯಿಂದ ಪದಾರ್ಥವನ್ನು ಸೇವಿಸಿಲ್ಲ. ಮೈಕೈ ನೋವು ಎದೆಯಾಳದಲ್ಲಿ ಹೊಟ್ಟೆಯಲ್ಲಿ ಸಹಿಸಲಸಾಧ್ಯವಾದ ಸಂಕಟ. ಭಯ, ಸಿಟ್ಟು ಏಕ ಕಾಲದಲ್ಲಿ ಮನಸ್ಸನ್ನು ಮುತ್ತುತ್ತಿವೆ. ಮಾಮೂಲಾಗಿ ಕೊಡುತ್ತಿದ್ದ ಬೀಡಿ ಅಂಗಡಿಯವನು ಮಾಲಿಲ್ಲ ಎನ್ನುವುದೇ ! ಕಿಟ್ಟು ಹೇಳುವಂತೆ ಅಂಗಡಿ ಯವ ಭಾರಿ ಖದೀಮನಂತೆ. ಮಾಲಿಲ್ಲ ಎನ್ನುವುದು, ಎರಡರಷ್ಟು ನಾಲ್ಕ ರಷ್ಟು ಹಣ ಕೊಟ್ಟರೆ, ಮಾಲು ಕೊಡುತ್ತಾನಂತೆ. ಆದರೆ ಈ ತಿಂಗಳು ನನ್ನದು ಬರಿಗೈ. ಅಪ್ಪ ಪರೀಕ್ಷೆ ಫೀಸಿಗೆಂದು ಕೊಟ್ಟಿದ್ದ ಹಣವೂ ಖರ್ಚಾಗಿ ದ್ದಲ್ಲದೆ, ಕಿಟ್ಟುವಿನ ಹತ್ತಿರ ನೂರು ರೂಪಾಯಿಗಳವರೆಗೆ ಸಾಲವಾಗಿದೆ. ಪರೀಕ್ಷೆ ಮುಗಿದ ಮೂರನೇ ದಿನವೇ ಊರಿಗೆ ಹೊರಟು ಬಾ ಅಂತ ಅಪ್ಪ ಕಾಗದ ಬರೆದಿದ್ದಾನೆ. ಅವನಿಂದ ದುಡ್ಡು ಬರುವಂತಿಲ್ಲ... ಶ್ರೀನಿಧಿಯ ಯೋಚನೆ ತುಂಡಾಯಿತು. 'ಶ್ರೀನಿಧಿ, ಇದೇ ಮನೆ. ನಡೀ ಒಳಕ್ಕೆ' ಎಂದು ಧನಂಜಯ ಅವನ ಕೈಹಿಡಿದು, ಆ ಮನೆಯೊಳಗೆ ಹೋದ. ನಸುಗತ್ತಲ ಕೊಠಡಿ. ಅಲ್ಲಿ ಒಂದು ನಿಮಿಷ ಇರಲು ಹೇಳಿ, ಮತ್ತೂ ಒಳಕ್ಕೆ ಹೋದ ಧನಂಜಯ. ಎರಡು ನಿಮಿಷಗಳು ಎರಡು ಘಂಟೆಗಳಂತೆ ತೋರಿತು ಶ್ರೀನಿಧಿಗೆ. ಧನಂಜಯ ಬಂದವನೇ, 'ಬಾ, ನಿನಗೆ ಬೇಕಿರುವಷ್ಟು ಪದಾರ್ಥ ಕೊಡಿಸುತ್ತೇನೆ' ಎಂದು ಎಳೆದೊಯ್ದ. ಒಳಗೆ ದೊಡ್ಡ ಹಾಲ್, ಮಂದ ಬೆಳಕು, ಸಿಗರೇಟ್ ಹೊಗೆಯ ಘಾಟು. ಆ ಬೆಳಕಿಗೆ ಹೊಂದಿಕೊಳ್ಳಲು ತುಸುವೇ ಸಮಯ ಬೇಕಾಯಿತು. ಅಲ್ಲಿರುವ ಜನರ ಮುಖಗಳು ಕಾಣುವಂತಾದಾಗ, ಶ್ರೀನಿಧಿಗೆ ದೊಡ್ಡ ಆಶ್ಚರ್ಯ ಕಾದಿತ್ತು. ಬಹುತೇಕ ಜನ ಹದಿನೈದರಿಂದ ಇಪ್ಪತ್ತೈದು ... ಕಾಲೇಜಿನವರಿದ್ದಾರೆ. ಸರ್ಕಾರಿ ಆರ್ಟ್ಸ್ ಕಾಲೇಜಿನವರಿದ್ದಾರೆ. ಬ್ರೌನ್ ಶುಗರ್ ಸೇದುತ್ತಾ, ಅಮಲಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದದಲ್ಲಿ, ತಮ್ಮದೇ ಆದ ಭ್ರಮಾಲೋಕದಲ್ಲಿದ್ದಾರೆ. "ತಗೋಳೋ ಸೇದೋ, ಹದಿನೈದು ದಿನಗಳಿಗಾಗುವಷ್ಟು ಕೊಡಲು ಒಪ್ಪಿದ್ದಾರೆ. ಎಲ್ಲಿ ನಿನ್ನ ವಾಚ್ ಕೊಡು. ನಾವು ದುಡ್ಡು ತಂದು ಕೊಡುವ ತನಕ ಅದು ಅವರಲ್ಲಿ ಇರಲಿ" ಎಂದ ಧನಂಜಯ. 'ವಾಚ್ ಏನು, ನನ್ನ ಪ್ರಾಣವನ್ನೇ ಒತ್ತೆ ಇಡುತ್ತೇನೆ. ಕೇಳಿದಾಗಲೆಲ್ಲ ಅವರು ಪದಾರ್ಥ ಕೊಟ್ಟರೆ ಸರಿ" ಎಂದು ಶ್ರೀನಿಧಿ ತನ್ನ ವಾಚ್ ಬಿಚ್ಚಿಕೊಟ್ಟ.

* * *

"ಬಾಷಾ, ಏಯ್ ಬಾಷಾ, ಎಲ್ಲಿ ಹಾಳಾಗಿ ಹೋದೆಯೋ" ರಘುಪತಿ ಕೂಗು ಹಾಕಿದ.

"ಬಂದೆ ಸಾರ್... ಏನು ಸಾರ್" ಬಾಷಾ ಅವನ ಮುಂದೆ ನಿಂತ. ತೆಳುವಾದ ಶರೀರ, ಕಡ್ಡಿಯಂತ ಕೈಕಾಲು, ಬೆವರಿಡುವ ಮುಖ.

"ಕೂಗಿದ್ದು ಕೇಳಿಸಲಿಲ್ಲವೇನೂ. ಏನು ಮಾಡ್ತಿದ್ದೆಯೋ ?"

"ಡಾಕ್ಟರ್ ಜೋಸೆಫ್‌ರ ಕಾರಿನ ವೀಲ್ ಬಿಚ್ತಿದ್ದೆ."

"ಸರಿಸರಿ, ನೋಡು ಒಂದು ಸ್ಕೂಟರ್ ಬಂದಿದೆ. ಹೋಗಿ ನೋಡು."

ಬಾಷಾ, ಹೊರ ಬಂದು ನೋಡಿದ. ಇಬ್ಬರು ಕಾಲೇಜು ಸ್ಟೂಡೆಂಟ್ಸ್ ಸ್ಕೂಟರ್ ಪಕ್ಕದಲ್ಲಿ ನಿಂತಿದ್ದಾರೆ. ತನ್ನಷ್ಟೇ ವಯಸ್ಸು, ಅತ್ತಾ ಅತಿ ಶ್ರೀಮಂತರೂ ಅಲ್ಲ ಇತ್ತ ಬೀದಿ ಸುತ್ತುವ ಘಟಿಂಗರಂತೆಯೂ ಇಲ್ಲ.

"ಏನು ಟ್ರಬಲ್ ಸಾರ್" ಬಾಷಾ ವಿಚಾರಿಸಿದ.

"ಇಂಜಿನ್ ಆಫ್ ಆಗಿದೆ. ಮತ್ತೆ ಸ್ಟಾರ್ಟ್ ಆಗ್ತಾ ಇಲ್ಲ. ನೋಡು. ಸ್ಪಾರ್ಕ್‌ಪ್ಲಗ್ ಕ್ಲೀನಾಗೇ ಇದೆ."

"ಹೌದಾ ಸಾರ್, ಪೆಟ್ರೋಲ್ ಇದೆಯಾ ಚೆಕ್ ಮಾಡಿದ್ರಾ."

"ಮೊನ್ನೆತಾನೇ ಫುಲ್‌ಟ್ಯಾಂಕ್ ಹಾಕ್ಸಿದೆ."

"ಹೇಳೋಕ್ಕಾಗಲ್ಲ ಸಾರ್, ನೀವು ಪಾರ್ಕ್‌ಮಾಡಿದ ಕಡೆ ಪೆಟ್ರೋಲ್ ಕದ್ದಿದ್ದರೆ, ನಿಮಗೆ ಹೇಗೆ ಗೊತ್ತಾಗತ್ತೆ ಹೇಳಿ" ಎಂದು ಸೀಟ್ ಕವರ್ ಎತ್ತಿ, ಪೆಟ್ರೋಲ್‌ಟ್ಯಾಂಕ್‌ನ ಮುಚ್ಚಳ ತೆಗೆದು ಇಣುಕಿ ನೋಡಿದ. ಬಾಷಾನ ಮುಖ ಅರಳಿತು. 'ನೋಡಿದ್ರಾ ನಾನು ಹೇಳಿದ ಹಾಗೇ ಆಗಿದೆ, ಟ್ಯಾಂಕ್‌ನಲ್ಲಿ ಒಂದು ತೊಟ್ಟು ಪೆಟ್ರೋಲ್ ಇಲ್ಲ.'

'ಓ ಗಾಡ್, ಯಾರೋ ಕಳ್ಳ ನನ್ನ ಮಕ್ಕಳು ಪೆಟ್ರೋಲ್ ಕದ್ದಿದ್ದಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಈಗೇನು ಮಾಡೋದು. ಹತ್ತಿರದಲ್ಲಿ ಪೆಟ್ರೋಲ್ ಬಂಕ್ ಇದೆಯಾ' ವಿದ್ಯಾರ್ಥಿ ಕೇಳಿದ.

'ಇಲ್ಲಿಗೆ ಎರಡು ಫರ್ಲಾಂಗ್ ಆಗತ್ತೆ. ಗಾಡಿ ತಳ್ಳಿಕೊಂಡು ಹೋಗೋದಿಕ್ಕೆ ಆಗೊಲ್ಲ. ದುಡ್ಡು ಕೊಡಿ ಸಾರ್ ಸೈಕಲ್‌ನಲ್ಲಿ ಹೋಗಿ ಕ್ಯಾನ್‌ನಲ್ಲಿ ತರ್ತೀನಿ' ಎಂದ ಬಾಷಾ.

'ಅಷ್ಟು ಮಾಡು. ತಗೋ ಈ ರೂಪಾಯಿ.'

ಬಾಷಾ ಐದು ನಿಮಿಷದಲ್ಲಿ ಪೆಟ್ರೋಲ್ ತಂದು, ಸ್ಕೂಟರ್‌ಗೆ ಹಾಕಿದ. ಅವರಿತ್ತ ಎರಡು ರೂಪಾಯನ್ನು ಜೇಬಿಗೆ ಸೇರಿಸಿದ. ಅವರು ಹೋಗುವುದನ್ನೇ ನೋಡುತ್ತಾ ನಿಂತ. ಅದೃಷ್ಟವಿದ್ದಿದ್ದರೆ, ತನ್ನ ತಂದೆ ಕಾಲು ಮುರಿದುಕೊಂಡು ಮನೆಯಲ್ಲಿ ಹಾಸಿಗೆ ಹಿಡಿಯದೇ ಹೋದ ಪಕ್ಷದಲ್ಲಿ, ತಾನೂ ಹೀಗೇ ಕಾಲೇಜಿಗೆ ಹೋಗುತ್ತಿದ್ದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾನು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಿದಾಗ, ತಾನೆಷ್ಟು ಸಂಭ್ರಮ ಪಟ್ಟಿದ್ದೆ. ತನ್ನ ತಂದೆ ತಾಯಿ ತಂಗಿಯರು ಎಷ್ಟೊಂದು ಸಂತೋಷ ಪಟ್ಟಿದ್ದರು. ತಾನು ಓದದೆ ಲಾರಿ ಡ್ರೈವರ್ ಆಗಿ ಕಷ್ಟ ಕಾರ್ಪಣ್ಯದ ಜೀವನ ಮಾಡುತ್ತಿರುವುದು ಸಾಕು. ನೀನು ಓದಿ, ಆಫೀಸರ್ ಆಗಬೇಕು ಎಂದಿದ್ದರು. ಮುಂದಿನ ವಾರದಲ್ಲೇ ಆಕ್ಸಿಡೆಂಟ್ ಆಗಿ ಕಾಲು ಮುರಿದುಕೊಂಡು ಮನೆಯಲ್ಲಿ ಕುಳಿತರು. ಕೆಲಸ ಹೋಯಿತು. ಪರಿಹಾರ ಹಣ ಬರಲು ಇನ್ನೂ ಆರುತಿಂಗಳಾದರೂ ಬೇಕಂತೆ. ನಾಲ್ಕು ಜನರ ಹೊಟ್ಟೆ ತುಂಬುವುದು ಹೇಗೆ. ತಾನು ತನ್ನ ಓದಿಗೆ ಫುಲ್ ಸ್ಟಾಪ್ ಹಾಕಬೇಕಾಯಿತು. ಅಪ್ಪನ ಫ್ರೆಂಡ್ ರಘುಪತಿಯ ಗೆರಾಜಿನಲ್ಲಿ ದುಡಿಯಲು ಶುರುಮಾಡಬೇಕಾಯಿತು. ತನ್ನ ಆಸೆ ಮಣ್ಣು ಪಾಲಾಯಿತು. ಬಾಷಾನ ಕಣ್ಣುಗಳೆರಡರಲ್ಲೂ ನೀರು ತುಂಬಿಕೊಂಡಿತು.

"ಬಾಷಾ, ಏಯ್, ಏನು ಮಾಡ್ತಿದ್ದೀಯೋ ಬಾಷಾ..." ರಘುಪತಿಯ ಕೂಗು ಅವನನ್ನು ಎಚ್ಚರಿಸಿತು. ಕೈನಿಂದಲೇ ಕಣ್ಣೀರನ್ನು ಒರೆಸಿಕೊಂಡು, 'ಬಂದೇ ಸಾರ್' ಎಂದು ಒಳಕ್ಕೆ ಓಡಿದ.

*   *   *

"ನೆಹರೂ ಬಡಾವಣೆಯಲ್ಲಿ ಗಲಾಟೆ ಆಯಿತಂತೆ, ನಿಜವೇ" ಡ್ಯೂಟಿಯಿಂದ ಮನೆಗೆ ಬಂದ ಗಂಡನಿಗೆ, ಜ್ಯೂಸ್ ಲೋಟವನ್ನಿತ್ತು ಕೇಳಿದಳು ಶಕುಂತಲ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಹೌದು ಶಕು, ಅಲ್ಲಿಂದಲೇ ಬರ್‍ತಾ ಇದ್ದೇನೆ" ಇನ್ಸ್‌ಪೆಕ್ಟರ್ ಸುನಿಲ್ ನುಡಿದ.

"ಏನು ಗಲಾಟೆ, ಸೀರಿಯಸ್ಸಾದ್ದೇ ?"

"ಇಲ್ಲ ಶಕು, ಪಡ್ಡೆ ಹುಡುಗರ ಗುಂಪು ಕಾಳಗ. ಶಾಲೆಗೆ ಕಾಲೇಜಿಗೆ ಹೋಗುವ ಮತ್ತು ಹೋಗದ ಹುಡುಗರು ಹದಿನಾಲ್ಕರಿಂದ ಹದಿನೆಂಟು ವಯಸ್ಸಿನವು. ಎರಡು ಗುಂಪು. ಒಂದಕ್ಕೆ ವೆಂಕಟೇಶ್ ಎನ್ನುವನು ಲೀಡರ್ ಇನ್ನೊಂದಕ್ಕೆ ಕಾರ್ತೀಕ ಎನ್ನುವನು ಲೀಡರ್. ಎಲ್ಲ ವಿಷಯದಲ್ಲೂ ಪೈಪೋಟಿ, ಗಣೇಶನನ್ನು ಕೂರಿಸುವ ವಿಚಾರವಿರಲಿ. ರಾಜ್ಯೋತ್ಸವ ಮಾಡುವ ವಿಚಾರ ಇರಲಿ, ರಾಜ್‌ಕುಮಾರ್ ಚಿತ್ರಕ್ಕೆ ಸ್ಟಾರ್ ಕಟ್ಟುವ ವಿಷಯ ಇರಲಿ, ಹುಡುಗಿ ಯರನ್ನು ಚುಡಾಯಿಸುವ ಕೆಲಸವಿರಲಿ ಎಲ್ಲದರಲ್ಲೂ ಪೈಪೋಟಿ. ಕಳೆದ ಎರಡು ವರ್ಷಗಳಿಂದಲೂ ಇದ್ದದ್ದೇ, ಪಾಪ ಹುಡುಗರು ಅಂತ ನಾವು ಸಲೀಸು ಕೊಟ್ಟದ್ದೇ ತಪ್ಪಾಯಿತು. ಈ ಹೊತ್ತು ಅವರ ಪೈಪೋಟಿ, ಜಿದ್ದಾ ಜಿದ್ದು ಮಿತಿ ಮೀರಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ಮನ್ನು ಹುಟ್ಟು ಹಾಕಿತು. ಹುಡುಗರು ಹೊಡೆದಾಡಿದರು. ಆಮೇಲೆ ಅವರ ಅಪ್ಪ ಅಣ್ಣಂದಿರು ಹೊಡೆದಾಡಿದರು. ಹತ್ತು ಜನಕ್ಕೆ ಗಾಯಗಳಾಗಿ ಆಸ್ಪತ್ರೆ ಸೇರಿದ್ದಾರೆ. ವೆಂಕಟೇಶ, ಕಾರ್ತೀಕ ತಲೆ ತಪ್ಪಿಸಿಕೊಂಡಿದ್ದಾರೆ. ಇದಿಷ್ಟು ನಡೆದ ಕಥೆ ನನಗೆ ತುಂಬಾ ಹಸಿವಾಗಿದೆ. ಊಟಕ್ಕೆ ರೆಡಿ ಮಾಡು" ಎಂದು ಸುನಿಲ್ ಬಚ್ಚಲು ಮನೆಯತ್ತ ನಡೆದ.

* * *

"ನನಗೆ ಏನು ಮಾಡ್ಬೇಕು ಅಂತ ತೋಚ್ತಾ ಇಲ್ಲ ಆಂಟಿ. ಮುಂದೆ ಏನು ಮಾಡಬೇಕು. ಯಾವ ಕೋರ್ಸ್‌ಗೆ ಸೇರಬೇಕು ಅಂತ ಗೊತ್ತಾಗ್ತಾ ಇಲ್ಲ."

"ಯಾಕೋ ಶ್ಯಾಮು ಎಂಟ್ರೆನ್ಸ್ ಎಕ್ಸಾಮ್‌ನಲ್ಲಿ ನಿನಗೆ ಹನ್ನೊಂದನೇ ರ್‍ಯಾಂಕ್ ಬಂತಂತೆ. ಮೆಡಿಕಲ್‌ಗೋ, ಇಂಜಿನಿಯರಿಂಗ್‌ಗೋ ಸೀಟು ಕೊಡ್ಲಿಲ್ಲವೇ ?"

"ಆಂಟಿ ಪ್ರಾಬ್ಲಮ್ ಬಂದಿರೋದು ಅಲ್ಲೇ, ಮೆಡಿಕಲ್ ಮತ್ತು ಇಂಜಿನೀರಿಂಗ್ ಎರಡಕ್ಕೂ ಸೀಟ್ ಸಿಕ್ಕಿದೆ. ಮನೇಲಿ ಅಮ್ಮ, ತಾತ ಮತ್ತು ದೊಡ್ಡಪ್ಪ ನೀನು ಮೆಡಿಕಲ್‌ಗೆ ಸೇರು ಅಂತಿದ್ದಾರೆ. ಅಪ್ಪ, ಅಜ್ಜಿ ಮತ್ತು ಮಾವ ಇಂಜಿನಿಯರಿಂಗ್‌ಗೆ ಸೇರು ಅಂತಿದ್ದಾರೆ. ಯಾರ ಮಾತು ಕೇಳಲಿ ನೀನೇ ಹೇಳು."

Sri Vidyabharathi Book Centre, Sringeri

CC-O. In Public Domain. Digitized by eGangotri

"ಅವರಿವರ ಮಾತನ್ನು ನೀನು ಕೇಳಬೇಡ. ನಿನಗೆ ಯಾವುದಿಷ್ಟ ಅದಕ್ಕೆ ಸೇರಿಕೋ, ಆಗ ಪ್ರಾಬ್ಲಮ್ ಇರೋದೇ ಇಲ್ಲ."

"ಆದರೆ ಆಂಟಿ, ನೀನು ನನ್ನ ಆಸೆಯನ್ನು ಕೇಳಿದರೆ ನಗ್ತೀಯಾ, ನನಗೆ ಮೆಡಿಕಲ್ಲೂ ಇಷ್ಟವಿಲ್ಲ. ಇಂಜನಿಯರಿಂಗ್ ಕೂಡ ಇಷ್ಟವಿಲ್ಲ."

"ಅಂ... ಹಾಗಾದರೆ ನಿನಗೆ ಏನು ಇಷ್ಟ !"

"ಆಂಟಿ ನಾನು ಐ.ಎ.ಎಸ್. ಆಫೀಸರ್ ಆಗಬೇಕು. ಆಡಳಿತ ನಡೆ ಸೋದು ನಿಜವಾಗ಼್ೂ ಛಾಲೆಂಜಿಂಗ್ ಆಗಿರತ್ತೆ. ಅಧಿಕಾರ ಇರೋದರಿಂದ ಸ್ಥಾನಮಾನಕ್ಕೆ ಯಾವಕೊರತೆಯೂ ಇರೋಲ್ಲ. ಇದಾಗಲಿಲ್ಲ ಅಂದ್ರೆ ನಾನೊಬ್ಬ ದೊಡ್ಡ ಕಲಾವಿದನಾಗಬೇಕು. ನಮ್ಮ ದೇಶದ ಜನರಷ್ಟೇ ಅಲ್ಲ, ಇಡೀ ಪ್ರಪಂಚದ ಜನ ನನ್ನ ಕಲಾಸೃಷ್ಟಿ ನೈಪುಣ್ಯತೆಯನ್ನು ಹೊಗಳಬೇಕು, ಆನಂದಿಸ ಬೇಕು. ಈ ಎರಡರಲ್ಲಿ ನಾನು ಯಾವುದನ್ನು ಆರಿಸ್ಕೋಬೇಕು ಅಂತ ನನಗೆ ತೋಚ್ತಾ ಇಲ್ಲ. ಕಳೆದ ಹದಿನೈದು ದಿನಗಳಿಂದ ಈ ತಾಕಲಾಟ ದ್ವಂದ್ವದಲ್ಲಿ ತಲೆ ಸಿಡಿಯೋ ಹಾಗೆ ಆಗಿಬಿಟ್ಟಿದೆ. ಆಂಟಿ ನೀನು ಸ್ವಲ್ಪ ಸಹಾಯ ಮಾಡ್ತೀಯಾ."

"ಶಾಮೂ ಈ ಬಡ ಆಂಟಿಗೆ ಇಷ್ಟು ದೊಡ್ಡ ಶಿಕ್ಷೆ ಯಾಕಪ್ಪಾ, ನಿನ್ನ ಸಮಸ್ಯೆಯನ್ನು ಕೇಳ್ತಿದ್ದ ಹಾಗೆ ನನಗೆ ತಲೆತಿರುಗಿ ಬರ್ತಾ ಇದೆ. ನಾನೇನಪ್ಪ ಪರಿಹಾರ ಹೇಳಲಿ" ಎಂದು ಕುರ್ಚಿಯಲ್ಲಿ ಕುಸಿದು ಕುಳಿತರು.

* * *

ಹದಿವಯಸ್ಸಿನ ಹಲವಾರು ಮುಖಗಳಲ್ಲಿ, ಕೆಲವನ್ನು ಆಯ್ದು ಇಲ್ಲಿ ಕೊಟ್ಟಿದ್ದೇನೆ. ಈ ಮುಖಗಳು ಎಲ್ಲರಿಗೆ ಸುಪರಿಚಿತ. ಇದರಲ್ಲಿ ಒಂದಾದರೂ ನಮ್ಮ ಬಾಳಿನಲ್ಲೇ ನಡೆದಿರುವಂಥಾದ್ದು. ಉಳಿದವೆಲ್ಲ ನಮ್ಮ ಸುತ್ತ ಮುತ್ತ ಪ್ರತಿದಿನ ನಡೆಯುವಂಥಾದ್ದು. ಇದು ಸಾಮಾನ್ಯ ವಿಚಾರಗಳಾದರೆ ಅಸಾಮಾನ್ಯ ವಿಚಾರಗಳೂ ಇದ್ದಾವೆ. ಅವುಗಳನ್ನು ಅರ್ಥಮಾಡಿಕೊಂಡು ನಿಭಾಯಿಸುವುದರಲ್ಲಿ ಒಬ್ಬ ವ್ಯಕ್ತಿಯ, ಒಂದು ಕುಟುಂಬದ, ಒಂದು ಊರಿನ, ಒಂದು ಸಮುದಾಯದ ಭವಿಷ್ಯವೇ ಅಡಗಿದೆ.

ಹರೆಯ ಬಾಳಿನ ವಸಂತ ಋತು. ಬಾಲ್ಯದ ಮುಗ್ಧತೆ, ಪರಾವ ಲಂಬನೆ, ಅಸಹಾಯಕತೆಯ ಚಿಪ್ಪನ್ನು ಕಳಚಿ, ಮೈಮನಸ್ಸುಗಳು ವಿಕಾಸ ಹೊಂದಿ, ಎಲೆ, ಹೂ ಹಣ್ಣು ಬಿಡುವ ಕಾಲ. ಹದಿಮೂರನೇ ವಯಸ್ಸಿ ನಿಂದ ಇಪ್ಪತ್ತು ಇಪ್ಪತ್ತೊಂದು ವರ್ಷ ವಯಸ್ಸಿನವರೆಗೆ ಹರಡಿಕೊಳ್ಳುವ ಹರೆಯದ ಕಾಲದಲ್ಲಿ ಏನೂ ಅರಿಯದ ಮಗು, ಬೆಳೆದು ಪ್ರೌಢವ್ಯಕ್ತಿಯಾಗುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಪವಾಡ ಸದೃಶ ಬದಲಾವಣೆ, ಬೆಳವಣಿಗೆ ನಡೆದು ಹೋಗುತ್ತವೆ. ವ್ಯಕ್ತಿಯ ವ್ಯಕ್ತಿತ್ವ ರೂಪುಗೊಂಡು, ಎಲ್ಲ ಗುಣ ಲಕ್ಷಣಗಳು ಮೇಳಯಿಸುತ್ತವೆ. ಗಂಡಿನ ಪುರುಷತ್ವದ ಮನೋದೈಹಿಕ ಲಕ್ಷಣಗಳು, ಹೆಣ್ಣಿನ ಸ್ತ್ರೀತನದ ಮನೋದೈಹಿಕ ಲಕ್ಷಣಗಳು ಪೂರ್ಣವಾಗಿ ವಿಕಸಿತಗೊಳ್ಳುತ್ತವೆ. ಅದುವರೆಗೆ ಚಡ್ಡಿ, ಅಂಗಿ ತೊಟ್ಟುಕೊಂಡು ಗೋಲಿ, ಬುಗುರಿ, ಚಿಣ್ಣಿದಾಂಡು ಆಡುತ್ತಾ ಅಪ್ಪ ಅಮ್ಮನನ್ನು ಪೀಡಿಸಿ ಪೆಪ್ಪರಮೆಂಟು, ಚಾಕಲೇಟು, ಐಸ್‌ಕ್ರೀಮನ್ನು ಮೆಲ್ಲುತ್ತಾ ಓಡಾಡುತ್ತಿದ್ದ ಪುಟ್ಟ ಹುಡುಗ, ಹರೆಯಕ್ಕೆ ಕಾಲಿಡುತ್ತಿದ್ದಂತೆಯೇ ಒಂದೆರಡು ವರ್ಷ ಅವಧಿಯಲ್ಲೇ ಎತ್ತರಕ್ಕೆ ಬೆಳೆಯುತ್ತಾನೆ. ಕೈ ಕಾಲು, ಕುತ್ತಿಗೆ, ಎದೆಯ ಮಾಂಸ ಖಂಡಗಳು ಹುರಿಗೊಳ್ಳುತ್ತವೆ. ಮುಖದ ಮೇಲೆ ಚಿಗುರು ಮೀಸೆ, ಗಡ್ಡ ಕಾಣಿಸಿಕೊಳ್ಳುತ್ತವೆ. ಧ್ವನಿ ಒಡೆಯುತ್ತದೆ. ಇದರ ಜೊತೆಗೆ ಕಂಕುಳು ಮತ್ತು ಜನನಾಂಗದ ಸುತ್ತ ಕೂದಲುಗಳು ಮೂಡುತ್ತವೆ. ಜನನಾಂಗಗಳು ದೊಡ್ಡವಾಗಿ, ಶಿಶ್ನ ಉದ್ರೇಕಗೊಳ್ಳುತ್ತದೆ. ವೀರ್ಯದ ಉತ್ಪತ್ತಿ ಪ್ರಾರಂಭವಾಗಿ, ಆಗಿಂದಾಗ್ಯೆ ನಿದ್ರೆಯಲ್ಲಿ ವೀರ್ಯ ಸ್ಖಲನವಾಗ ತೊಡಗುತ್ತದೆ. ಲೈಂಗಿಕ ಭಾವನೆಗಳು ಗರಿಗೆದರುತ್ತವೆ. ರಸ್ತೆಯಲ್ಲಿ ಹೋಗುವಾಗ, ಸಭೆ ಸಮಾರಂಭಗಳಲ್ಲಿ, ಸಹ ಶಿಕ್ಷಣವಿರುವ ಶಾಲಾ ಕಾಲೇಜುಗಳಲ್ಲಿ, ಅಕ್ಕಪಕ್ಕದಲ್ಲಿ ಕಾಣಸಿಗುವ ಹುಡುಗಿಯರತ್ತ, ಪ್ರೌಢ ಮಹಿಳೆಯರತ್ತ ಕಳ್ಳ ನೋಟ ಬೀರುತ್ತಾನೆ. ತಾನು ಬೆಳೆದು ಪ್ರೌಢನಾಗುತ್ತಿದ್ದೇನೆ, ಕುಟುಂಬದ ಮುಖ್ಯ ವ್ಯಕ್ತಿಯಾಗಲಿದ್ದೇನೆ, ತನ್ನನ್ನು ಇತರರು ಮಾನ್ಯ ಮಾಡಬೇಕೆಂದು ನಿರೀಕ್ಷಿಸತೊಡಗುತ್ತಾನೆ.

ಹಾಗೆಯೇ ಲಂಗ, ಫ್ರಾಕ್ ಹಾಕಿಕೊಂಡು, ಜಿಗಿಯುತ್ತಾ, ಕುಂಟೇಬಿಲ್ಲೆಯಾಡುತ್ತಾ, ಬೊಂಬೆಗಳನ್ನಿಟ್ಟುಕೊಂಡು ಆಟವಾಡುತ್ತಾ, ಬಣ್ಣ ಬಣ್ಣದ ಬಳೆ, ನಾನಾರೂಪಿನ ಓಲೆ, ಸರಗಳನ್ನು ಕೊಂಡುಕೊಂಡು ಧರಿಸಿ ಒಗ್ಗುತ್ತಾ ಓಡಾಡುತ್ತಿದ್ದ ಹೆಣ್ಣು ಮಗು, ಒಂದೆರಡು ವರ್ಷಗಳಲ್ಲೇ ಎತ್ತರಕ್ಕೆ ಬೆಳೆದು ಹೆಂಗಸಾಗಿ ಬಿಡುತ್ತಾಳೆ. ಎದೆ ಉಬ್ಬಿ ಮೈಕೈ ತುಂಬಿಕೊಂಡು, ಹೆಣ್ತನದ ಆಕರ್ಷಣೆಯನ್ನು ಪಡೆಯುತ್ತವೆ. ಲಂಗದ ಮೇಲೆ ದಾವಣಿ, ಅನಂತರ ಸೀರೆ ಆಕೆಯ ಒಡಲನ್ನು ಅಲಂಕರಿಸುತ್ತದೆ. ಈ ಮೊದಲು ಗಂಡು ಹುಡುಗರೊಂದಿಗೆ, ನಿಸ್ಸಂಕೋಚವಾಗಿ ಆಟವಾಡುತ್ತಿದ್ದಾಕೆ, ಈಗ ನಾಚಿ, ಜೊತೆ ಹೆಣ್ಣು ಮಕ್ಕಳೊಂದಿಗೇ ಹೆಚ್ಚು ಬೆರೆಯುತ್ತಾಳೆ. ಈ ನಡುವೆ ಒಂದು ದಿನ ದಿಢೀರ್ ಎಂದು ಋತುಮತಿಯಾಗುತ್ತಾಳೆ. ಋತು ಚಕ್ರ ಪ್ರಾರಂಭವಾಗುತ್ತದೆ. ಅಂಡಾಶಯದಿಂದ ಪ್ರಥಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಡಾಣು ಹೊರಬಿದ್ದು, ಗರ್ಭನಾಳವನ್ನು ಸೇರುತ್ತದೆ. ಗರ್ಭಧಾರಣೆ ಮಾಡಲು. ಸಂತಾನೋತ್ಪತ್ತಿ ಮಾಡಲು ಆಕೆಯ ಶರೀರ ಪೂರ್ಣವಾಗಿ ಸಜ್ಜು ಗೊಳ್ಳುತ್ತದೆ.

ಅಂದರೆ ಪ್ರಕೃತಿ ಹರೆಯದ ಅವಧಿಯಲ್ಲಿ ಗಂಡು ಮತ್ತು ಹೆಣ್ಣನ್ನು ಸಂತಾನೋತ್ಪತ್ತಿಗೆ ಅಣಿಮಾಡುತ್ತದೆ. ವೀರ್ಯಸ್ಖಲನವಾಗುವ ಹುಡುಗ, ಋತುಮತಿಯಾದ ಹುಡುಗಿ ಈಗ ತಂದೆತಾಯಿ ಆಗಲು ಸಿದ್ಧರಾಗಿದ್ದಾರೆ ಎಂದು ಸೂಚಿಸಲ್ಪಡುತ್ತದೆ. ಇದಕ್ಕೆ ಪೂರಕವಾಗಿ ಲೈಂಗಿಕ ಆಸೆ, ಭಾವನೆ, ಬಯಕೆಗಳು ಮೂಡತೊಡಗುತ್ತವೆ. ಸಾಮಾಜಿಕ ವ್ಯವಸ್ಥೆಯಲ್ಲಿ ತಂದೆ ತಾಯಿ ಆಗುವ ಮೊದಲು, ತಂದೆ ತಾಯಿಯಾಗಿ ಜವಾಬ್ದಾರಿ ಹೊರಲು ಅನೇಕ ಸಿದ್ಧತೆಗಳನ್ನು ಮಾಡಬೇಕಾಗುತ್ತದೆ. ಗಂಡು, ಉದ್ಯೋಗ ಹಿಡಿದು ಸಂಪಾದಿಸಬೇಕಾಗುತ್ತದೆ. ಹೆಣ್ಣು ಮನೆಗೆಲಸ ಕಲಿತು ಗೃಹಿಣಿಯಾಗಲು ತರಬೇತಿ ಪಡೆಯಬೇಕಾಗುತ್ತದೆ. ಈಗಿನ ಸಮುದಾಯ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ಮತ್ತು ವೃತ್ತಿ ಪೂರ್ವ ಶಿಕ್ಷಣ, ಹರೆಯದ ಕೊನೇ ಹಂತದವರೆಗೆ ಮತ್ತು ಅನಂತರವೂ ಮುಂದುವರೆಯುವುದರಿಂದ, ಹರೆಯದವರು ಈ ಹಂತ ದಲ್ಲಿ ಬಹಳಷ್ಟು ಒತ್ತಡಗಳನ್ನು ಎದುರಿಸುತ್ತಾರೆ. ಯಾವುದಕ್ಕೆ ಎಷ್ಟು ಮತ್ತು ಎಷ್ಟು ಕಾಲ ಪ್ರಾಶಸ್ತ್ಯ ಕೊಡಬೇಕೆಂದು ತಿಳಿಯದೆ ಗೊಂದಲದಲ್ಲಿ ಬೀಳುತ್ತಾರೆ. ಆಗ ಕುಟುಂಬದವರಿಂದ, ಸಂಬಂಧಪಟ್ಟವರಿಂದ, ಪರಿಸರ ದಿಂದ ದೊರೆಯುವ ಮಾದರಿ, ಮಾರ್ಗದರ್ಶನ ಬಹು ಮುಖ್ಯವಾಗುತ್ತದೆ. ಹರೆಯದವರು ಈ ಅವಧಿಯಲ್ಲಿ ಸಾಕಷ್ಟು ತಪ್ಪು ಮಾಡುತ್ತಾರೆ. ಕೈ ಸುಟ್ಟು ಕೊಳ್ಳುತ್ತಾರೆ. ಅಡ್ಡದಾರಿ ಹಿಡಿದು ಸಂಕಟ, ನೋವನ್ನು ಅನುಭವಿಸುತ್ತಾರೆ. ಹರೆಯದ ಹಿತವಾದ, ಅಹಿತವಾದ, ನೋವು ನಲಿವುಗಳಿಂದ, ತಮ್ಮ ಅನುಭವವನ್ನು ಹೆಚ್ಚಿಸಿಕೊಂಡು, ಪ್ರೌಢರಾಗುತ್ತಾರೆ.

ಹರೆಯದಲ್ಲಿ ತನ್ನತನದ ಗುರುತಿಸುವಿಕೆ

ತಾಯಿ ಗರ್ಭದಲ್ಲಿ, ಗರ್ಭಕ್ಕೆ ಅಂಟಿಕೊಂಡು, ತಾಯಿಯ ಶರೀರದಿಂದ ಆಹಾರ, ಪೋಷಣೆ ಪಡೆದು, ಬೆಳೆದು ಒಂಬತ್ತು ತಿಂಗಳ ನಂತರ, ಹೊರಬರುವ ಮಗು ಹುಟ್ಟಿದ ಕೂಡಲೇ ಶಾರೀರಕವಾಗಿ ತಾಯಿಯಿಂದ ಪ್ರತ್ಯೇಕಗೊಳ್ಳು ತ್ತದೆಯಾದರೂ, ಮಾನಸಿಕವಾಗಿ, ತಾನು ತಾಯಿಯ ದೇಹದ ಒಂದು ವಿಸ್ತೃತ ಭಾಗ ಎಂದು ಭಾವಿಸುತ್ತದೆ ಎನ್ನುತ್ತಾನೆ ಮನೋ ವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್. ತಾಯಿಯ ಮೊಲೆ ಚೀಪಿ, ಬದುಕಲು

Sri Vidyabharathi Book Centre Sringeri

CC-O. In Public Domain. Digitized by eGangotri

ಅವಶ್ಯಕವಾದ ಹಾಲನ್ನು ಪಡೆದು ಈ ಭಾವನೆಯನ್ನು ಮತ್ತಷ್ಟು ಗಾಢವಾಗಿಸುತ್ತದೆ. ಒಂದೂವರೆ ಎರಡು ವರ್ಷದ ವೇಳೆಗೆ ತಾನು ಬೇರೆ, ತಾಯಿ ಬೇರೆ, ತನಗೊಂದು ಪ್ರತ್ಯೇಕ ಅಸ್ತಿತ್ವವಿದೆ ಎಂಬುದನ್ನು ಅರಿಯುತ್ತದೆ. ನಾನು, ನನಗೆ, ನನ್ನದು ಎಂಬ ಅರಿವು ಮೂಡತೊಡಗುತ್ತದೆ. ಪ್ರತ್ಯೇಕ ಅಸ್ತಿತ್ವವಿದ್ದರೂ, ತಾನು ಪರಾವಲಂಬಿ, ತನ್ನ ಇರುವಿಕೆಗೆ ತಂದೆ ತಾಯಿಯೇ ಆಧಾರ, ಅವರು ಹೇಳಿದಂತೆ ಮಾಡಬೇಕು. ಅವರು ಮೆಚ್ಚಿದ್ದನ್ನು ಮೆಚ್ಚಿ, ಮೆಚ್ಚದಿದ್ದನ್ನು ದೂರಮಾಡಿ ಅವರ ನೆರಳಿನಂತೆ ಬದುಕಬೇಕು. ಅವರು ನಡೆದ ದಾರಿಯಲ್ಲಿಯೇ ನಡೆಯಬೇಕು ಎಂದು ತಿಳಿಯತೊಡಗುತ್ತದೆ. ಆದರೆ ಹರೆಯಕ್ಕೆ ಬರುತ್ತಿದ್ದಂತೆ ಹೊಸ ಲೋಕವೊಂದು ವ್ಯಕ್ತಿಯ ಮುಂದೆ ತೆರೆದುಕೊಳ್ಳುತ್ತದೆ. ಅತ್ಯಲ್ಪ ಅವಧಿಯಲ್ಲಿ ತಂದೆ, ತಾಯಿಯಷ್ಟೇ ದೊಡ್ಡದಾದ ದೇಹ ತನ್ನದಾಗುತ್ತದೆ. ಅವರಿಗಿಂತಲೂ ಹೆಚ್ಚಿನ ಉತ್ಸಾಹ, ಮಾಂಸಖಂಡಗಳ ಶಕ್ತಿ ತನಗೆ ದೊರೆತಿದೆ. ಅವರು ಮಾಡಿದಂತೆಯೇ ತಾನೂ ಸಂತಾನೋತ್ಪತ್ತಿ ಮಾಡಬಲ್ಲೆ. ಅಂದರೆ ತನ್ನದು ಸಂಪೂರ್ಣ ಸ್ವತಂತ್ರ ವ್ಯಕ್ತಿತ್ವ, ಅಸ್ತಿತ್ವ. ಆದರೆ ಈ ಕುಟುಂಬ, ಸಾಮಾಜಿಕ ವ್ಯವಸ್ಥೆಯಲ್ಲಿ ನನ್ನ ಸ್ಥಾನಮಾನವೇನು ? ಎಂದು ಯೋಚಿಸುತ್ತಾನೆ. ಮನೆಯವರು ಮತ್ತು ಸುತ್ತಮುತ್ತಲಿನವರು ಅವನಿಗೆ ಗಲಿಬಿಲಿ ಮಾಡುತ್ತಾರೆ. ಒಮ್ಮೆ 'ನೀನಿನ್ನೂ ಮಗು. ದೂರ ಸರಿ. ನಮ್ಮ ಮಾತಿನ, ವ್ಯವಹಾರದ ನಡುವೆ ಬರಬೇಡ' ಎಂದು ಕಜ್ಜಿನಾಯನ್ನು ಅಟ್ಟುವ ಹಾಗೆ ಅಟ್ಟುತ್ತಾರೆ. ಮಗದೊಮ್ಮೆ 'ಈಗ ನೀನು ದೊಡ್ಡವನಾದೆಯಪ್ಪ. ಜವಾಬ್ದಾರಿ ತಗೋ. ನಮ್ಮ ಸಮಾನವಾಗಿ ದುಡಿ, ಸವಲತ್ತುಗಳನ್ನು ಅನುಭವಿಸು, ನಮ್ಮ ಕಾಲ ಮುಗಿಯುತ್ತಾ ಬಂತು. ಇನ್ನು ನಿನ್ನ ಸರದಿ' ಎನ್ನುತ್ತಾರೆ. 'ಎಳೆ ನಿಂಬೇಕಾಯಿ ನಿನಗೇನು ಗೊತ್ತು, ಸುಮ್ಮನೆ ಬಿದ್ದಿರು' ಎಂದು ಒಂದು ಸಂದರ್ಭದಲ್ಲಿ ಹಂಗಿಸಿದರೆ, 'ಯಾಕೆ ಹಿಂದೆ ಬೀಳುತ್ತೀ. ಬಾ, ಮುನ್ನುಗ್ಗು' ಎಂದು ಮತ್ತೊಂದು ಸಂದರ್ಭದಲ್ಲಿ ಹುರಿದುಂಬಿಸುತ್ತಾರೆ. ಈ ಗೊಂದಲದಲ್ಲಿ ತಾನೆಲ್ಲಿದ್ದೇನೆ, ಎಲ್ಲಿರಬೇಕು, ಹೇಗಿರಬೇಕು ಎಂದು ತಿಳಿಯದೆ ಹರೆಯದ ವ್ಯಕ್ತಿ ದಿಙ್ಮೂಢನಾಗುತ್ತಾನೆ. ತನ್ನತನವನ್ನು ಗುರುತಿಸುವ ಕಾರ್ಯದಲ್ಲಿ ಅಡ್ಡಿ ಆತಂಕವನ್ನು ಎದುರಿಸುತ್ತಾನೆ. ಇದನ್ನೇ ಮನೋವಿಜ್ಞಾನಿ ಎರಿಕ್ ಎರಿಕ್‌ಸನ್ 'ಐಡೆಂಟಿಟಿ ಕ್ರೈಸಿಸ್' ಎನ್ನುತ್ತಾನೆ. ತನ್ನತನವನ್ನು ಗುರುತಿಸಿಕೊಳ್ಳುವ ಭರದಲ್ಲಿ ಸುತ್ತ ಮುತ್ತಲಿನ ಮುಖ್ಯ ವ್ಯಕ್ತಿಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳಲು ಪ್ರಾರಂಭಿಸುತ್ತಾನೆ. "ನಾಯಕಪೂಜೆ"

Sri Vidyabharathi Book Centre, Sringeri

 CC-O. In Public Domain. Digitized by eGangotri

(ಹೀರೋ ವರ್ಷಿಪಿಂಗ್) ಶುರುವಾಗುತ್ತದೆ. ಚಿತ್ರತಾರೆಯನ್ನೋ, ಕ್ರೀಡಾ ಪಟುವನ್ನೋ, ಸ್ಥಳೀಯ ನಾಯಕನೊಬ್ಬನನ್ನೋ ಆರಾಧಿಸತೊಡಗುತ್ತಾನೆ. ನಾನು ಅವನಂತಾಗಬೇಕು. ನಾನೇ ಅವನು. ಅವನೇ ನಾನು. ನಾನು ಮಾಡಲಾಗದಿದ್ದರೇನಂತೆ ಅವನು ಮಾಡಿದರೆ ನಾನು ಮಾಡಿದಂತೆಯೇ. ಅವನಿಗೆ ಜಯವಾದರೆ ನನಗೆ ಜಯವಾದಂತೆಯೇ. ಅವನಿಗೆ ಸೋಲು, ಅವಮಾನ, ದುಃಖವಾದರೆ ನನಗೆ ಸೋಲು, ಅವಮಾನ. ದುಃಖವಾದಂತೆಯೇ ಎಂದು ಪ್ರತಿಸ್ಪಂದಿಸುತ್ತಾನೆ, ತೃಪ್ತಿ ಪಡುತ್ತಾನೆ. ಇದು ಎಷ್ಟು ಅತಿರೇಕಕ್ಕೆ ಹೋಗಬಲ್ಲದೆಂದರೆ ಹರೆಯದ ವ್ಯಕ್ತಿಗೆ ಯಾರಾದರೂ ಅವನ ನೆಚ್ಚಿನ ಹೀರೋವನ್ನು ಟೀಕಿಸಿದ್ದು, ಹೀಯಾಳಿಸಿದ್ದು ಗೊತ್ತಾದರೆ, ನೇರವಾಗಿ ಅವರ ಮೇಲೆ ಆಕ್ರಮಣ ಮಾಡುತ್ತಾನೆ. ಅವರನ್ನು ಶಿಕ್ಷಿಸಲು ಬಯಸುತ್ತಾನೆ. ತನ್ನ ಹೀರೋ ಕಷ್ಟದಲ್ಲಿದ್ದಾನೆಂದರೆ, ತನ್ನ ಸರ್ವಸ್ವವನ್ನೂ ಕೊನೆಗೆ ಪ್ರಾಣವನ್ನೂ ಕೊಡಲೂ ತಯಾರಾಗುತ್ತಾನೆ. ಪ್ರಾಣಾರ್ಪಣೆ ಮಾಡಲೂಬಹುದು.

ಹರೆಯದ ಒಂದು ಹಂತದಲ್ಲಿ ಈ ಐಡೆಂಟಿಟಿ ಕ್ರೈಸಿಸ್ ನಿವಾರಣೆಯಾಗುತ್ತದೆ. ಆರೋಗ್ಯವಂತನಾದ ವ್ಯಕ್ತಿ ವಾಸ್ತವಿಕ ಅಂಶಗಳ ಆಧಾರದ ಮೇಲೆ ತಮ್ಮತನವನ್ನು ಗುರುತಿಸಿಕೊಂಡು ಜೀವನದಲ್ಲಿ ತಮ್ಮ ನೆಲೆ-ಬೆಲೆಯನ್ನು ಕಂಡುಕೊಳ್ಳುತ್ತಾರೆ. ಆದರೆ ಬಹುತೇಕ ಜನ ತಮ್ಮ ನೆಲೆ ಬೆಲೆಯನ್ನು ಕಂಡುಕೊಳ್ಳುವುದೇ ಇಲ್ಲ. ಪ್ರವಾಹದಲ್ಲಿ ತೇಲುತ್ತಾ ಅದು ಸಾಗಿಸಿದೆಡೆಗೆ ಹೋಗುವಂತೆ, ಹತ್ತರಲ್ಲಿ, ನೂರರಲ್ಲಿ ಒಬ್ಬರಾಗಿ, ಅನಾಥ ಪ್ರಜ್ಞೆಯಿಂದ ಹೇಗೋ ಬದುಕು ಸಾಗಿಸುತ್ತಾರೆ. ಭರಿಸಲಾಗದ ಕಷ್ಟ ಸಮಸ್ಯೆಗಳು ಎದುರಾದಾಗ ಮಾನಸಿಕ ನೆಮ್ಮದಿ, ಸಮತೋಲನವನ್ನು ಬೇಗ ಕಳೆದುಕೊಂಡು, ಮನೋರೋಗಿಗಳಾಗುತ್ತಾರೆ.

ಕೆಲವು ಸಲ ಹರೆಯದ ವ್ಯಕ್ತಿ, ಇನ್ನೊಬ್ಬ ಪ್ರೌಢ ವ್ಯಕ್ತಿಯಲ್ಲಿ ತನ್ನನ್ನು ಗುರುತಿಸಿಕೊಳ್ಳದೆ ಒಂದು ಸಿದ್ಧಾಂತ, ಮೌಲ್ಯ ವ್ಯವಸ್ಥೆಯಲ್ಲಿ ತನ್ನನ್ನು ತಾನೇ ಗುರುತಿಸಿಕೊಳ್ಳಬಹುದು. ಉದಾಹರಣೆಗೆ ಹರೆಯದವರು ಗಾಂಧಿವಾದಿಗಳಾಗಬಹುದು. ಕಮ್ಯೂನಿಸ್ಟ್ ತತ್ವದ ಪ್ರತಿಪಾದಕರಾಗಬಹುದು. ಆದರ್ಶದ ಗೀಳು ಹತ್ತಿಸಿಕೊಂಡು ಸಮಾಜ ಸೇವೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬಹುದು. ಸನ್ಯಾಸತ್ವವನ್ನು ಸ್ವೀಕರಿಸಬಹುದು. ಯಾವುದೇ ತತ್ವವನ್ನು ಅನುಸರಿಸಲಿ, ಮಾರ್ಗ ತುಳಿಯಲಿ ಅದರಲ್ಲಿ ಸಂಪೂರ್ಣ ಬದ್ಧರಾಗಿರುವುದು (ಕಮಿಟ್‌ಮೆಂಟ್) ಹರೆಯದವರ ವೈಶಿಷ್ಟ್ಯ. ಒಂಟಿಯಾಗಿದ್ದರೆ, ತಾವು ಅನಾಥರಂತೆ, ಆಸಕ್ತಿ ಇಲ್ಲದವರಂತೆ ಎನಿಸಿ ಯಾವಾಗಲೂ ಗುಂಪಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿರಲು, ಒಟ್ಟಿಗಿದ್ದು ಕೆಲಸ ಮಾಡಲು ಹರೆಯದವರು ಇಷ್ಟ ಪಡುತ್ತಾರೆ. ಹೀಗೆ ಐಡೆಂಟಿಟಿ ಕ್ರೈಸಿಸ್, ಹರೆಯದಲ್ಲಿ ಒಂದು ಪ್ರಮುಖ ಸಮಸ್ಯೆ ಹಾಗೂ ವ್ಯಕ್ತಿ ಅದನ್ನು ಹೇಗೆ ಪರಿಪರಿಸಿಕೊಳ್ಳುತ್ತಾನೆ, ತನ್ನ ನೆಲೆಯನ್ನು ಕಂಡುಕೊಳ್ಳುತ್ತಾನೆ ಎಂಬುದು ಮುಖ್ಯ ವಿಚಾರ.

ಹರೆಯದ ಬೆಳವಣಿಗೆ ಮತ್ತು ವೈಶಿಷ್ಟ್ಯವನ್ನು ವಿವರಿಸುತ್ತಾ ಮತ್ತೊಬ್ಬ ಮನೋವಿಜ್ಞಾನಿ ಹ್ಯಾರಿಸ್ಟ್ಯಾಕ್ ಸಲ್ಲೈವನ್ ಈ ರೀತಿ ಬರೆಯುತ್ತಾನೆ.

ಹರೆಯ ಪೂರ್ವದಲ್ಲಿ ವ್ಯಕ್ತಿ ತನ್ನ ಒಂಟಿತನವನ್ನು, ಗೊಂದಲವನ್ನು ನಿವಾರಿಸಿಕೊಳ್ಳಲು ತನ್ನದೇ ವಯಸ್ಸಿನ ವ್ಯಕ್ತಿಯೊಂದಿಗೆ ಗಾಢವಾದ ಸ್ನೇಹ ಬೆಳೆಸುತ್ತಾನೆ. ಗಳಸ್ಯ ಕಂಠಸ್ಯ ಸ್ನೇಹ ಈ ವಯಸ್ಸಿನಲ್ಲಿ ಕಂಡು ಬರುತ್ತದೆ. ಹರೆಯಕ್ಕೆ ಕಾಲಿಡಲು ಸಜ್ಜಾಗಿರುವ ಇಬ್ಬರು ಹುಡುಗರು ಅಥವಾ ಇಬ್ಬರು ಹುಡುಗಿಯರು ಸದಾ ಜೊತೆ ಜೊತೆಯಾಗೇ ಇರುವುದನ್ನು ಕಾಣಬಹುದು. ಮನೆಯವರು, ನೋಡಿದವರು ಇವರನ್ನು 'ಗಂಡ–ಹೆಂಡತಿ' ಎಂದು ರೇಗಿಸುವ ಮಟ್ಟಿಗೆ ಅನ್ಯೋನ್ಯತೆ, ಬಿಟ್ಟೂ ಬಿಡದ, ಸ್ನೇಹ ಸಂಬಂಧ ಇರುತ್ತದೆ.

ಹರೆಯದ ಪ್ರಾರಂಭದಲ್ಲಿ ಜನನಾಂಗದಲ್ಲಿ ಆಸಕ್ತಿ ಹೆಚ್ಚುತ್ತದೆ. ಜೊತೆಗೆ ಹುಡುಗಿಯೊಬ್ಬಳಲ್ಲಿ ಆತ್ಮೀಯ ಭಾವನೆ, ಸಂಬಂಧ ಇಟ್ಟುಕೊಳ್ಳಲು ಬಯಕೆಯಾಗುತ್ತದೆ. ವಾಸ್ತವಿಕವಾಗಿ ಇದು ಸಾಧ್ಯವಾಗದಿದ್ದಾಗ ತನ್ನ ಕಲ್ಪನೆಯ ವ್ಯಕ್ತಿಯೊಂದಿಗೆ (ಸಹಪಾಠಿ/ನೆರೆಹೊರೆ/ಸಿನೆಮಾ ನಟಿ ಇತ್ಯಾದಿ) ಈ ಬಾಂಧವ್ಯವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ಬಗೆಯ ಅವಶ್ಯಕತೆಗಳಿಗೂ, ಸಾಮಾಜಿಕ ವ್ಯವಸ್ಥೆಗೂ ಘರ್ಷಣೆ ಸಂಭವಿಸಬಹುದಾದ್ದರಿಂದ, ಹರೆಯದ ವ್ಯಕ್ತಿ ಆತಂಕಕ್ಕೀಡಾಗುತ್ತಾನೆ. ಮನಸ್ಸು ದ್ವಂದ್ವದ ಮಡುವಾಗುತ್ತದೆ. ಈ ಹಂತದಲ್ಲಿ ತಂದೆ ತಾಯಿ ತಮ್ಮ ಹಿಂದಿನ ಅಹಿತ ಅನುಭವಗಳಿಂದಾಗಿ, ತಮ್ಮ ಹರೆಯದ ಮಗ–ಅಥವಾ ಮಗಳ ಈ ಲೈಂಗಿಕ ಆಸೆ, ವರ್ತನೆಗಳಿಗೆ ಅತಿಯಾದ ಕಡಿವಾಣ ಹಾಕುತ್ತಾರೆ. ಒಳ್ಳೆಯ ನಡವಳಿಕೆ, ನೈತಿಕ, ಧಾರ್ಮಿಕ ಕಟ್ಟು ಕಟ್ಟಳೆಗಳ ಹೆಸರಿನಲ್ಲಿ, ಹರೆಯದವರ ಆಸೆ, ಕಲ್ಪನೆಗಳು ತಪ್ಪು ಎಂದು ಸೂಚಿಸಿ, ಅವರಲ್ಲಿ ಪಾಪ ಪ್ರಜ್ಞೆ ಬೆಳೆಸುತ್ತಾರೆ. ಇದು ಹೇಗೆ ಒಂದು ಪರಿಹಾರ ಕಂಡುಕೊಳ್ಳುತ್ತದೆ ಎನ್ನುವುದರ ಮೇಲೆ, ವ್ಯಕ್ತಿಯ ಮಾನಸಿಕ ಬೆಳವಣಿಗೆ ಮತ್ತು ದೃಢತೆ ನಿರ್ಧಾರವಾಗುತ್ತದೆ. ಹರೆಯದ ಉತ್ತರಾರ್ಧದಲ್ಲಿ ವ್ಯಕ್ತಿ ತನ್ನ ಲೈಂಗಿಕ ಕಾಮನೆಗಳನ್ನು ಒಂದು ನಿರ್ದಿಷ್ಟ ಬಗೆಯಲ್ಲಿ ಪೂರೈಸಿಕೊಳ್ಳಲು ಶಕ್ತನಾಗುತ್ತಾನೆ. ಹುಡುಗಿಯೊಬ್ಬಳ ಸ್ನೇಹವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪಾದಿಸಿ ಅಥವಾ ಬದಲಿ ಚಟುವಟಿಕೆ ಅಥವಾ ಗುರಿಯನ್ನಿಟ್ಟುಕೊಂಡು (ಕ್ರೀಡೆ, ಲಲಿತ ಕಲೆಗಳು, ವ್ಯಾಯಾಮ, ಹವ್ಯಾಸಗಳು ಇತ್ಯಾದಿ) ಅದರಲ್ಲಿ ಮನಸ್ಸನ್ನು ಪೂರ್ಣವಾಗಿ ತೊಡಗಿಸಿಕೊಳ್ಳುತ್ತಾನೆ. ಜೊತೆಗೆ ಸುತ್ತ ಮುತ್ತಲಿನ ವ್ಯಕ್ತಿಗಳೊಂದಿಗೆ ಸುಲಲಿತವಾದ ಬಾಂಧವ್ಯ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಡೆಸುವ ಕೌಶಲವನ್ನು ಪಡೆದುಕೊಳ್ಳುತ್ತಾನೆ. ಲೈಂಗಿಕ ಕಾಮನೆ ಮತ್ತು ಕ್ರಿಯೆ ಬಗ್ಗೆ ತನ್ನ ಮನಸ್ಸಿನ ಗೊಂದಲಗಳನ್ನು ನಿವಾರಿಸಿ ಕೊಂಡು ಅದರ ಬಗ್ಗೆ ತನ್ನ ವೈಯಕ್ತಿಕ ನೀತಿಯನ್ನು ರೂಪಿಸಿಕೊಳ್ಳುತ್ತಾನೆ. ಪ್ರೌಢ ರೀತಿ ನೀತಿಗಳನ್ನು ಬೆಳೆಸಿಕೊಳ್ಳುತ್ತಾನೆ. ಈ ದಿಸೆಯಲ್ಲಿ ಪ್ರತಿ ಯೊಬ್ಬನೂ ಸಂಪೂರ್ಣವಾಗಿ ಯಶಸ್ವಿ ಆಗುವುದಿಲ್ಲ. ಸರ್ವೇಸಾಧಾರಣವಾಗಿ ಹರೆಯದವರು ಇದರಲ್ಲಿ ಸ್ವಲ್ಪ ಯಶಸ್ಸು ಸ್ವಲ್ಪ ವಿಫಲತೆಯನ್ನು ಅನುಭವಿಸು ತ್ತಾರೆ. ಅವುಗಳ ಪ್ರಮಾಣದ ಮೇಲೆ ಅವರ ವ್ಯಕ್ತಿತ್ವದ ರೂಪುರೇಖೆ ನಿರ್ಧಾರವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಓದಿದ್ದನ್ನು ಮರೆಯುವ ಮಹಾದೇವ

"ಡಾಕ್ಟರೇ, ನಿಮ್ಮನ್ನು ಕನ್ಸಲ್ಟ್ ಮಾಡಬೇಕಿತ್ತು..." ಸಂಕೋಚದಿಂದ ನುಡಿದ ಹುಡುಗನನ್ನು ನೋಡಿದೆ. ಆತ ತೊಟ್ಟ ಬಟ್ಟೆ ಬರೆಗಳಿಂದ ಆತ ಮಧ್ಯಮ ವರ್ಗಕ್ಕೆ ಸೇರಿದವನೆಂದು ಸುಲಭವಾಗಿ ಹೇಳಬಹುದಿತ್ತು.

'ಕೂತುಕೋ. ಏನು ತೊಂದರೆ ನಿನಗೆ? ಧೈರ್ಯವಾಗಿ ಹೇಳು' ಎಂದೆ.

"ಈಸಲ ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕಟ್ಟಬೇಕು. ನಾನು ಕಷ್ಟಪಟ್ಟೇ ಓದುತ್ತಿದ್ದೇನೆ. ಆದರೆ ಓದಿದ್ದು ಬಹುಮಟ್ಟಿಗೆ ಎಲ್ಲ ಮರೆತು ಹೋಗುತ್ತದೆ. ಹೀಗಾಗಿ ಮೊನ್ನೆ ನಡೆದ ಕ್ಲಾಸ್ ಟೆಸ್ಟ್‌ನಲ್ಲಿ ಐವತ್ತೆರಡು ಪರ್ಸೆಂಟ್ ಮಾರ್ಕ್ಸ್ ಬಂತು. ನನ್ನ ಜ್ಞಾಪಕ ಶಕ್ತಿ ಹೆಚ್ಚುವ ಹಾಗೆ ಒಳ್ಳೆ ಔಷಧಿ ಬರೆದುಕೊಡಿ ಸಾರ್."

"ಮರೆತು ಹೋಗುತ್ತದೆ ಎಂದರೇನು...ಅಂದ ಹಾಗೆ ನೀನು ನಿನ್ನ ಹೆಸರನ್ನೇ ಹೇಳಲಿಲ್ಲ."

"ಸಾರಿ ಸಾರ್. ನನ್ನ ಹೆಸರು ಮಹಾದೇವಸ್ವಾಮಿ. ದೇವನ ಹಳ್ಳಿ ನಮ್ಮ ಊರು. ಮರೆತು ಹೋಗುತ್ತೆ ಅಂದರೆ, ಓದಿದ್ದು ಸಮಯಕ್ಕೆ ಸರಿಯಾಗಿ ನೆನಪಿಗೆ ಬರೋದಿಲ್ಲ. ಆಮೇಲೆ ಜ್ಞಾಪಕಕ್ಕೆ ಬರುತ್ತೆ. ಊರು ಕೊಳ್ಳೆ ಯಾದ ಮೇಲೆ ಕೋಟೆ ಬಾಗಿಲು ಹಾಕಿದರು ಅಂತಾರಲ್ಲ ಹಾಗೆ ನನ್ನ ಸ್ಥಿತಿ. ಉದಾಹರಣೆಗೆ ಉಪಾಧ್ಯಾಯರು ನನ್ನನ್ನು ಎಬ್ಬಿಸಿ ಪ್ರಶ್ನೆ ಕೇಳ್ತಾರೆ. ಆ ಪಾಠವನ್ನು ಓದಿರ್ತೇನೆ. ಆದರೆ ಉತ್ತರ ನೆನಪಿಗೆ ಬರೋಲ್ಲ. ಎದೆ ಢವಢವ ಅಂತ ಬಡ್ಕೊಳ್ಳುತ್ತೆ. ಕಾಲುಗಳಲ್ಲಿ ಶಕ್ತಿನೇ ಇಲ್ಲವೇನೋ ಅನ್ನುವಷ್ಟು ಸುಸ್ತು ಕಾಣುತ್ತೆ. ಕೆಲವು ಸಲ ಅನವಶ್ಯಕವಾಗಿ ಅನುಮಾನಗಳು ಶುರುವಾಗ್ತವೆ. ನನಗೆ ಗೊತ್ತಿರೋ ಉತ್ತರ ಸರಿಯೋ ತಪ್ಪೋ. ತಪ್ಪಾಗಿದ್ದರೆ ಕೇಳಿದವರು ನಕ್ಕು ಬಿಡ್ತಾರೆ ಅಂತ ಪೆಕ್ರನ ಹಾಗೆ ಮೇಷ್ಟರ ಮುಖವನ್ನು ನೋಡ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಲ್ತೇನೆ. ಬೇರೆ ಹುಡುಗ ಅದೇ ಉತ್ತರ ಹೇಳಿ, ಅವರಿಂದ ಶಭಾಷ್ ಎನಿಸಿ ಕೊಂಡಾಗ, ನನಗೆ ನಾಚಿಕೆ ಆಗತ್ತೆ. ನನ್ನ ಮೇಲೆ ನನಗೇ ಕೋಪ ಬರ್ತದೆ. ಮೇಷ್ಟರು ಸಹಜವಾಗಿ ದಡ್ಡ ಶಿಖಾಮಣಿ, ಸೋಂಭೇರಿ, ಓದ್ಕೊಂಡು ಬರೋದಕ್ಕೆ ನಿನಗೇನು ಧಾಡಿ ಅಂದಾಗ ಅಳುಬಂದು ಬಿಡತ್ತೆ. ಹೀಗೆ ನಾನು ಓದಿದರೂ, ದಡ್ಡವಿದ್ಯಾರ್ಥಿ ಅನ್ನಿಸ್ಕೊಂಡಿದ್ದೇನೆ. ಯಾಕೆ ಹೀಗೆ ಸಾರ್. ನನ್ನ ಐಕ್ಯೂ ಟೆಸ್ಟ್‌ಮಾಡಿ, ಔಷಧ ಕೊಡಿ ಸಾರ್."

"ಪಠ್ಯ ಪುಸ್ತಕದ ವಿಷಯಗಳು ಮರೆತು ಹೋಗತ್ತೆ ಸರಿ. ಬೇರಾವ ವಿಚಾರಗಳು ಮರೆತು ಹೋಗುತ್ತೆ ?"

"ಬೇರೆ ವಿಚಾರಗಳು ಯಾವುದೂ ಮರೆಯೋಲ್ಲ ಸಾರ್. ನನಗೆ ಕ್ರಿಕೆಟ್ ಆಟ ಅಂದ್ರೆ ಬಹಳ ಇಷ್ಟ. ಆ ಆಟದ ಪ್ರಖ್ಯಾತ ಆಟಗಾರರ ಜೀವನ ವಿವರಗಳು, ಅವರ ಸಾಧನೆಗಳನ್ನು ಕೇಳಿದ ತಕ್ಷಣ ಹೇಳಬಲ್ಲೆ. ಸ್ನೇಹಿತರು ನನ್ನ ಕ್ರಿಕೆಟ್ ಎನ್‌ಸೈಕ್ಲೋಪೀಡಿಯಾ ಅಂತಾರೆ" ಸಂಭ್ರಮದಿಂದ ನುಡಿದ.

"ಹೌದಾ, ವೆರಿಗುಡ್, ಅಂದ ಹಾಗೆ ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದೀರಿ ! ನಿಮ್ಮ ತಂದೆ ಏನು ಕೆಲಸ ಮಾಡುತ್ತಾರೆ !"

"ನಮ್ಮ ಮನೆಯಲ್ಲಿ ನನ್ನ ತಂದೆ ತಾಯಿ, ಒಬ್ಬ ಅಕ್ಕ, ಇಬ್ಬರು ತಮ್ಮಂದಿರಿದ್ದೇವೆ ಸಾರ್. ನಮ್ಮ ತಂದೆಗೆ ವಯಸ್ಸಾಗಿದೆ. ನಾವೆಲ್ಲ ಅವರ ಎರಡನೇ ಹೆಂಡತಿ ಮಕ್ಕಳು. ನಮ್ಮ ತಂದೆ ಒಂದು ಸಣ್ಣ ಚಿಲ್ಲರೆ ಅಂಗಡಿ ಇಟ್ಟಿದ್ದಾರೆ. ಹೊಟ್ಟೆ ಬಟ್ಟೆಗೆ ನೇರ ಅವರ ಸಂಪಾದನೆ. ತಾಯಿಯವರ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ಅಲರ್ಜಿ ಪ್ರಕೃತಿ. ಆಗಾಗ್ಗೆ ಧೂಳಿನಿಂದಾಗಿ ಕೆಮ್ಮು ಉಸಿರಾಟದ ತೊಂದರೆಯಿಂದ ನರಳುತ್ತಾರೆ. ಅಲರ್ಜಿಕ್ ಬ್ರಾಂಕೈಟಿಸ್ ಅಂತೆ ಸಾರ್. ಅಕ್ಕನಿಗೆ ಮದುವೆ ವಯಸ್ಸು, ಮನೆಯಲ್ಲಿ ಮನೆಕೆಲಸ ಮಾಡಿಕೊಂಡಿದ್ದಾಳೆ. ತಮ್ಮಂದಿರಿನ್ನೂ ಚಿಕ್ಕವರು."

"ಮನೆಯಲ್ಲಿ ನಿನ್ನ ಬಗ್ಗೆ ಏನು ಹೇಳುತ್ತಾರೆ. ನಿನಗೆ ಪ್ರೀತಿ ವಿಶ್ವಾಸ ವನ್ನು ತೋರಿಸುತ್ತಾರೆಯೇ?"

"ನಾನೇ ಮನೆಗೆ ದೊಡ್ಡ ಮಗ ಸಾರ್. ನಮ್ಮ ತಂದೆಯ ಮೊದಲ ಹೆಂಡತಿಯ ಮಗ ಇದ್ದರೂ ನಮಗೂ ಅವರಿಗೂ ಯಾವ ಸಂಬಂಧವೂ ಇಲ್ಲ. ಹೀಗಾಗಿ ನೀನೇ ಮನೆಯ ಜವಾಬ್ದಾರಿ ಹೊರಬೇಕು ಅಂತ ತಂದೆ ಆಗಾಗ್ಗೆ ಹೇಳ್ತಿರುತ್ತಾರೆ. ಪ್ರೀತಿ ವಿಶ್ವಾಸಕ್ಕೆ ಕೊರತೆ ಇಲ್ಲ. ಆದರೆ..."

Sri Vidyabharathi Book Centre, Sringeri

"ಆದರೆ...ಅಂದರೆ ಏನು ಮಹಾದೇವ."

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

"ಹೇಗೆ ಹೇಳಲಿ ಸಾರ್. ಕಳೆದ ಒಂದು ವರ್ಷದಿಂದಲೂ ಈ ವಿಷಯ ನನ್ನ ತಲೆ ತಿನ್ನುತ್ತಿದೆ. ನಮ್ಮ ತಂದೆಗೆ ನಾನು ಹೆಚ್ಚು ಓದುವುದು ಬೇಕಿಲ್ಲ. ಹೆಚ್ಚು ಓದಿಸಿದ ಮೊದಲ ಮಗ, ಒಳ್ಳೇ ನೌಕರಿ ಸಿಕ್ಕ ಕೂಡಲೇ ನಮ್ಮನ್ನೆಲ್ಲ ಮರೆತು ಹೋಗಿಬಿಟ್ಟ. ಕೆಲಸ ಮಾಡುವ ಒಬ್ಬಾಕೆಯನ್ನು ಪ್ರೀತಿಸಿ ಮದುವೆಯಾಗಿ ನಮ್ಮೆಲ್ಲರ ಸಂಬಂಧ ಕಳೆದುಕೊಂಡು ಬಿಟ್ಟ. ನೀನೂ ಹಾಗೆ ಮಾಡುವುದು ಬೇಡ. ಓದು ನಿಲ್ಲಿಸಿ ಅಂಗಡಿಗೆ ಬಂದು ಬಿಡು. ನನಗೆ ವಯಸ್ಸಾಯಿತು. ಅಂಗಡಿಯ ಮೇಲೆ ಗಂಟೆಗಟ್ಟಳೆ ಕೂಡಲು ಆಗುವುದಿಲ್ಲ. ಬ್ಯಾಂಕ್‌ನಿಂದ ಸ್ವಲ್ಪ ಹಣ ಸಾಲ ಪಡೆದು, ಇರುವ ಅಂಗಡಿಯನ್ನೇ ವಿಸ್ತರಿಸುವ ಎನ್ನುತ್ತಾರೆ. ನನಗೆ ಓದಬೇಕು ಯಾವುದಾದರೂ ಟೆಕ್ನಿಕಲ್ ಕೋರ್ಸ್‌ಗೆ ಸೇರಬೇಕು ಅಂತ ಆಸೆ. ವ್ಯಾಪಾರ ಮಾಡಿ ಹಣ ಸಂಪಾದನೆ ಮಾಡಬಹುದು ಸಾರ್. ಆದರೆ ವಿದ್ಯೆಯಿಂದ ಬರುವ ಬೆಲೆ, ವ್ಯಾಪಾರದಿಂದ ಬಂದೀತೇ ಸಾರ್. ನನ್ನ ತಾಯಿ ನನಗೆ ಸಪೋರ್ಟ್ ಮಾಡ್ತಿದ್ದಾರೆ. ಇದರಿಂದ ಮನೆಯಲ್ಲಿ ನನ್ನ ವಿಚಾರಕ್ಕಾಗಿ ತಂದೆ ತಾಯಿ ನಡುವೆ ವಾದ ವಿವಾದಗಳಾಗಿವೆ. 'ಎಸ್ಸೆಸ್ಸೆಲ್ಸಿಯಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಮಹದೇವ ಪಾಸಾಗ್ತಾನೆ. ಆಗ ನೀವು ಅವನನ್ನು ಕಾಲೇಜಿಗೆ ಸೇರಿಸಲೇಬೇಕು. ನಮಗಾಗಿ ಅವನ ಆಸೆಗೆ ಮಣ್ಣು ಹಾಕುವುದು ಬೇಡ' ಎಂದಿದ್ದಾಳೆ ಅಮ್ಮ. 'ಅವನು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಲಿ. ಡೊನೇಶನ್ ಇಲ್ಲದಕಾಲೇಜಿನಲ್ಲಿ ಸೀಟು ತೆಗೆದುಕೊಳ್ಳಲಿ. ಆಮೇಲೆ ಮಾತು' ಎಂದಿದ್ದಾರೆ ನಮ್ಮ ತಂದೆ. ಪ್ರತಿದಿನ ಅವರ ಮಾತು ನನ್ನನ್ನು ಕಾಡ್ತಾ ಇದೆ. ನಾನು ಚೆನ್ನಾಗಿ ಓದಬೇಕು ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಬರಬೇಕು. ಆಗಲೇ ನನಗೆ ಒಳ್ಳೆಯ ಭವಿಷ್ಯ. ಅಕಸ್ಮಾತ್, ಒಳ್ಳೆಯ ಮಾರ್ಕ್ಸ್ ಬರದೇ ಹೋದರೆ, ದುರದೃಷ್ಟವಶಾತ್ ಫೇಲ್ ಆಗಿಬಿಟ್ಟರೆ, ನಾನು ಮುಳುಗಿ ಹೋಗುತ್ತೇನೆ. ಆಮೇಲೆ ನಾನು ತಲೆ ಕೆಳಗೆ ಮಾಡಿ ಕಾಲು ಮೇಲೆ ಮಾಡಿ ನಿಂತು ಸತ್ಯಾಗ್ರಹ ಮಾಡಿದರೂ ನಮ್ಮ ತಂದೆ ತಮ್ಮ ಮನಸ್ಸನ್ನು ಬದಲಾಯಿಸುವ ಸಾಧ್ಯತೆ ಇಲ್ಲ. ಇದನ್ನು ನೆನೆಸಿಕೊಂಡರೇ ಭಯವಾಗುತ್ತದೆ ಸಾರ್. ಅದಕ್ಕೋಸ್ಕರ ನಿಮ್ಮನ್ನೇ ನಂಬಿ ಬಂದಿದ್ದೇನೆ. ನನಗೆ ನೀವು ಸಹಾಯ ಮಾಡಬೇಕು" ಮಹಾದೇವನ ಧ್ವನಿ ಭಾರವಾಯಿತು.

'ಮನೆಯಲ್ಲಿ ನೀನು ಹೇಗೆ ಎಷ್ಟು ಕಾಲ ಅಧ್ಯಯನ ಮಾಡುತ್ತೀ?'

'ಶಾಲೆ ಬಿಟ್ಟ [illegible] ಅಂಗಡಿಯಲ್ಲಿ ಕುಳಿತು, ತಂದೆಯವರನ್ನು ತಿಂಡಿ ತಿನ್ನಲು ಮನೆಗೆ ಕಳುಹಿಸುತ್ತೇನೆ. ಅವರು ಬಂದ ಮೇಲೆ ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೆಗೆ ಹೋಗಿ, ಓದಲು ಕುಳಿತುಕೊಳ್ಳುವ ವೇಳೆಗೆ ಏಳು ಘಂಟೆಯಾಗಿರುತ್ತದೆ. ಏಳರಿಂದ ಒಂಭತ್ತು ಮತ್ತು ಹತ್ತರಿಂದ ಹನ್ನೊಂದೂವರೆ ವರೆಗೆ ಓದುತ್ತೇನೆ. ಬೆಳಿಗ್ಗೆ ಒಂದು ಘಂಟೆ ಓದುತ್ತೇನೆ. ಆದರೆ ಈ ಸಮಯ ಸಾಲದು. ಓದುವುದು ಎಷ್ಟೊಂದಿರುತ್ತದೆ. ಅಲ್ಲದೆ ಮರೆವು ಜಾಸ್ತಿಯಾಗಿರುವುದರಿಂದ, ಪ್ರತಿ ಪಾಠವನ್ನು ಎರಡು ಮೂರು ಸಲ ಓದಬೇಕಾಗುತ್ತದೆ.'

'ದಿನದಲ್ಲಿ ಸ್ವಲ್ಪ ಬಿಡುವು ಮಾಡಿಕೊಂಡು ಆಟವಾಡುವುದಿಲ್ಲವೇ?'

'ಇಲ್ಲ ಸಾರ್, ಆಟವೆಂದರೆ ಸಂಜೆ ಹೊತ್ತು ಆಡಬೇಕು. ನಾನು ಅಂಗಡಿಗೆ ಹೋಗಬೇಕಲ್ಲ, ಮನೆಯಲ್ಲಿ ಚೌಕಾಬಾರ, ಕೇರಂ ಆಡಿದರೆ ತಂದೆ ಬೈಯುತ್ತಾರೆ.'

'ಮಹಾದೇವ ನಿನ್ನ ಜ್ಞಾಪಕಶಕ್ತಿ ಕಡಿಮೆಯಾಗಿರಲು ಕಾರಣ ನನಗೆ ಅರ್ಥವಾಯಿತು, ಇದು ತಾತ್ಕಾಲಿಕವಾದ ತೊಂದರೆ, ಸರಿಪಡಿಸಬಹುದಾದಂತಹ ತೊಂದರೆ.'

'ಹೌದಾ ಸಾರ್, ಔಷಧ ಕೊಟ್ಟು ಸರಿಪಡಿಸುತ್ತೀರಾ ?'

'ಔಷಧ ಬೇಕಾಗಿಲ್ಲಪ್ಪ. ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುವಂತ ಔಷಧ ಯಾವುದೂ ಇಲ್ಲ. ನಿನ್ನ ನೆನಪು ಕಡಿಮೆಯಾಗಿರಲು ಕಾರಣ ನಿನಗಿರುವ ಮಾನಸಿಕ ಒತ್ತಡ, ಆತಂಕ. ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದ ಮೇಲೆ ನಿನ್ನ ಮುಂದಿನ ವಿದ್ಯಾಭ್ಯಾಸ ನಿರ್ಧಾರವಾಗುವುದರಿಂದ, ನಿನ್ನ ಮನಸ್ಸಿನ ಮೇಲೆ ಬಹಳ ಒತ್ತಡ ಬಿದ್ದಿದೆ. ಸರಿಯಾದ ಮಾರ್ಕ್ಸ್ ಬರದಿದ್ದರೆ ಏನು ಗತಿ ಎನ್ನುವ ಭಯ ನಿನ್ನನ್ನು ಆವರಿಸಿದೆ. ಹೌದಾ?'

'ಹೌದು ಸಾರ್. ನಿಮ್ಮ ಮಾತು ಅಕ್ಷರಶಃ ನಿಜ'

'ಮನಸ್ಸಿಗೆ ಯಾವಾಗ ಒತ್ತಡ ಹೆಚ್ಚಾಗುತ್ತದೋ, ಭಯ ಆವರಿಸುತ್ತದೆಯೋ, ನೆಮ್ಮದಿ ಇರುವುದಿಲ್ಲವೋ ಆಗ ಅದರ ಕಾರ್ಯ ನಿರ್ವಾಹಕ ಶಕ್ತಿ ಕಡಿಮೆಯಾಗುತ್ತದೆ. ಆದರೆ ನೀನೇ ಹೇಳಿದ ಹಾಗೆ ಕ್ರಿಕೆಟ್ ವಿಚಾರವನ್ನು ತಿಳಿದುಕೊಳ್ಳುವಾಗ, ನಿನಗೆ ಆ ಒತ್ತಡವಿರೋಲ್ಲ. ಆಸಕ್ತಿಯಿಂದ ಆ ವಿಚಾರವನ್ನು ಓದುತ್ತೀಯಾದ್ದರಿಂದ, ಅದರ ಬಗ್ಗೆ ನಿನ್ನ ನೆನಪು ಚೆನ್ನಾಗೇ ಇದೆ. ಆದರೆ ಪಾಠದ ವಿಚಾರಗಳನ್ನು ಓದುವಾಗ, ಹೆಚ್ಚು ಮಾರ್ಕ್ಸ್ ತೆಗೆಯುವ ಅವಶ್ಯಕತೆ, ಆದಾಗದಿದ್ದರೆ ನಿನಗಾಗುವ ಅಪಾಯದ ಅರಿವಿನಿಂದ ನಿನ್ನ ಮನಸ್ಸು ಉದ್ವೇಗಕ್ಕೆ ಈಡಾಗುತ್ತದೆ. ಹೀಗಾಗಿ ನೆನಪಿನ ಕ್ರಿಯೆ ಸರಿಯಾಗಿ ನಡೆಯುವುದಿಲ್ಲ. ಅರ್ಥವಾಯಿತೆ?'

Sri Vidyabharathi Book Centre, Sringeri

'ಹೂಂ ಸಾರ್, ನೀವು ಹೇಳೋದರಲ್ಲಿ ನಿಜವಿದೆ. ಆದರೆ ನನಗೆ

CC-O. In Public Domain. Digitized by eGangotri

ಗೊತ್ತಿಲ್ಲದ ಹಾಗೆ ಈ ಉದ್ವೇಗ ಬಂದು ಬಿಡುತ್ತಲ್ಲ. ಈ ಉದ್ವೇಗವನ್ನು ತಡೆಯೋ ಬಗೆ ಹೇಳ್ಕೊಡಿ.'

'ಗುಡ್, ಜಾಣ ಹುಡುಗ ನೀನು. ನಿನ್ನ ನೆನಪಿನ ಶಕ್ತಿ ಪಾಠದ ವಿಚಾರದಲ್ಲಿ ಕಡಿಮೆಯಾಗೋದಕ್ಕೆ ಉದ್ವೇಗ ಕಾರಣ ಅಂತ ಅರ್ಥ ಮಾಡಿಕೊಂಡೆ. ಚಿಕಿತ್ಸೆಯಲ್ಲಿ ಅರ್ಧ ಭಾಗ ಮುಗಿದಂತಾಯಿತು. . ಉದ್ವೇಗ ಬರೋದಿಕ್ಕೆ ನಿಮ್ಮ ತಂದೆಯ ಧೋರಣೆ ಸ್ವಲ್ಪಮಟ್ಟಿಗೆ ಕಾರಣ ಅಲ್ಲವಾ. ಮುಂದಿನ ಸಲ ಬರುವಾಗ ಅವರನ್ನು ನನ್ನಲ್ಲಿಗೆ ಕರೆದುಕೊಂಡು ಬರ್ತೀಯಾ?'

'ಪ್ರಯತ್ನ ಪಡ್ತೇನೆ ಸಾರ್. ಅವರು ಬಂದಾಗ, ನನ್ನ ಆಸೆ ಬಗ್ಗೆ ಅವರಿಗೆ ಹೇಳಿ ಸಾರ್. ನಾನು ನಮ್ಮ ಅಣ್ಣನ ಹಾಗೆ ಮಾಡೋಲ್ಲ. ನನ್ನ ತಂದೆ ತಾಯಿಗಳ ಕೈ ಬಿಡೋಲ್ಲ. ಅವರನ್ನು ನಾನು ಚೆನ್ನಾಗಿ ನೋಡ್ಕೊಳ್ತೇನೆ. ಓದೋದನ್ನು ಬಿಟ್ಟು ಅಂಗಡೀಲಿ ಕೂತುಕೋ ಅಂತ ಅವರು ಒತ್ತಾಯ ಮಾಡದಿದ್ರೆ ಸಾಕು.'

'ಈ ವಿಚಾರವನ್ನು ಅವರು ಬಂದ ಮೇಲೆ ಖಂಡಿತ ಚರ್ಚೆ ಮಾಡೋಣ. ಇದಲ್ಲದೆ ನೀನು ಮಾಡಬೇಕಾದ್ದು ಕೆಲವಿವೆ. ಮನಸ್ಸನ್ನು ನೆಮ್ಮದಿಯಾಗಿಟ್ಟುಕೊಳ್ಳೋದಕ್ಕೆ ನೀನೂ ಪ್ರಯತ್ನ ಪಡಬೇಕು'.

'ಹೇಳಿ. ನಾನು ಏನು ಮಾಡಬೇಕು'?

'ಓದು ಮುಂದುವರೆಸೋದರ ಬಗ್ಗೆ ನಿನಗೆ ಸಮಸ್ಯೆ ಇದೆ. ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಪಡಬೇಕು. ಒಳ್ಳೆಯದೇ ಆಗತ್ತೆ ಅಂತ ಅಂದ್ಕೊಂಡು ನಿನ್ನ ಕೆಲಸ ನೀನು ಮಾಡು, ಫಲಿತಾಂಶದ ಬಗ್ಗೆ ಚಿಂತೆ ಮಾಡೋದನ್ನು ಬಿಡು. ಪ್ರಾಮಾಣಿಕವಾದ ಪ್ರಯತ್ನಕ್ಕೆ ಯಶಸ್ಸು ಸಿಕ್ಕೇ ಸಿಕ್ಕತ್ತೆ. ಅಂದರೆ ನಿನ್ನ ಮನೋಭಾವವನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೋ. ಜೊತೆಗೆ ಮೈಮನಸ್ಸು ವಿರಮಿಸೋ ಹಾಗೆ, ದಿನಕ್ಕೆ ಅರ್ಧ ಅಥವಾ ಒಂದು ಘಂಟೆ ಒಂದೆರಡು ಪಠ್ಯೇತರ ಚಟುವಟಿಕೆ ಇಟ್ಟುಕೋ ಅಂದರೆ ಯಾವುದಾದರೂ ಆಟಆಡು, ಸ್ನೇಹಿತರೊಂದಿಗೆ ಸಹಪಾಠಿಗಳೊಂದಿಗೆ ಬೆರೆತು ಮಾತಾಡು, ವ್ಯಾಯಾಮ ಮಾಡು ಅಥವಾ ಮನೇಲಿ ರೇಡಿಯೋ ಇದ್ದರೆ ಸ್ವಲ್ಪ ಸಂಗೀತ ಕೇಳು ಅಥವಾ ನಿನ್ನ ತಾಯಿ ಅಕ್ಕತಮ್ಮಂದಿರೊಂದಿಗೆ ಹರಟೆ ಹೊಡಿ. ಇದರಿಂದ ಮನಸ್ಸಿಗೆ ಉಲ್ಲಾಸವಾಗುತ್ತೆ. ಓದೋದಕ್ಕೆ ನೀನು ಕೂತುಕೊಂ[illegible] ಓದಿದ್ದು ಚೆನ್ನಾಗಿ ಅರ್ಥವಾಗುತ್ತೆ. ಅರ್ಧ ಘಂಟೆ ಓದಿದ ಮೇಲೆ ಪುಸ್ತಕ ಮುಚ್ಚಿಟ್ಟು ನಾನು ಏನು

Sri Vidyabharathi Book Centre, Sringeri

CC-O. In Public Domain. Digitized by eGangotri

ಓದಿದ್ದು ಅಂತ ಮುಖ್ಯ ಅಂಶಗಳನ್ನು ಮನನ ಮಾಡು. ಓದಿದ್ದನ್ನು ಆಗಾಗ್ಗೆ ನಿನ್ನ ಕ್ಲಾಸ್ ಮೇಟ್ಸ್‌ಗಳೊಂದಿಗೆ ಚರ್ಚೆಮಾಡು. ಹಿಂದಿನ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರಿ. ಇದರಿಂದ ಓದಿದ್ದು ಮರೆಯೋಲ್ಲ. ಬೇಕು ಅಂದಾಗ ನೆನಪಿಗೆ ಬರುತ್ತೆ ತಿಳೀತಾ."

"ಆಯಿತು ಸಾರ್ ಹಾಗೇ ಮಾಡ್ತೀನೆ. ಹಾಗಾದರೆ ಮಾತ್ರೆ ಬೇಡವೇ ?"

"ಉಹೂಂ, ನಿನಗೆ ಯಾವ ಮಾತ್ರೆಯೂ ಬೇಡ. ನಾಳಿನ ಶುಕ್ರವಾರ ಬೆಳಿಗ್ಗೆ ಎಂಟು ಘಂಟೆಗೆ ನಿಮ್ಮ ತಂದೆಯನ್ನು ಕರೆದುಕೊಂಡು ಬಾ. ತಗೋ ಈ ಚೀಟಿಯನ್ನು ಅವರಿಗೆ ಕೊಡು" ಎಂದೆ.

* * *

"ನಮಸ್ಕಾರ ಡಾಕ್ಟರೇ."

"ಬನ್ನಿ, ಕೂತುಕೋ ಬನ್ನಿ ಶಿವಪ್ಪನವರೇ. ಬಾ ಮಹಾದೇವ ಕೂತುಕೋ."

"ಈ ದಿನ ಬರಬೇಕು ಅಂತ ಹೇಳಿಕಳುಹಿಸಿದ್ದಿರಿ. ನಮ್ಮ ಮಹಾದೇವ ಬುದ್ಧಿವಂತ ಡಾಕ್ಟರೇ. ಈಚೀಚಿಗೆ ಮರೆವು ಜಾಸ್ತಿ ಆಗಿದೆ ಅಂತಾನೆ. ಈ ಸಲ ಎಸ್ಸೆಸ್ಸೆಲ್ಸಿ ಕಟ್ಟಿದ್ದಾನೆ. ದೊಡ್ಡ ಪರೀಕ್ಷೆ, ಸ್ವಲ್ಪ ಹೆದರಿದ್ದಾನೆ. ನೀವೇ ಧೈರ್ಯ ಹೇಳಬೇಕು."

"ಆತ ಎಸ್ಸೆಸ್ಸೆಲ್ಸಿ ಮಾಡಿಕೊಂಡ ಮೇಲೆ, ಏನು ಮಾಡಬೇಕು ಅಂತ ನಿರ್ಧಾರ ಮಾಡಿದ್ದೀರಿ ಶಿವಪ್ಪ ?"

"ಸ್ವಾಮಿ ನಾನು ಶ್ರೀಮಂತನಲ್ಲ. ಒಂದು ಸಣ್ಣ ಅಂಗಡಿ ಇಟ್ಕೊಂಡಿದ್ದೀನೆ. ಇವನನ್ನು ಡಾಕ್ಟರು ಇಂಜಿನಿಯರ್ ಮಾಡೋದಕ್ಕೆ ನನಗೆ ತ್ರಾಣವಿಲ್ಲ. ಬರೀ ಬಿಎ, ಬಿಎಸ್ಸಿ ಮಾಡಿಕೊಂಡರೆ ಯಾರು ಕೆಲಸ ಕೊಡ್ತಾರೆ. ಅದಕ್ಕೆ ಬದಲು ನೀನು ಅಂಗಡೀಗೇ ಬಂದು ಬಿಡು. ಇದನ್ನೇ ದೊಡ್ಡದಾಗಿ ಮಾಡೀ ಮಂತೆ ಅಂತ ಹೇಳ್ತಾ ಇದ್ದೀನಿ."

"ಸಂತೋಷ ಶಿವಪ್ಪನವರೇ. ನೀವು ಹೇಳೋದು ಒಂದು ರೀತೀಲಿ ಸರೀನೆ. ಸ್ವಾವಲಂಬಿಯಾಗಿ, ಯಾರ ಹಂಗೂ ಇಲ್ಲದೆ, ವ್ಯಾಪಾರ ಮಾಡಿ ಜೀವನ ಮಾಡೋದು ಚೆಂದವೇ. ಆದರೆ ನಿಮ್ಮ ಹುಡುಗನಿಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕು ಅನ್ನೋ ಆಸೆ ಇದೆ. ಒಂದು ಡಿಗ್ರಿ ಮಾಡಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಮೇಲೆ ಏನು ಉದ್ಯೋಗ ಮಾಡಬೇಕು ಅಂತ ನಿರ್ಧರಿಸಿದ ರಾಯಿತು."

"ಅದು ಹಾಗಲ್ಲ ಡಾಕ್ಟರೇ. ನೀವು ತಿಳಿದವರು. ನಾನು ವಿವರಿಸ ಬೇಕಾಗಿಲ್ಲ. ಇವನು ಡಿಗ್ರಿ ಮಾಡಿದ ಅನ್ನಿ. ಆಮೇಲೆ ಆಫೀಸ್ ಕೆಲಸನೇ ಬೇಕು ಅಂತಾನೆ. ವ್ಯಾಪಾರಮಾಡೋದಿಕ್ಕೆ ನಾಚ್ಕೊಳ್ತಾನೆ. ನನ್ನ ದೊಡ್ಡ ಮಗನ ಕಥೆಯನ್ನು ಇವನು ನಿಮಗೆ ಹೇಳಿರಬೇಕು. ಅವನು ಹೀಗೆ ಹಠ ಮಾಡಿ ಓದಿ, ಬಿಎಸ್‌ಸಿ ಮಾಡಿದ. ಕೆಲಸ ಸಿಗಲಿಲ್ಲ. ಎರಡು ವರ್ಷ ಮನೆಯಲ್ಲಿ ಕುಳಿತನೇ ಹೊರತು ಅಂಗಡೀ ಕಡೆ ತಲೆಹಾಕಲಿಲ್ಲ. ನಾನೇ ಅವರಿವರ ಕಾಲು ಕಟ್ಟಿ ಒಂದು ಪ್ರೈವೇಟ್ ಸಂಸ್ಥೆಯಲ್ಲಿ ಕ್ಲರ್ಕ್ ಕೆಲಸ ಕೊಡಿಸ್ದೆ. ಆಮೇಲೆ ಅವನು ಮಾಡಿದ್ದೇನು. ಯಾವಳನ್ನೋ ಲವ್ ಮಾಡಿ, ನಮ್ಮನ್ನೆಲ್ಲಾ ಒದ್ದು ದೂರಮಾಡಿದ. ಆಕೆಯನ್ನು ಕಟ್ಟಿಕೊಂಡು ಸಂಸಾರ ಮಾಡ್ತಿದ್ದಾನೆ. ನೀವು ಇದ್ದೀರಾ, ಬದುಕಿದ್ದೀರಾ ಅಂತ ನಮ್ಮನ್ನು ಕೇಳೊಲ್ಲ. ಈ ಮಹಾದೇವನೂ ಅವನ ದಾರಿ ಹಿಡಿದರೆ ನಮ್ಮ ಗತಿ ಏನು ನೀವೇ ಹೇಳಿ ಸ್ವಾಮಿ."

"ಅಂದರೆ, ಮಹಾದೇವ ಹೆಚ್ಚು ಓದಿದರೆ ಅವನೂ ಸ್ವತಂತ್ರನಾಗಿ ನಿಮ್ಮನ್ನು ಬಿಟ್ಟು ಹೋಗ್ತಾನೆ ಅಂತ ಭಯ ಪಡ್ತೀರಾ ಶಿವಪ್ಪ. ಅವನನ್ನು ಈಗಲೇ ಅಂಗಡಿ ವ್ಯಾಪಾರಕ್ಕೆ ಹಾಕ್ಕೊಂಡರೆ, ಈ ಭಯ ಇರೊಲ್ಲ ನಿಮ್ಮ ನೆರಳಿನಂತೆ ಇರ್ತಾನೆ ಅಂತ ನಿಮ್ಮ ಆಲೋಚನೆ ಹೌದಾ ?"

"ಹೌದು ಸ್ವಾಮಿ, ನನ್ನ ಮನಸ್ಸಿನಲ್ಲಿರೋದನ್ನು ಸರಿಯಾಗಿ ಹೇಳಿದಿರಿ."

"ನಿಮ್ಮ ದೊಡ್ಡಮಗ ನಿಮ್ಮನ್ನು ಈ ರೀತಿ ಬಿಟ್ಟು ಹೋಗೋದಕ್ಕೆ ಅವನು ಓದಿ, ಉದ್ಯೋಗ ಸಂಪಾದಿಸಿ, ಸ್ವತಂತ್ರವಾಗಿ ಜೀವನ ಮಾಡಬಲ್ಲ ಸಾಮರ್ಥ್ಯ ಒಂದು ಕಾರಣ ಇರಬಹುದು, ಇಲ್ದೇನೂ ಇರಬಹುದು. ಅವನ ವ್ಯಕ್ತಿತ್ವ ಸನ್ನಿವೇಶವೂ ಇದಕ್ಕೆ ಕಾರಣವಾಗಿರಬಹುದಲ್ಲವೇ. ಮಹಾದೇವ ಓದೋದನ್ನು ಬಿಟ್ಟು, ನಿಮ್ಮ ಜೊತೇಲಿ ವ್ಯಾಪಾರಮಾಡಿ, ವ್ಯವಹಾರ ಚತುರನಾಗಿ, ಆಮೇಲೆ ನಿಮ್ಮನ್ನು ಬಿಟ್ಟು ಬಿಡೊಲ್ಲ ಅನ್ನೋದಿಕ್ಕೆ ಏನು ಗ್ಯಾರಂಟಿ ? ಆತನಿಗೆ ನಿಮ್ಮ ಮೇಲೆ ಪ್ರೀತಿ–ಗೌರವ, ಕರ್ತವ್ಯದ ನೆನಪು ಇದ್ದಿದ್ದಾದರೆ, ಅವನು ಓದಲಿ, ಓದದೇ ಇರಲಿ, ನಿಮ್ಮನ್ನು ನೋಡ್ಕೊ ಳ್ತಾನೆ. ಪ್ರೀತಿ, ಕರ್ತವ್ಯದ ಹೊಣೆ ಇಲ್ಲವಾದರೆ, ನಿಮ್ಮ ದೊಡ್ಡಮಗ ನಂತೆಯೇ ಆದಾನು. ಈ ವಿಚಾರದಲ್ಲಿ ಅವನ ಓದುವಿಕೆ ಪ್ರಮುಖ ಪಾತ್ರ ವಹಿಸೋಲ್ಲ, ನೀವೇನು ಹೇಳ್ತೀರಾ ?"

Sri Vidyabharathi Book Centre, Sringeri

CC-O. In Public Domain. Digitized by eGangotri

"ನೀವೇಳೋದರಲ್ಲಿ ಸತ್ಯ ಇದೆ ಸ್ವಾಮಿ. ಮನುಷ್ಯನ ಮನಸ್ಸು ಮುಖ್ಯವೇ ಹೊರತು ಬೇರೆ ವಿಚಾರ ಅಷ್ಟು ಮುಖ್ಯವಲ್ಲ. ದೊಡ್ಡ ಮಗ ಹೀಗೆ ಮಾಡಿದನಲ್ಲ ಅನ್ನೋ ಕೋಪ, ದುಃಖದಿಂದ ಹಾಗೆ ಹೇಳಿದೆ. ನಾನೂ ನೋಡ್ತಾ ಇದ್ದೀನಿ. ಮಹಾದೇವ ಅವನ ಅಣ್ಣನ ಹಾಗಲ್ಲ. ತಂದೆ-ತಾಯಿ ಗಳನ್ನು ಕಂಡರೆ ಬಹಳ ಭಯ ಭಕ್ತಿ ಇಟ್ಟುಕೊಂಡಿದ್ದಾನೆ."

"ಸರಿಯಾಗಿ ಹೇಳಿದಿರಿ ಶಿವಪ್ಪ. ಮಹಾದೇವ ಬುದ್ಧಿವಂತ. ಓದಿ ಜ್ಞಾನ ಸಂಪಾದಿಸಬೇಕು ಅನ್ನೋ ಒಳ್ಳೆಯ ಆಸೆ ಇಟ್ಕೊಂಡಿದ್ದಾನೆ. ಅಂಥವನನ್ನು ನಾವು ಎಷ್ಟೇ ಕಷ್ಟ ಬಿದ್ದಾದರೂ ಓದಿಸಬೇಕು. ಅವನ ಈ ಆಸೆಯನ್ನು ನಾವು ಕೊಲ್ಲಬಾರದು. ದಯವಿಟ್ಟು ಅವನನ್ನು ಓದಿಸಿ. ಅವನು ವ್ಯಾಪಾರ ವನ್ನೇ ಮಾಡಲಿ, ಉದ್ಯೋಗವನ್ನೇ ಹಿಡಿಯಲಿ, ನಿಮ್ಮ ಜೊತೇಗಿರ್ತಾನೆ. ನೋಡ್ಕೊಳ್ತಾನೆ. ಹೌದಾ ಮಹಾದೇವ ?"

"ಹೂಂ ಸಾರ್. ನನ್ನ ತಂದೆತಾಯಿಗಳನ್ನು ಕಾಪಾಡೋದು, ಅವರನ್ನು ಸಂತೋಷವಾಗಿಟ್ಟಿರೋದು ನನ್ನ ಕರ್ತವ್ಯ ಸಾರ್. ನಾನು ಕಷ್ಟಪಡೋದಕ್ಕೆ ತಯಾರು. ಹೆಚ್ಚು ಓದಿದರೆ, ಧೈರ್ಯವಾಗಿ, ನಾಲ್ಕು ಜನ ಮೆಚ್ಚೋ ಹಾಗೆ ಜೀವನ ಮಾಡೋ ಸಾಮರ್ಥ್ಯ ಬರತ್ತೆ, ವ್ಯಾಪಾರದಲ್ಲಿ ಹಣ ಸಂಪಾದಿಸ ಬಹುದು. ಜೀವನೋಪಾಯವನ್ನು ಮಾಡಬಹುದು. ಆದರೆ ವಿದ್ಯೆ ತರೋ ಗೌರವ, ಸ್ಥಾನಮಾನವನ್ನು ಅದು ತರೋಲ್ಲ. ಅದಕ್ಕೇ ಓದಬೇಕು ಅನ್ನೋ ಆಸೆ ಸಾರ್."

"ಆಯ್ತು ಸ್ವಾಮಿ. ನೀವು ತಿಳಿದವರು ಹೇಳಿದ ಮೇಲೆ, ನಾನು ಹೇಳೋದೇನಿದೆ. ಮಹಾದೇವ ಚೆನ್ನಾಗಿ ಓದಲಿ ಡಿಗ್ರಿ ತಗೊಳ್ಳಲಿ, ನಾನು ಅವನನ್ನು ತಡೆಯೋಲ್ಲ. ನೀವು ಅವನಿಗೆ ಸರಿಯಾಗಿ ಬುದ್ಧಿ ಹೇಳಿ ಡಾಕ್ಟರೇ."

ಅವರ ಈ ಮಾತುಗಳನ್ನು ಕೇಳಿ ಮಹಾದೇವನ ಮುಖ ಅರಳಿತು. ಕಣ್ಣುಗಳಲ್ಲಿ ಹೊಸ ಕಾಂತಿ ಕಾಣಿಸಿಕೊಂಡಿತು.

ವಾರಕ್ಕೊಂದು ಸಲ ಮಹಾದೇವಸ್ವಾಮಿ ಡಾಕ್ಟರನ್ನು ಕಂಡು, ತನ್ನಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಓದಿನಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ಚರ್ಚೆ ಮಾಡತೊಡಗಿದ. ಈಗ ಓದುವಾಗ ತಂದೆಯ ಭಯವಿಲ್ಲ. ಏಕಾಗ್ರ ಚಿತ್ತದಿಂದ ಓದುವುದು ಸಾಧ್ಯವಾಗುತ್ತಿದೆ. ಜ್ಞಾಪಕ ಶಕ್ತಿಯೂ ಉತ್ತಮ ವಾಗುತ್ತಿದೆ ಎಂದು ಸಂತಸದಿಂದ ತಿಳಿಸಿದ.

Sri Vidyabharathi Book Centre, Sringeri

ಮಹಾದೇವಸ್ವಾಮಿ ಆತಂಕ ಮನೋಬೇನೆಗೆ ತುತ್ತಾಗಿದ್ದ. ಆತಂಕ

CC-O. In Public Domain. Digitized by eGangotri

ದಿಂದಾಗಿ ಆತನ ನೆನಪು ಪಠ್ಯವಿಷಯಗಳ ಬಗ್ಗೆ ಕುಂಠಿತವಾಗಿತ್ತು. ತಂದೆಯ ಧೋರಣೆಯಲ್ಲಿನ ಬದಲಾವಣೆಯಿಂದಾಗಿ, ವೈದ್ಯರ ಸಮಯೋಚಿತ ನೆರವು ಪ್ರೋತ್ಸಾಹದಿಂದಾಗಿ ಆತಂಕ ನಿವಾರಣೆಯಾದಾಗ ಆತನ ಮರೆವಿನ ಸಮಸ್ಯೆ ಪರಿಹಾರವಾಗಿತ್ತು.

ಯಾವುದೇ ಕಾರಣದಿಂದ ಮನಸ್ಸು ಆತಂಕಕ್ಕೀಡಾದಾಗ ಈ ಕೆಳಕಾಣುವ ಚಿಹ್ನೆಗಳು, ತೊಂದರೆಗಳು ಕಾಣಿಸಿಕೊಳ್ಳುತ್ತವೆ.

ಶಾರೀರಕ : ಸುಸ್ತು, ಆಯಾಸ, ಮೈಕೈ ನೋವು, ತಲೆನೋವು, ತಲೆ ಭಾರ, ಉಸಿರಾಡಲು ಕಷ್ಟವಾಗುವುದು, ಎದೆ ಢವ ಢವ ಎನ್ನುವುದು, ಎದೆಯಲ್ಲಿ ಸಂಕಟ, ಉರಿ ಅಥವಾ ನೋವು, ಅಜೀರ್ಣ, ತೇಗು ಬರುವುದು, ಹೊಟ್ಟೆ ಉಬ್ಬರಿಸಿಕೊಳ್ಳುವುದು, ಬೇಧಿ, ಕೀಲುಗಳ ಬಾಧೆ, ಪದೇ ಪದೇ ಮೂತ್ರ ವಿಸರ್ಜನೆ, ಮೈ ಬಿಸಿ/ತಣ್ಣಗಾಗುವುದು, ವಿಪರೀತ ಬೆವರುವುದು, ಕೈಕಾಲುಗಳ ನಡುಕ, ಚಡಪಡಿಕೆ (ಅಂದರೆ ನಿಂತಲ್ಲಿ ನಿಲ್ಲಲು, ಕುಳಿತಲ್ಲಿ ಕುಳಿತು ಕೊಳ್ಳಲು ಆಗದಿರುವುದು) ಬಾಯಿ ಒಣಗುವುದು, ಮಾತಾಡಲು ಕಷ್ಟವಾಗು ವುದು ಅಥವಾ ತೊದಲುವುದು ಇತ್ಯಾದಿ.

ಮಾನಸಿಕ : ಏನೋ ಭಯ, ಆತಂಕ, ಏನೋ ಕೆಟ್ಟದ್ದು ಸಂಭವಿಸಲಿದೆ ಎಂಬ ಕಳವಳ, ಏಕಾಗ್ರಚಿತ್ತತೆ ಇಲ್ಲದಿರುವುದು, ಮನೋ ಚಂಚಲತೆ, ಮರೆವು, ನಿರಾಸಕ್ತಿ, ವಿನಾಕಾರಣ ಬೇಸರ, ಮಾನಸಿಕ ಚಡಪಡಿಕೆ, ತರ್ಕಬದ್ಧವಾಗಿ ಆಲೋಚಿಸಲು ಆಗದಿರುವುದು, ಹಿಂಜರಿಕೆ, ಕೀಳರಿಮೆ ಭಾವನೆಗಳು, ಆತ್ಮವಿಶ್ವಾಸದ ಕೊರತೆ, ಸಹನೆ ಕಡಿಮೆಯಾಗಿ ಸಿಡುಕುತನ, ಕ್ಷುಲ್ಲಕ ತಪ್ಪುಗಳಾಗುವುದು, ಮೂರ್ಖರಂತೆ ನಡೆದುಕೊಳ್ಳುವುದು, ನಿದ್ರೆ ಬರಲು ಕಷ್ಟವಾಗುವುದು, ಬೆಳಿಗ್ಗೆ ಎದ್ದಾಗ ಮನಸ್ಸು ಉಲ್ಲಾಸವಾಗಿ ಇಲ್ಲದಿರುವುದು ಇತ್ಯಾದಿ.

ಪರಿಹಾರ : ಪ್ರಥಮವಾಗಿ ಈ ಬಗೆಯ ತೊಂದರೆಗಳು ಕಾಣಿಸಿ ಕೊಂಡಾಗ, ಅವು ಆತಂಕ ಮನೋಬೇನೆಯ ಲಕ್ಷಣಗಳು ಎಂದು ಗುರುತಿಸು ವುದು. ನಂತರ ಆತಂಕಕ್ಕೆ ಕಾರಣವಾದ ಅಂಶಗಳನ್ನು ಪತ್ತೆ ಮಾಡುವುದು. ಬಳಿಕ ಈ ಅಂಶಗಳನ್ನು ಮನೆಯವರ ಹಾಗೂ ಸಂಬಂಧಪಟ್ಟವರ ನೆರವಿನಿಂದ ನಿವಾರಿಸಲು ಯತ್ನಿಸುವುದು. ಇದಾಗದಿದ್ದರೆ ಆ ಅಂಶಗಳನ್ನು ಒಪ್ಪಿಕೊಂಡು. ಅವುಗಳ ಬಗ್ಗೆ ನಮ್ಮ ಧೋರಣೆಯನ್ನು ಬದಲಾಯಿಸುವುದು. ಕುಟುಂಬ ವೈದ್ಯರ ಅಥವಾ ಮನೋವೈದ್ಯರ ನೆರವು ಪಡೆಯುವುದು. ಅವರ ನಿರ್ದೇಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ತೀರಾ ಅವಶ್ಯಕತೆ ಬಿದ್ದಾಗ ಮಾತ್ರ ಆತಂಕ ನಿವಾರಕ ಔಷಧವನ್ನು ಸೇವಿಸುವುದು, ಮನಸ್ಸಿಗೆ ಉಲ್ಲಾಸ ಮತ್ತು ಉತ್ಸಾಹವನ್ನು ಕೊಡುವ ಸಾಹಿತ್ಯ, ಸಂಗೀತ ಇತ್ಯಾದಿ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಅನುಕೂಲ ಕಾರಿಯಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಚಿತ್ರವಾಗಿ ವರ್ತಿಸುವ ವನಿತಾ

"ಡಾಕ್ಟರೇ, ಈಕೆ ನನ್ನ ಮಗಳು ವನಿತಾ. ಎಂ. ಎಸ್‌ಸಿ. ಮೊದಲನೇ ವರ್ಷದಲ್ಲಿ ಓದ್ತಾಇದ್ದಾಳೆ. ಕಳೆದ ಒಂದು ವರ್ಷದಿಂದ ತಲೆಯೊಳಗೆ ಎಡ ಭಾಗದಲ್ಲಿ 'ಶೇಕ್' ಆದ ಹಾಗೆ ಆಗುತ್ತೆ ಅಂತಾಳೆ. ನಮ್ಮ ಫ್ಯಾಮಿಲಿ ಡಾಕ್ಟರು. ಜನಾರ್ಧನ್ ಅಂತ, ಏನಮ್ಮ ನಿಮ್ಮ ಹುಡುಗಿಯದು ಬಹಳ ವಿಚಿತ್ರವಾದ ಕಂಪ್ಲೇಂಟ್. ನನಗಂತೂ ಅರ್ಥವಾಗೋಲ್ಲ. ಬಹುಶಃ ವೀಕ್ ನೆಸ್‌ಗೆ ಇರಬೇಕು. ಇನ್ನೇನಿಲ್ಲ ಅಂತ ರೂಬ್ರಾಪ್ಲೆಕ್ಸ್ ಇತ್ಯಾದಿ ಒಂದಷ್ಟು ಟಾನಿಕ್ ಬರೆದು ಕೊಟ್ಟಿದ್ರು. ಈ ಟಾನಿಕ್‌ನಿಂದ ಕೆಲವು ದಿನ ಚೆನ್ನಾಗಿರ್ತಾಳೆ. ಮತ್ತೆ ಕೆಲವು ದಿನ ಅಮ್ಮಾ, ನನಕೈಲಿ ತಡೆಯೋಕೆ ಆಗೊಲ್ಲ. ನಾನು ಸತ್ಹೋಗ್ತೇನೆ ಅಂತ ರೂಮಿಗೆ ಹೋಗಿ ಮಲಗಿ ಬಿಡ್ತಾಳೆ. ಆಗ ಎರಡು ಮೂರು ಘಂಟೆಕಾಲ ನಾವು ಯಾರೂ ಅವಳನ್ನು ಮಾತಾಡಿಸುವ ಹಾಗಿಲ್ಲ. ಏನೇ, ಏನಾಗುತ್ತೆ ಹೇಳೇ ಅಂದ್ರೆ ಬಿಟ್ಟ ಕಣ್ಣು ಬಿಟ್ಟ ಹಾಗೆ ನಮ್ಮನ್ನು ದುರುಗುಟ್ಟಿಕೊಂಡು ನೋಡೋಕೆ ಶುರುಮಾಡ್ತಾಳೆ. ಹಲ್ಲುಗಳನ್ನು ಕಟ ಕಟಾ ಅಂತ ಕಟಾಯಿಸಿ ಬಿಡ್ತಾಳೆ. ಮುಷ್ಟಿಯನ್ನು ಬಿಗಿ ಹಿಡಿತೂ ಅಂದ್ರೆ, ನಾವು ಇಬ್ಬರು ಪ್ರಯತ್ನ ಪಟ್ಟರೂ ಬಿಡಿಸೋಕಾಗೊಲ್ಲ. ಹೋದ ಸಲ, ನನ್ನ ಸೀರೆ ಅಂಚನ್ನು ಹಿಡಿದುಕೊಂಡು ಬಿಟ್ಟಳು. ಎರಡು ಘಂಟೆ ನಾನೂ ಅವಳ ಜೊತೇಲೇ ಕೂತಿರಬೇಕಾಯ್ತು. ಮಾತಿಲ್ಲ, ಕಥೆ ಇಲ್ಲ. ಗರ ಬಡಿದವಳ ಹಾಗೆ ಇರ್ತಾಳೆ. ಇದು ಒಂದು ತರ ನಡೆವಳಿಕೆ. ಕೆಲವು ಸಲ, ಈ ಸಮಯ ದಲ್ಲಿ ದುರ್ಗಿ ಆಗಿಬಿಡ್ತಾಳೆ. ಎಲ್ಲರನ್ನು ಬಾಯಿಗೆ ಬಂದ ಹಾಗೆ ಬೈತಾಳೆ. ಕಿರಿಚ್ತಾಳೆ. ಹೊರಟ್ಹೋಗಿ, ನನ್ನ ಕಣ್ಮುಂದೆ ನಿಲ್ಲಬೇಡಿ. ನನಗೆ ಯಾರೂ ಇಲ್ಲ. ನಾನು ಅನಾಥೆ, ನಾನು ಈ ಭೂಮಿಗೆ ಭಾರ ಅಂತ ಕೂಗ್ತಾಳೆ. ನಾವು ಯಾರೂ ಹತ್ತಿರ ಇಲ್ಲದೇ ಹೋದರೆ, ಹಾಗೇ ಮಲಗಿ ನಿದ್ದೆ ಮಾಡಿ ಬಿಡ್ತಾಳೆ. ಎದ್ದ ಮೇಲೆ ಅವಳಿಗೊಂದೂ ಜ್ಞಾಪಕದಲ್ಲಿರೋಲ್ಲ, 'ನನ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗೇನಾಯ್ತು. ನಾನು ಏನು ಮಾಡಿದೆ...ಹೌದಾ ಹಾಗೆಲ್ಲ ಮಾತಾಡಿದ್ನಾ... ಬೇಜಾರು ಮಾಡ್ಕೋ ಬೇಡಿ. ನನಗೊಂದೂ ಗೊತ್ತಿಲ್ಲ' ಅಂತಾಳೆ. ಈ ತರ ತಿಂಗಳಿಗೆ ಎರಡೂ ಮೂರು ಸಲ ಆಗ್ತಾ ಇದೆ. ಉಳಿದ ಸಮಯದಲ್ಲಿ ಎಲ್ಲರಂತೆ ಇರ್ತಾಳೆ. ಇದೇನು ಖಾಯಿಲೇನಾ ಅಥವಾ ಕೆಲವರು ಹೇಳೋ ಹಾಗೆ ಭೂತ ಚೇಷ್ಟೇನಾ ನಮಗೆ ಒಂದೂ ಗೊತ್ತಾಗ್ತಾ ಇಲ್ಲ. ಇಂಗ್ಲಿಷ್ ಔಷಧ ಆಯ್ತು, ಆಯುರ್ವೇದ ಆಯ್ತು, ಮಂತ್ರ ತಂತ್ರ ಆಯ್ತು. ಕಳೆದ ಮೂರು ತಿಂಗಳಿನಿಂದ ಯೋಗ ಕ್ಲಾಸ್‌ಗೂ ಹೋಗ್ತಿದಾಳೆ. ಆದರೆ ಈ ತೊಂದರೆ ಬರೋದು ಮಾತ್ರ ನಿಂತಿಲ್ಲ. ಇವಳನ್ನ ಮದುವೆ ಮಾಡಿಕೊಳ್ತೇವೆ ಅಂತ ಗಂಡುಗಳೂ ಬರ್ತಿದ್ದಾರೆ. ಇವಳಿಗೆ ಈ ರೀತಿ ಆಗೋದು ನಮ್ಮ ಸಂಬಂಧಿಕರಿಗೆ ಗೊತ್ತಿಲ್ಲ. ಗೊತ್ತಾದ್ರೆ ಯಾರು ಇವಳ್ನ ಮದುವೆ ಮಾಡಿ ಕೊಳ್ತಾರೆ. ಒಂದು ಸಮಯ ಗೊತ್ತಾಗದೆ ಮದುವೆ ಮಾಡಿದೆವು ಅಂತ ಇಟ್ಕೊಳ್ಳಿ. ಗಂಡನ ಮನೇಲಿ ಈ ರೀತಿ ಆದರೆ, ಅತ್ತೆ ಮಾವ ಗಂಡ ಸುಮ್ಮನಿರ್ತಾರಾ ? ಈ ಖಾಯಿಲೆ ಹುಡುಗಿ ನಮಗೆ ಬೇಡ ಅಂತ ಮನೆಯಿಂದ ಹೊರ ಹಾಕ್ತಾರೆ. ಹೀಗೆ ನಾವು ದಿಕ್ಕು ತೋಚದೆ ಕೂತಿದ್ದೇವೆ. ಇವಳ ಖಾಯಿಲೆ ಏನು. ಅದಕ್ಕೆ ಪರಿಹಾರ ಏನು ಅಂತ ಗೊತ್ತಾಗ್ತಾ ಇಲ್ಲ. ನರಗಳ ವೀಕ್‌ನೆಸ್ ಇರಬಹುದು. ನೀವು ನರ ಮತ್ತು ಮಿದುಳಿನ ಸ್ಪೆಶಲಿಸ್ಟ್ ಡಾಕ್ಟರಿಗೆ ತೋರಿಸಿ. ಅವರು ಗುಣ ಮಾಡಬಹುದು ಅಂತ ಯಾರೋ ಹೇಳಿದ್ದಕ್ಕೆ ನಾವು ನಿಮ್ಮಲ್ಲಿಗೆ ಬಂದೆವು" ಸುಂದರಮ್ಮ ನುಡಿದರು.

"ಅಂದರೆ ಈ ತೊಂದರೆ ಬಂದಾಗ ಈಕೆಗೆ ಜ್ಞಾನ ತಪ್ಪೋದಿಲ್ಲವೇ ?" ಎಂದೆ.

"ಇಲ್ಲ...ಜ್ಞಾನ ತಪ್ಪೋದಿಲ್ಲ. ಕಣ್ಣು ಬಿಟ್ಟಿರ್ತಾಳೆ. ರೆಪ್ಪೆ ಆಡತ್ತೆ. ಆದರೆ ಮಾತಾಡೊಲ್ಲ. ನಮ್ಮ ಮಾತಿಗೆ ಪ್ರತಿಕ್ರಿಯೆ ತೋರಿಸೋಲ್ಲ...ನೀವು ಈ ಪ್ರಶ್ನೆ ಯಾಕೆ ಕೇಳಿದಿರಿ ಅಂತ ಗೊತ್ತು ಡಾಕ್ಟರೆ. ಇದು ಮೂರ್ಛೆ ಕಾಯಿಲೆ ಅಲ್ಲ. ನನ್ನ ತಂಗೀಗೆ ಮೂರ್ಛೆರೋಗ ಇತ್ತು. ಅದು ಬರೋದನ್ನು ನೋಡಿದ್ದೇನೆ. ಆಕೆ ಪ್ರಜ್ಞೆತಪ್ಪಿ ಧಪ್ ಅಂತ ಬೀಳ್ತಿದ್ದಳು. ಕೈ ಕಾಲು ಸೆಟೆದು, ಅದುರ್ತಿದ್ದುವು. ಬಾಯಲ್ಲಿ ನೊರೆ ಬರೋದು. ಒಂದೊಂದು ಸಲ ಉಚ್ಚೆ ಮಾಡಿಕೊಂಡು ಬಿಡೋಳು. ನಮ್ಮ ವನಿತಾಗೆ ಹಾಗೆಲ್ಲಾ ಆಗೋಲ್ಲ. ತಾನೇ ರೂಮಿಗೆ ಹೋಗಿ ಹಾಸಿಗೆ ಮೇಲೆ ಮಲಕ್ಕೊಳ್ತಾಳೆ. ಆಮೇಲೆ ಈ ರೀತಿ ಆಡ್ತಾಳೆ."

"ಹೌದು ಸಾರ್, ಅಮ್ಮ ಹೇಳೋದು ಸರಿ." ಆಗ ನನಗೆ ಪ್ರಜ್ಞೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುತ್ತೆ. ಇವರೆಲ್ಲ ಮಾತಾಡೋದು ಕೇಳಿಸತ್ತೆ. ಆದರೆ ನನಗೆ ಮಾತಾಡೋದಕ್ಕೆ ಆಗೋಲ್ಲ, ಅಲ್ಲದೆ ಕಣ್ಣು ತೆರೆದಿದ್ದರೂ ದೃಷ್ಟಿ ಬದಲಾಯಿಸೋದಕ್ಕೆ ಆಗೊಲ್ಲ. ಒಂದೊಂದು ಸಲ ನಾನು ಇವರನ್ನೆಲ್ಲಾ ಬೈತಿರ್‍ತೇನೆ ಅಂತ ಹೇಳ್ತಾರಲ್ಲ. ಆಗ ನನಗೆ ನಾನು ಮಾತಾಡ್ತಿದ್ದೇನೆ ಅಂತ ಗೊತ್ತಾಗತ್ತೆ. ಆದರೆ ಏನು ಮಾತಾಡ್ತಿದ್ದೇನೆ ಅನ್ನೋದು ಗೊತ್ತಾಗಲ್ಲ. ಬಹಳ ವಿಚಿತ್ರ ಅಲ್ಲವೇ ಸಾರ್" ಅದುವರೆಗೆ ಸುಮ್ಮನೆ ಕುಳಿತಿದ್ದ ವನಿತಾ ನುಡಿದಳು.

"ನಿನ್ನ ತೊಂದರೆ ಬಗ್ಗೆ ವಿವರವಾಗಿ ಹೇಳಮ್ಮ. ಹೇಗೆ ಶುರುವಾಗತ್ತೆ, ಏನೇನಾಗುತ್ತೆ ಅಂತ ಬಿಡಿಸಿ ಹೇಳು."

"ಹೂಂ ಸಾರ್. ಶುರೂನಲ್ಲಿ ತಲೆಯೊಳಗೆ ಏನೋ ಒಂದು ತರ ಆಗತ್ತೆ. ಲವಲವಿಕೆ ಹೋಗಿ ಏನೋ ಭಾರವನ್ನು ಇಟ್ಟ ಹಾಗೆ. ಆಮೇಲೆ ಒಂದು ರೀತಿ ತಲೆಯೊಳಗೆ ಮಿದುಳು ಶೇಕ್ ಅಂದರೆ ಅಲುಗಾಡಿದ ಹಾಗೆ ಅನಿಸತ್ತೆ. ಸುಸ್ತಾಗತ್ತೆ. ಆಗ ಮಲಗ್ತೇನೆ. ಕಾಲು ನೀಡಿ ಬೆನ್ನ ಮೇಲೆ ಮಲಗಿದಾಗ ಸ್ವಲ್ಪ ಕಡಿಮೆಯಾಗತ್ತೆ. ಇವರು ಬಂದು ಏನಾಯ್ತು, ನೋವೇ ಅಂತ ಕೇಳಿದಾಗ ಏನಾಗುತ್ತೆ ಅಂತ ಹೇಳಬೇಕು ಅನ್ನಿಸತ್ತೆ ಹೇಳೋಕೆ ಆಗೊಲ್ಲ. ಆಮೇಲೆ ಸ್ಪಷ್ಟವಾಗಿ ನಾನು ಏನು ಮಾಡ್ತೇನೆ ಗೊತ್ತಾಗೊಲ್ಲ. ಹೀಗೆ ಅರ್ಧಘಂಟೆ, ಒಂದು ಘಂಟೆ ಮಲಗೇ ಇರ್‍ತೇನಂತೆ. ಕೆಲವು ಸಲ ಇವರನ್ನೆಲ್ಲಾ ಬೈತೇನಂತೆ. ಮತ್ತೆ ಎಚ್ಚರವಾದಾಗ, ನಿದ್ರೆ ಮಾಡಿ ಎದ್ದಂತೆ ಮೈ ಹಗೂರವಾಗಿರುತ್ತೆ."

"ಈ ರೀತಿ ಎಷ್ಟು ದಿನಗಳಿಗೊಂದು ಸಲ ಆಗತ್ತೆ. ಯಾವ ಯಾವ ಸಂದರ್ಭದಲ್ಲಿ ಆಗತ್ತೆ."

"ಅದನ್ನು ಹೇಳೋದಿಕ್ಕೆ ಆಗೋಲ್ಲ. ವಾರಕ್ಕೆ, ಎರಡುವಾರಕ್ಕೆ ಅಥವಾ ತಿಂಗಳಿಗೊಂದು ಸಲ ಅನ್ನಬಹುದು. ಮನಸ್ಸಿಗೆ ಬೇಜಾರಾದಾಗ ಆಗಿ ಬಿಡತ್ತೆ" ವನಿತಾ ನುಡಿದಳು.

"ಹೌದು ಡಾಕ್ಟರೆ, ನನ್ನ ಜೊತೇಲಿ ಅಥವಾ ಅಕ್ಕ ತಂಗೀರ ಜೊತೇಲಿ ಜಗಳ ಆದ ದಿವಸ ಕಾಯಿಲೆ ಬಿಡದೆ ಕಾಣಿಸ್ಕೊಳತ್ತೆ."

"ವನಿತಾ ಒಂಟಿಯಾಗಿದ್ದಾಗ, ಮನೆಯಲ್ಲಿ ಯಾರೂ ಇಲ್ಲದಿರೋವಾಗ ಈ ತೊಂದರೆ ಕಾಣಿಸಿಕೊಂಡಿದೆಯಾ ?"

"ಮನೇಲಿ ಒಬ್ಬರಲ್ಲ ಒಬ್ಬರು ಯಾರಾದರೂ ಇದ್ದೇ ಇರ್‍ತೇವೆ... ನನಗೆ ಜ್ಞಾಪಕ ಇರೋಹಾಗೆ ಅವಳು ಒಂಟಿಯಾಗಿರೋವಾಗ ಅಂದ್ರೆ ಹೊರಗಡೆ ಹೋದಾಗ ಯಾವಾಗಲೂ ಬಂದಿಲ್ಲ."

"ಆಯ್ತು, ವನಿತಾ ಮನಸ್ಸಿಗೆ ಬೇಸರವಾದಾಗ, ಈ ಕಾಯಿಲೆ ಬರತ್ತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತ ಹೇಳಿದೆ. ಆದರೆ ಮನಸ್ಸಿಗೆ ಬೇಸರ ಯಾಕೆ ಆಗತ್ತೆ ಅಂತ ಹೇಳ್ಲಿಲ್ಲವಲ್ಲ." ಆಕೆಯನ್ನು ಪ್ರಶ್ನಿಸಿದೆ.

"ಬೇಸರ ಆಗೋದಿಕ್ಕೆ ಅಮ್ಮನೇ ಕಾರಣ. ವಿಮಲ, ಗೀತಾನೇ ಕಾರಣ. ನನ್ನ ಕಂಡರೆ, ಇವರಿಗೆಲ್ಲ ಒಂದು ರೀತಿ ತಾತ್ಸಾರ." ವನಿತ ತುಟಿ ಉಬ್ಬಿಸಿ ನುಡಿದಳು.

"ಕೇಳಿದಿರಾ ಡಾಕ್ಟರೇ ಇವಳ ಮಾತನ್ನ. ಹೆತ್ತು ಸಾಕಿದ ನಾನು, ಜೊತೆಯಲ್ಲಿ ಹುಟ್ಟಿ ಬೆಳೆದ ಅಕ್ಕತಂಗಿಯರು ಇವಳನ್ನು ತಾತ್ಸಾರ ಮಾಡ್ತಾರಂತೆ. ಯಾರಾದರೂ ನಂಬುವ ಮಾತೇ ಇದು. ಇವರ ತಂದೆ ಸಾಕಷ್ಟು ಸಂಪಾದನೆ ಮಾಡ್ತಾರೆ, ಉಡೋದಿಕ್ಕೆ, ಉಣ್ಣೋದಿಕ್ಕೆ, ತೊಡೋದಿಕ್ಕೆ ಯಾವ ಕೊರತೆಯೂ ಇಲ್ಲ. ಮನೆಯಲ್ಲಿ ಫ್ರಿಜ್ ಇದೆ. ಕಲರ್ ಟಿವಿ ಇದೆ. ಎಲ್ಲಾ ಇದೆ. ಆದರೆ ಈ ಮಕ್ಕಳಿಗೆ ಸಂತೋಷವಿಲ್ಲ, ಹೊಂದಿಕೊಂಡು ಹೋಗೋ ಮನಸ್ಸಿಲ್ಲ. ಪ್ರತಿಯೊಬ್ಬರದೂ ಇದೇ ದೂರು, 'ನೀವು ನನ್ನನ್ನು ಉದಾಸೀನ ಮಾಡ್ತೀರಿ. ನನ್ನನ್ನು ಪ್ರೀತಿಸೊಲ್ಲ.' ನಾವು ಇನ್ನು ಹೇಗೆ ಪ್ರೀತಿಸಬೇಕು ಅಂತಾನೂ ಹೇಳೊಲ್ಲ. ಡಾಕ್ಟರೇ, ಈ ಮಕ್ಕಳನ್ನು ಹೆರೋದು ಸಾಕು ಅವರನ್ನು ಸಾಕಿ ಬೆಳೆಸೋದು ಸಾಕು. ನನ್ನ ತಂಗೀಗೆ ಮಕ್ಕಳಿಲ್ಲ. ಮಗು ವಾಗ್ಲಿಲ್ವೇ ಅಂತ ಗೋಳಾಡ್ತಾಳೆ. ಆದರೆ ಅವಳ ಸ್ಥಿತೀನೆ ಸಾವಿರ ಪಾಲು ಮೇಲು ಅನ್ಸತ್ತೆ. ಮಕ್ಕಳನ್ನು ಪಡೆದು ನಾವು ಅನುಭವಿಸೋ ಸುಖವನ್ನು ಈಗ ನೀವೇ ನೋಡ್ತಾ ಇದ್ದೀರಲ್ಲ..." ಸುಂದರಮ್ಮ ತಮ್ಮ ಅಸಮಾಧಾನ ವನ್ನು ನೇರವಾಗೇ ಪ್ರಕಟಿಸಿದರು.

"ಪ್ರತಿದಿನಾ ಇದೇ ಮಾತು ಸಾರ್. ದುಡ್ಡಿದೆ, ಫ್ರಿಜ್ಜಿದೆ, ಟೀವಿ ಇದೆ, ಅದಿದೆ ಇದಿದೆ. ಇವೆಲ್ಲವನ್ನೂ ನಮಗೋಸ್ಕರ ತಂದಿದಾರಾ ? ಅವುಗಳನ್ನು ಇವರೂ ಉಪಯೋಗಿಸೋದಿಲ್ಲವೇ. ನನಗೆ ಬೇಕಿರೋದು ಪ್ರೀತಿ. ಸ್ವಾರ್ಥದ ಸೋಂಕಿಲ್ಲದ ವಿಶ್ವಾಸ. ಪಕ್ಷಪಾತವಿಲ್ಲದ ನಡೆವಳಿಕೆ, ಆದರೆ ನನ್ನ ಅಪ್ಪ ಅಮ್ಮ ಒಂದು ಕಣ್ಣಿಗೆ ಸುಣ್ಣ ಮತ್ತೊಂದಕ್ಕೆ ಬೆಣ್ಣೆ ಹಚ್ಚುತ್ತಾರೆ. ಅದನ್ನು ಕಂಡ್ರೆ ನನಗೆ ಮೈಯೆಲ್ಲಾ ಉರಿದು ಹೋಗತ್ತೆ."

"ಏನಮ್ಮಾ. ಹಾಗಂದ್ರೆ ಸ್ವಲ್ಪ ವಿವರವಾಗಿ ಹೇಳ್ತೀಯಾ."

"ಆಗಲಿ ಸಾರ್. ವಿಮಲ ನನ್ನ ತಂದೆ ತಾಯಿಗೆ ಮೊದಲನೇ ಸಂತಾನ. ನಾನು ಎರಡನೆಯವಳು. ಗೀತಾ ಮೂರನೇವಳು. ಕುಮಾರ್ ಕೊನೇವನು. ಕೊನೇ ಮಗು ಮತ್ತು ವಂಶೋದ್ಧಾರಕ, ಮನೆಯ ಮುಂದಿನ ಯಜಮಾನ. ಅವನಿಗೆ ಎಲ್ಲಿಲ್ಲದ ಪ್ರಾಮುಖ್ಯತೆ, ಇದು ಸಹಜ. ಆದರ ಬಗ್ಗೆ ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವೆಂಟ್ ಮಾಡೊಲ್ಲ. ನಾವು ಮೂವರು ಹೆಣ್ಣು ಮಕ್ಕಳನ್ನು ಇವರು ಒಂದೇ ರೀತಿ ನೋಡ್ಕೊಳ್ಳೋದು ಇವರ ಕರ್ತವ್ಯ ತಾನೇ. ವಿಮಲ ಮೊದಲು ಹುಟ್ಟಿದವಳು ಎನ್ನುವ ಒಂದೇ ಕಾರಣಕ್ಕೆ ಅವಳಿಗೆ ಹೆಚ್ಚಿನ ಪ್ರಾಶಸ್ತ್ಯ ಯಾಕೆ ಕೊಡಬೇಕು. ಅವಳಿಗೂ ನನಗೂ ಎರಡು ವರ್ಷ ವ್ಯತ್ಯಾಸ. ನೋಡಿದವರು ನನ್ನನ್ನೇ ದೊಡ್ಡವಳು ಅಂತ ತಿಳಿದುಕೊಳ್ಳುವಷ್ಟು, ಅವಳು ನನಗಿಂತ ಕುಳ್ಳಿ. ಆದರೆ ನನ್ನಮ್ಮನಿಗೆ ಅವಳ ಮಾತೇ ವೇದವಾಕ್ಯ. ಮನೆಗೆ ಒಂದು ಸಾಮಾನು ತರಬೇಕಾದ್ರೆ, ಸೀರೆ, ಒಡವೆ ತಗೋಬೇಕಾದರೆ, ವಿಮಲಾನೇ ಹೈಕಮ್ಯಾಂಡು. ಇನ್ನು ಚಿಕ್ಕವಳು ಗೀತ. ಮೆಡಿಕಲ್‌ಗೆ ಸೇರಿದ್ದೇನೆ ಅಂತ ಆಕಾಶದಲ್ಲೇ ಹಾರಾಡ್ತಾಳೆ. ಅಮ್ಮನ ಮುದ್ದಿನ ಮಗಳು. ಅವಳು ಮಾಡೋದಕ್ಕೆ, ಹೇಳೋದಿಕ್ಕೆಲ್ಲಾ ಅಮ್ಮನ ಫುಲ್ ಸಪೋರ್ಟು. ಅವಳು ಲೇಟಾಗಿ ಬಂದರೆ, ಯಾರೂ ಅವಳನ್ನ ಕೇಳೋದಿಲ್ಲ. ಅಯ್ಯೋ ಮೆಡಿಕಲ್ ಕೋರ್ಸು. ಎಷ್ಟು ಓದಬೇಕು, ಏನು ಕಥೆ. ಅಂತ ಹೇಳಿ ಅವಳಿಗೆ ಒತ್ತಾಸೆ ಕೊಡುತ್ತಾರೆ. ನಾನು ಲೇಟಾಗಿ ಬಂದೆನೋ, ನನ್ನ ಮುಖಕ್ಕೆ ಮಂಗಳಾರತಿ ಮಾಡುತ್ತಾರೆ. ಯಾಕೇ ಲೇಟು, ಎಲ್ಲಿ ಹೋಗಿದ್ದೆಯೇ, ಏನು ಮಾಡ್ತಿದ್ದೆಯೇ ಅಂತ ಹತ್ತು ಪ್ರಶ್ನೆ ಕೇಳ್ತಾರೆ. ಮನೆಗೆ ಯಾರೇ ನೆಂಟರು ಬರಲಿ, ಫ್ರೆಂಡ್ಸ್ ಬರಲಿ, ಇವಳೇ ನನ್ನ ಮಗಳು ಗೀತ, ಮೆಡಿಕಲ್ ಓದ್ತಿದಾಳೆ ಅಂತ ಅವಳನ್ನು ಇಂಟ್ರೊಡ್ಯೂಸ್ ಮಾಡ್ತಾರೆಯೇ ಹೊರತು ನನ್ನನ್ನು ಮಾಡೋದಿಲ್ಲ. ನನ್ನನ್ನು ನೋಡಿ 'ಈಕೇನೂ ನಿಮ್ಮ ಮಗಳೇ' ಎಂದಾಗ, ಹೌದು ವನಿತಾ ಅಂತ, ಮನೇಲಿದ್ದು ಮಾಡೋದೇನು ಅಂತ ಎಂಎಸ್‌ಸ್ಸಿಗೆ ಸೇರ್ಕೊಂಡಿದಾಳೆ ಅಂತ ತಾತ್ಸಾರವಾಗಿ ಮಾತಾಡ್ತಾರೆ. ಇದನ್ನು ವಿಮಲ, ಗೀತ ಗಮನಿಸಿದ್ದು, ನನ್ನನ್ನು ಕಂಡರೆ ಅವರಿಗೂ ತಾತ್ಸಾರ. ಮನೆಗೆ ಫ್ರೆಂಡ್ಸ್‌ಗಳನ್ನು ಕರೆದುಕೊಂಡು ಬಂದಾಗ ನನ್ನನ್ನು ಅವರಿಗೆ ಇಂಟ್ರೊಡ್ಯೂಸ್ ಮಾಡೊಲ್ಲ, ಅಪ್ಪನೂ ಇದೇ ರೀತಿ ಮಾಡ್ತಾರೆ. ಗೀತಾ ಏನೇ ಕೇಳಲಿ ತೆಗೆದುಕೊಡ್ತಾರೆ. ನಾನು ಕೇಳಿದರೆ, ವನಿತಾ ಈ ಹೊತ್ತು ಕ್ಯಾಷ್ ತಂದಿಲ್ಲ. ನಾಳೆ ತಂದರೆ ಆದೀತಲ್ಲ ಅಂತ ಹೇಳಿ ಮರೆತು ಬಿಡ್ತಾರೆ. ಆಮೇಲೆ ನಾನೇ ಎರಡು ಮೂರು ಸಲ ರಿಮೈಂಡ್ ಮಾಡಿ, ಸಿಟ್ಟು ಮಾಡಿದ ಮೇಲೆ, ಪೀಡೆ ತೊಲಗಲಿ ಅಂತ ದುಡ್ಡು ಕೊಡ್ತಾರೆ. ನನಗೆ ಬೆಂಡೇ ಕಾಯಿ ಅಂದ್ರೆ ಆಗೋಲ್ಲ, ಅದನ್ನು ನೋಡಿದರೆ ವಾಕರಿಕೆ ಬರತ್ತೆ. ಅದನ್ನು ತರಬೇಡಮ್ಮ ಅಂತೀನಿ. ಅಯ್ಯೋ ಬೆಂಡೇ ಕಾಯಿ ಕುಮಾರ್‌ಗೆ ಪಂಚಪ್ರಾಣ., ಗೀತಾನೂ ಇಷ್ಟ ಪಡ್ತಾಳೆ ಅಂತ ರಾಗ ಎಳೆದು

Sri Vidyabharathi Book Centre, Sringeri

 CC-O. In Public Domain. Digitized by eGangotri

ತಂದೇ ಬಿಡ್ತಾಳೆ. ಹೋಗಲಿ ಅವರಿಗೆ ಮಾಡಿ ಹಾಕಲಿ. ನನಗೇಕೆ ಹಾಕಬೇಕು. ನಿನ್ನೊಬ್ಬಳಿಗೋಸ್ಕರ ಬೇರೆ ಸಾರು ಮಾಡೋದಿಕ್ಕೆ ಆಗತ್ಯೇನೆ. ಹೋಳುಗಳನ್ನು ತೆಗೆದಿಟ್ಟು, ತಿಳಿಯಲ್ಲಿ ಅನ್ನ ಕಲೆಸಿ ಊಟ ಮಾಡಿಕೋ ಎನ್ನುತ್ತಾಳೆ. ಇದರಿಂದ ಕೋಪ ಬರುತ್ತೋ ಇಲ್ಲವೋ ನೀವೇ ಹೇಳಿ, ಹೀಗೆ ಇವೆಲ್ಲ ಸಣ್ಣ ಪುಟ್ಟ ವಿಷಯ ಇರಬಹುದು. ಆದರೆ ಇವು ಮನಸ್ಸಿಗೆ ಎಷ್ಟು ನೋವಾಗತ್ತೆ ಗೊತ್ತಾ ಸಾರ್. ಇಲ್ಲಾ ನಾನೇ ಏನಾದರೂ ಮಾಡಿಕೊಂಡು ಸತ್ತುಹೋಗಿ ಇವರಿಗೆ ಸರಿಯಾದ ಪಾಠ ಕಲಿಸಬೇಕು. ಅಥವಾ ಸೇರಿಗೆ ಸವ್ವಾಸೇರು ಅಂತ ಹೋಗ್ರಿ, ನೀವು ನನ್ನ ಪ್ರೀತಿ ಮಾಡದಿದ್ದರೆ ಕತ್ತೆ ಬಾಲ ಹೋಯ್ತು ಅಂತ ಉಗಿದು ವಜಾ ಮಾಡಬೇಕು ಅಂದ್ಕೊಳ್ತೇನೆ. ಆದರೆ ಆಗೋದೇ ಇಲ್ಲ. ಏನಾದರೂ ಹೀಗೆ ಸಣ್ಣ ಪುಟ್ಟ ಮಾತು ಬಂದಾಗ ನಾನು ಸಿಡಿಯದ ಜ್ವಾಲಾಮುಖಿ ಆಗ್ತೇನೆ. ಒಳಗೊಳಗೇ ಕುದ್ದು ಹೋಗ್ತೇನೆ. ಆಗಲೇ ತಲೆಯೊಳಗೆ ಮಿದುಳು ಅಲ್ಲಾಡಿದಂತೆ, ತಿರುಚಿಕೊಂಡಂತೆ ನೋವಾಗುತ್ತದೆ. ಹೋಗಿ ಮಲಗಿ ಬಿಡ್ತೇನೆ, ಆಗ ಇವರು ನನ್ನ ಪಾಡಿಗೆ ನನ್ನನ್ನು ಬಿಡದೆ ಮೊಸಳೆ ಕಣ್ಣೀರು ಸುರಿಸ್ತಾ ವನಿತಾ ಏನಾಯ್ತೋ? ಎಲ್ಲಿ ನೋವಾಗತ್ಯೇ ಅಂತ ರಾಗ ಹಾಡಿಕೊಂಡು ಬರ್ತಾರೆ. ಸಿಟ್ಟಿನಿಂದ ನಾನು ಅವರೊಂದಿಗೆ ಮಾತೇ ಆಡುವುದಿಲ್ಲ. ಮತ್ತೂ ಒತ್ತಾಯಿಸಿದರೆ, ದೊಡ್ಡ ಧ್ವನಿಯಲ್ಲಿ ಅವರನ್ನು ಬೈದು ಬಿಡ್ತೇನೆ, ಕೂಗಿ ಕಿರಿಚಾಡಿಬಿಡ್ತೇನೆ. ಆಗ ನನ್ನ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗತ್ತೆ."

"ಮನೆಯವರು ನಿನ್ನನ್ನು ಅಷ್ಟು ಚೆನ್ನಾಗಿ ಕಾಣುವುದಿಲ್ಲ ಅಂತ ಹೇಳ್ತೀಯಾ. ಇದು ಮೊದಲಿನಿಂದ ಹೀಗೇನಾ ಅಥವಾ ಇತ್ತೀಚೆಗೆ ಈ ರೀತಿ ವ್ಯತ್ಯಾಸವಾಗಿದೆಯಾ ?"

"ಹೆಚ್ಚೂ ಕಡಿಮೆ ಮೊದಲಿನಿಂದ ಇದು ನಡೆದು ಬಂದಿದೆ. ಹುಟ್ಟಿದರೆ ಮಗನಾಗಿ ಹುಟ್ಟಬೇಕು. ಇಲ್ಲವೇ ಮೊದಲ ಮಗು ಅಥವಾ ಕೊನೇ ಮಗುವಾಗಿ ಹುಟ್ಟಬೇಕು. ಆಗ ಮಾತ್ರ ಸ್ವಲ್ಪ ಪ್ರಾಮುಖ್ಯತೆ ಸಿಗತ್ತೆ. ನಡುಮಧ್ಯದ ಮಗಳಾಗಿ ಹುಟ್ಟಬಾರದು. ಅವಳು ಯಾರಿಗೂ ಬೇಡ. ಒಂದು ವರ್ಷದ ಹಿಂದೆ ಗೀತ ಮೆಡಿಕಲ್‌ಗೆ ಸೇರಿದ ಮೇಲೆ ಪರಿಸ್ಥಿತಿ ಬಿಗಡಾಯಿಸಿತು. ಇನ್ನೊಂದು ವಿಷಯ ಹೇಳುತ್ತೇನೆ ಸಾರ್. ನನಗೂ ಮೆಡಿಕಲ್‌ಗೆ ಸೇರಬೇಕು. ಡಾಕ್ಟರಾಗಿ ಹತ್ತಾರು ಜನರ ಸೇವೆ ಮಾಡಬೇಕು ಅಂತ ಆಸೆ ಇತ್ತು. ಆದರೆ ಪಿಯುಸಿನಲ್ಲಿ ಎಂಬತ್ತೆರಡು ಪರ್ಸೆಂಟ್ ಬಂತು. ಮೆರಿಟ್ ಕೋಟಾದಲ್ಲಿ ಸೀಟು ಸಿಗಲಿಲ್ಲ; ಪ್ರೈವೇಟ್ ಕಾಲೇಜಿಗೆ ಸೇರಿಸಿ ಅಂತ ಕೇಳಿಕೊಂಡೆ. ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದೂವರೆ ಲಕ್ಷ ಡೊನೇಶನ್ ಕೊಡಬೇಕು. ಆಮೇಲೆ ವರ್ಷ ವರ್ಷ ದುಬಾರಿ ಫೀಸ್ ಕಟ್ಟಬೇಕು. ಅದು ನನ್ನ ಚೈತನ್ಯಕ್ಕೆ ಮೀರಿದ್ದಮ್ಮ ಅಂದರು ತಂದೆ. ನನ್ನ ಆಸೇನ ಸುಟ್ಟು ಹಾಕಿದೆ. ಬಿಎಸ್‌ಸಿ ಸೇರಿಕೊಂಡೆ. ಗೀತಾ ನನಗಿಂತ ಬುದ್ಧಿವಂತೆ. ಮೆರಿಟ್ ಕೋಟಾದಲ್ಲಿ ಸೀಟು ಗಿಟ್ಟಿಸಿದಳು. ಇದು ಹೆಮ್ಮೆಯ ವಿಷಯವೇನೋ ಸರಿ. ಆದರೆ ನನ್ನ ತಂದೆ ತಾಯಿ ಇದನ್ನು ಉತ್ಪ್ರೇಕ್ಷೆ ಮಾಡಿ, ಬಂದವರೆದುರೆಲ್ಲ 'ನಮ್ಮ ಗೀತಾ ತುಂಬಾ ಇಂಟೆಲಿಜೆಂಟ್ ನೋಡಿ, ಮೆರಿಟ್ ಮೇಲೆ ಮೆಡಿಕಲ್ ಸೀಟು ಸಿಕ್ತು. ಪ್ರತಿಭಾವಂತೆ' ಅಂತ ಹೊಗಳಿದಾಗ ಏಕೋ ಸಾರ್, ನನ್ನ ಮನಸ್ಸಿಗೆ ಹಿಂಸೆ ಆಗತ್ತೆ. ನನ್ನ ಕೈಲಿ ಇದನ್ನು ಸಾಧಿಸಲು ಆಗಲಿಲ್ಲವಲ್ಲ ಅಂತ ಬಹಳ ಬೇಜಾರಾಗತ್ತೆ. ಅಳು ಬಂದು ಬಿಡತ್ತೆ. ಈ ಸಮಯದಲ್ಲಿ ಯಾರಾದರೂ ನನ್ನ ಬಗ್ಗೆ ಟೀಕೆ ಮಾಡಿದರು ಅಂದ್ರೆ, ತಲೆಯಲ್ಲಿ ಅಸಾಧ್ಯವಾದ ನೋವು ಶುರುವಾಗಿ ಬಿಡತ್ತೆ. ಸ್ವಲ್ಪ ಶಬ್ಧ, ಬೆಳಕು ಆದರೂ ನನಗೆ ಆಗೋದಿಲ್ಲ. ರೂಮಿಗೆ ಹೋಗಿ ಮಲಗಿ ಬಿಡ್ತೇನೆ. ಮಾತಾಡೋದಿಕ್ಕೆ ಮನಸ್ಸಾಗೋದಿಲ್ಲ. ಅಥವಾ ಸುತ್ತ ಮುತ್ತ ಯಾರು ಇರ್ತಾರೋ ಅವರನ್ನು ಚೆನ್ನಾಗಿ ಬೈದು ಬಿಡ್ತೇನೆ. ಇದು ನನ್ನ ಸಮಸ್ಯೆ."

* * *

ಪ್ರತಿಯೊಬ್ಬ ವ್ಯಕ್ತಿಗೆ ತನ್ನ ವೈಶಿಷ್ಟ್ಯವನ್ನು, ಸಾಮರ್ಥ್ಯವನ್ನು, ಸ್ಥಾನಮಾನವನ್ನು ಮನೆಯವರ ಮುಂದೆ, ಸಮಾಜದ ಮುಂದೆ ರೂಪಿಸಿ, 'ಮಾನ್ಯತೆ' ಪಡೆಯಲು ತುಂಬಾ ಇಷ್ಟ. ಅನಾಮಧೇಯನಂತೆ, ಗುಂಪಿನಲ್ಲಿ ಒಬ್ಬನಂತೆ ಬದುಕಲು ಬಹುತೇಕ ಜನ ಒಪ್ಪುವುದಿಲ್ಲ. ತನ್ನ 'ಐಡೆಂಟಿಟಿ'ಯನ್ನು ಸ್ಥಾಪಿಸಲು ಹೋರಾಡುತ್ತಾನೆ. ಇದಲ್ಲದೆ ತನ್ನ ಮನೆಯವರಿಂದ, ಆತ್ಮೀಯ ಬಂಧು-ಮಿತ್ರರಿಂದ ಯಾವ ಪೂರ್ವ ಷರತ್ತಿಲ್ಲದೆ, ನಿಷ್ಪಕ್ಷಪಾತವಾದ, ಪ್ರಾಮಾಣಿಕವಾದ ವಿಶ್ವಾಸ, ಆಸರೆ, ಪ್ರೋತ್ಸಾಹವನ್ನು ನಿರೀಕ್ಷಿಸುತ್ತಾನೆ. ಅದರಲ್ಲೂ ಬೆಳೆಯುವ ಮಗು ಅಥವಾ ಹರೆಯದ ವ್ಯಕ್ತಿಗೆ ಇದು ಅತ್ಯವಶ್ಯಕ. ಆತ ಪಕ್ಷಪಾತವನ್ನು ಸ್ವಲ್ಪವೂ ಸಹಿಸುವುದಿಲ್ಲ. ತಂದೆ ತಾಯಿ ಅಥವಾ ಮನೆಯ ಇತರರು ತನ್ನನ್ನು ಉದಾಸೀನ ಮಾಡುತ್ತಿದ್ದಾರೆ ಎಂದು ತಿಳಿದರೆ, ನೀರಿಲ್ಲದ ಗಿಡದಂತೆ ಬಾಡಿಹೋಗುತ್ತಾನೆ. ಆತನ ಮನಸ್ಸು ಬಹು ಸೂಕ್ಷ್ಮ. ಪ್ರತಿಯೊಂದು ಸಂದರ್ಭ ಸನ್ನಿವೇಶದಲ್ಲಿ ಬೇರೆಯವರು ತನ್ನನ್ನು ಹೇಗೆ ನಡೆಸಿ[illegible]ವಾಗಿ ಗಮನಿಸುತ್ತಾನೆ. ತನಗಿಂತ, ತನ್ನ ಒಡಹುಟ್ಟಿದವರಿಗೆ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಮುಖ್ಯತೆ ದೊರಕಿದೆ ಎಂದು ಅನಿಸಿದ ಕೂಡಲೇ ದುಃಖಿತನಾಗುತ್ತಾನೆ. ಇಲ್ಲವೇ ಪ್ರತಿಭಟನೆ ರೋಷವನ್ನು ಪ್ರಕಟಿಸುತ್ತಾನೆ.

ಎಷ್ಟೋ ಮನೆಗಳಲ್ಲಿ, ಒಂದು ಮಗುವನ್ನು ಮನೆಯ ಇನ್ನೊಂದು ಮಗುವಿಗೆ ಅಥವಾ ನೆರೆಮನೆಯ ಮಗುವಿಗೆ ಹೋಲಿಸಿ, ಟೀಕಿಸುವ ಪ್ರವೃತ್ತಿ ಕಂಡು ಬರುತ್ತದೆ. "ನೀನು ಇದ್ದೀಯಾ. ಕೂಳಿಗೆ ದಂಡವಾಗಿ. ಅವನನ್ನು ನೋಡು ಎಷ್ಟು ಜಾಣ. ಅವನು ಫಸ್ಟ್‌ರ‍್ಯಾಂಕ್ ಬಂದಿದ್ದಾನೆ. ನೀನು ನಾಲ್ಕನೇ ರ‍್ಯಾಂಕ್. ನಾಚಿಕೆಯಾಗಬೇಕು. ಇನ್ನಷ್ಟು ಕಷ್ಟ ಪಟ್ಟು ಓದಲು ನಿನಗೇನು ಧಾಡಿ ?" ಎಂತಲೋ,

"ನೋಡೇ, ಪದ್ಮ ನಿನಗಿಂತ ಚಿಕ್ಕವಳು. ಯಾರಾದರೂ ಬಂದರೆ ಹೇಗೆ ಬಾಯಿ ತುಂಬಾ ಮಾತಾಡಿ, ಬಂದವರನ್ನು ಉಪಚರಿಸುತ್ತಾಳೆ. ನೀನು ಗೂಬೆಯ ಹಾಗೆ ಕುಳಿತಿರುತ್ತೀ. ಮಾತಾಡಿದರೆ ಎಲ್ಲಿ ಮುತ್ತು ಸುರಿದು ಹೋಗುತ್ತೋ ಅನ್ನೋ ಹಾಗೆ. ನನ್ನ ಕರ್ಮ ನಿನ್ನನ್ನು ಅದ್ಯಾವ ಸೀಮೆಯ ರಾಜ ಕುಮಾರ ಬಂದು ಮದುವೆಯಾಗುತ್ತಾನೋ ನಾನು ಕಾಣೆ. ಸ್ವಲ್ಪ ಬಾಯಿ ಬಿಟ್ಟು ಮಾತಾಡುವುದನ್ನು ಕಲಿಯೇ" ಎಂತಲೋ.

"ನೋಡಿ, ನನ್ನ ಕೊನೆಯ ಮಗನ ಚಿಂತೆ ನನಗೆ ಎಳ್ಳಷ್ಟೂ ಇಲ್ಲ. ಅವನು ಬಲು ಚೂಟಿ. ಬುದ್ಧಿವಂತ. ಖಂಡಿತ ಮುಂದುವರಿತಾನೆ. ಹೆತ್ತವರಿಗೆ ಹೆಸರು ತರ‍್ತಾನೆ. ಆದರೆ ನನ್ನ ಎರಡನೇ ಮಗ, ರವಿ, ಇದ್ದಾನಲ್ಲ ಅವನದೇ ನನಗೆ ಚಿಂತೆ. ಅಂತಾ ಬುದ್ಧಿವಂತನಲ್ಲ. ಒಂದು ರೀತಿ ಮದ್ದ. ಚುರುಕಿಲ್ಲ. ಏನೋ ಒಂದಷ್ಟು ಓದ್ತಾನೆ, ಆದರೆ ನಾವು ಒತ್ತಾಯ ಹಾಕಬೇಕು. ನೂಕಬೇಕು. ಇಲ್ಲೇ ಕುಳಿತಿದ್ದಾನೆ. ನೀವೇ ಕೇಳಿ. ಹೀಗಾದರೆ ಹೇಗೆ ? ಹದಿನೆಂಟು ವರ್ಷ ವಯಸ್ಸಾಯ್ತು. ತನ್ನ ಕಾಲ ಮೇಲೆ ತಾನು ನಿಲ್ಲಬೇಕು ಅಂತ ಯೋಚಿಸೋಲ್ಲ. ನಮ್ಮ ಪೂರ್ವಾರ್ಜಿತ ಪಾಪ ಶೇಷ!" ಎಂತಲೋ ಟೀಕೆ ಮಾಡಿದಾಗ, ಆ ವ್ಯಕ್ತಿಯ ಸ್ಥಿತಿ ಏನಾಗಬೇಕು.

ವನಿತಾ ಕೂಡ ಇದೇ ಬಗೆಯ ಮನೋಕ್ಲೇಶಕ್ಕೆ ತುತ್ತಾಗಿದ್ದಳು. ಎದೆಯಲ್ಲಿ ಅದುಮಿಟ್ಟ ಈ ಕ್ಲೇಶ ಕಡೆಗೆ ಒಂದು ಬಗೆಯ ಖಾಯಿಲೆ ಅಥವಾ ವಿಚಿತ್ರವಾದ ನಡೆವಳಿಕೆ ರೂಪದಲ್ಲಿ ಕಾಣಿಸಿಕೊಂಡಿತ್ತು. ತಲೆಯೊಳಗೆ ನೋವು, ಅಲುಗಾಡಿದ ಅನುಭವ ಅಥವಾ ಮಾತಾಡದೆ ಮಲಗುವುದು ಇಲ್ಲವೇ ಮನೆಯವರನ್ನು ಬಾಯಿಗೆ ಬಂದಂತೆ ಬೈಯುವುದು ಮಾನಸಿಕ ಜನ್ಯ ರೋಗ ಲಕ್ಷಣಗಳು. ಈ ಮೂಲಕ ಆಕೆ ತನ್ನ ಅಸಮಾಧಾನವನ್ನು, ಅಸಹಾಯಕತೆಯನ್ನು ಪ್ರಕಟಿಸಿದ್ದಳು. ಅವಳ ಈ ಸ್ಥಿತಿಯಿಂದ ಕಳವಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಕೀಡಾಗಿ, ಅವಳ ಬಗ್ಗೆ ಹೆಚ್ಚಿನ ಗಮನವನ್ನು ಸಂಬಂಧಪಟ್ಟವರೆಲ್ಲ ಕೊಡಲು ಪ್ರಾರಂಭಿಸಿದಾಗ, ವನಿತಾಳ ಮನಸ್ಸಿಗೆ ಸ್ವಲ್ಪ ಸಮಾಧಾನ ಸಿಗುತ್ತಿತ್ತು.

ಹೊರಗೆ ಪ್ರಕಟವಾಗದ, ಹೇಳಿಕೊಳ್ಳಲಾಗದ ಮನೋವೇದನೆ ಕ್ರಮೇಣ ಬದಲಾದ ರೂಪದಲ್ಲಿ ಶಾರೀರಕ ರೋಗ ಲಕ್ಷಣಗಳ ಮೂಲಕ, ಅಥವಾ ವಿಚಿತ್ರವಾದ ನಡೆವಳಿಕೆ ಮೂಲಕ ಪ್ರಕಟವಾಗುವ ಸ್ಥಿತಿಯನ್ನು 'ಉನ್ಮಾದ ಮನೋಬೇನೆ (ಹಿಸ್ಟಿರಿಕಲ್ ನ್ಯೂರೋಸಿಸ್)' ಎಂದು ಕರೆಯು ಲಾಗುತ್ತದೆ. ರೋಗಿಯ ಮನೋವೇದನೆ ಏನು ಎಂಬುದನ್ನು ಪತ್ತೇ ಮಾಡಬೇಕು. ಅನಂತರ ಅದಕ್ಕೊಂದು ಪರಿಹಾರದ ವ್ಯವಸ್ಥೆ ಮಾಡಬೇಕು. ಮನೆಯವರು, ಸಂಬಂಧ ಪಟ್ಟವರು ಸಹಕರಿಸಿ, ಈ ದಿಸೆಯಲ್ಲಿ ಕಾರ್ಯ ಪ್ರವೃತ್ತರಾದರೆ, ಉನ್ಮಾದ ಮನೋಬೇನೆ ಗುಣವಾಗುತ್ತದೆ. ಮತ್ತೆ ಬಂದು ರೋಗಿಯನ್ನು ಕಾಡುವುದಿಲ್ಲ.

ಮುಂದಿನ ಸಂದರ್ಶನದಲ್ಲಿ ವನಿತಳ ತಂದೆ, ತಾಯಿ ಮತ್ತು ಸಹೋದರಿ ಯರನ್ನು ಕರೆಸಲಾಯಿತು. ವನಿತಳ ಮನೋವೇದನೆಯನ್ನು ಸಮಸ್ಯೆಯನ್ನು ಅವರಿಗೆಲ್ಲ ವಿವರಿಸಲಾಯಿತು. ಹೇಗೆ ಈ ವೇದನೆ, ನೋವು ಈಗ ಖಾಯಿಲೆಯ ರೂಪಕ್ಕೆ ರೂಪಾಂತರಗೊಂಡಿದೆ ಎಂದು ತಿಳಿಸಲಾಯಿತು.

"ಡಾಕ್ಟರೇ, ನಮ್ಮ ವನಿತ ಮಾನಸಿಕವಾಗಿ ಇಷ್ಟೊಂದು ನೋವನ್ನು ಅನುಭವಿಸುತ್ತಿದ್ದಾಳೆ ಎಂಬುದು ತಂದೆಯಾದ ನನಗೇ ಗೊತ್ತಿರಲಿಲ್ಲ. ನಾನಾಗಲೀ, ನನ್ನ ಹೆಂಡತಿಯಾಗಲೀ ನಮ್ಮ ಮಕ್ಕಳ ವಿಚಾರದಲ್ಲಿ ಪಕ್ಷಪಾತ ಮಾಡಿದವರಲ್ಲ. ನಮಗೆ ವಿಮಲ, ಗೀತಾ ಎಷ್ಟು ಮುಖ್ಯವೋ, ವನಿತಾಳೂ ಅಷ್ಟೇ ಮುಖ್ಯ. ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಇನ್ನೊಂದು ಮಾಡಿದವ ರಲ್ಲ, ಏನೋ ಗೀತಾಗೆ ಮೆರಿಟ್‌ನಲ್ಲಿ ಮೆಡಿಕಲ್ ಸೀಟು ಸಿಕ್ಕಿದ್ದಾಗ, ಸಹಜ ವಾಗಿ ಸಂಭ್ರಮ ಪಟ್ಟೆವು. ಹೆಮ್ಮೆಯಿಂದ ಎಲ್ಲರೊಂದಿಗೆ ಈ ವಿಚಾರ ಹೇಳಿ, ಅವಳನ್ನು ಹೊಗಳಿದೆವು. ಅದು ವನಿತಾಳ ಮನಸ್ಸಿಗೆ ನೋವುಂಟು ಮಾಡುತ್ತದೆ ಎನ್ನುವ ಅಂಶ ನಮ್ಮ ಗಮನಕ್ಕೆ ಬರಲೇ ಇಲ್ಲ... ಹೌದು ಡಾಕ್ಟರ್, ಆಕೆಗೂ ಮೆಡಿಕಲ್‌ಗೆ ಹೋಗುವ ಆಸೆ ಇತ್ತು. ದುರಾದೃಷ್ಟಕ್ಕೆ ಸೀಟು ಸಿಗದಿದ್ದಾಗ, ಡೊನೇಶನ್ ಕೊಟ್ಟು ಸೇರಿಸಿ ಎಂದು ಕೇಳಿದಳು. ನಾನು ಮನಸ್ಸು ಮಾಡಿದ್ದರೆ. ಸ್ವಲ್ಪ ಕಷ್ಟ ಪಟ್ಟು ಹೇಗೋ ಹಣವನ್ನು ಹೊಂದಿಸಬಹುದಿತ್ತು. ಆದರೆ ನಾನು ಮನಸ್ಸು ಮಾಡಲಿಲ್ಲ. ಇಲ್ಲಮ್ಮ ನನ್ನ ಕೈಯಲ್ಲಿ ಆಗು... ಬಿಎಸ್ಸಿ ಮಾಡಿಕೊಂಡಳು, ಎಂಎಸ್‌ಸಿಗೂ ಸೇರಿಕೊಂಡಳು. ನನಗೆ ಈ ವಿಷಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮರೆತೇ ಹೋಯಿತು. ನಾನು ಮತ್ತು ನನ್ನ ಹೆಂಡತಿ ನಿಮಗೆ ಮಾತು ಕೊಡುತ್ತೇವೆ. ಮನೆಯಲ್ಲಿ ಒಬ್ಬರನ್ನು ಇನ್ನೊಬ್ಬರೊಂದಿಗೆ ಹೋಲಿಕೆ ಮಾಡುವುದಿಲ್ಲ. ಐದು ಬೆರಳುಗಳು ಸಮನಾಗಿಲ್ಲ. ಆದರೆ ಪ್ರತಿಯೊಂದು ಬೆರಳೂ ಬಹುಮುಖ್ಯ. ಒಂದಿಲ್ಲದಿದ್ದರೆ, ನಾವು ಅಂಗವಿಕಲರಾಗುತ್ತೇವೆ. ಅಲ್ಲವೇ ಡಾಕ್ಟರೇ. ಈ ಪಾಠವನ್ನು ನಾವು ಈ ಹೊತ್ತು ಕಲಿತುಕೊಂಡೆವು. ವನಿತಾಳನ್ನು ನಾವು ಪ್ರೀತಿಸುತ್ತೇವೆ. ಅವಳನ್ನು ಸುಖವಾಗಿಡಲು ನಾವು ನಮ್ಮ ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ಇದು ಖಂಡಿತ" ಎಂದರು ವನಿತಳ ತಂದೆ.

"ವನಿತಾಳನ್ನು ಕಂಡರೆ ನಮಗೆಲ್ಲ ಬಹಳ ಪ್ರೀತಿ ಸಾರ್. ಬೇಕೂ ಅಂತ ಒಂದು ದಿವಸವಾದರೂ ನಾವು ಅವಳ ಮನಸ್ಸನ್ನು ನೋಯಿಸಿಲ್ಲ. ಇವಳು ಸಾಮಾನ್ಯವಾಗಿ ಹೆಚ್ಚು ಮಾತಾಡೋಲ್ಲ. ರಿಸರ್ವ್ಡ್ ಟೈಪು. ಹೀಗಾಗಿ ಆಗಾಗ್ಯೆ ಐಸೋಲೇಟ್ ಆಗ್ಬಿಡ್ತಾಳೆ. ನಾವೂ ಮೇಲೆ ಬಿದ್ದು ಅವಳನ್ನು ಇನ್‌ವಾಲ್ವ್ ಮಾಡೋಲ್ಲ. ಅದರಿಂದ ವನಿತಾಳಿಗೆ ತಾನು ಒಂಟಿ ಅನ್ನೋ ಭಾವನೆ ಬಂದಿರಬೇಕು. ಅವಳು ತನ್ನ ಮನಸ್ಸಿನಲ್ಲಿರೋದನ್ನು ನಮ್ಮೊಂದಿಗೆ ಹೇಳಿಕೊಳ್ಳಲಿ. ಅವಳನ್ನು ಸಂತೋಷ ಪಡಿಸೋದಿಕ್ಕೆ ನಾವು ಖಂಡಿತ ಪ್ರಯತ್ನಪಡ್ತೇವೆ" ಎಂದಳು ಗೀತಾ.

ಈ ರೀತಿಯ ವಿಚಾರ ವಿನಿಮಯದಿಂದ, ಆ ಕುಟುಂಬದ ಸದಸ್ಯರ ನಡುವೆ ಹೆಚ್ಚಿನ ಹೊಂದಾಣಿಕೆ ಮೂಡಿತು. ಅವರು ಪರಸ್ಪರ ಭಾವನೆ, ನಿರೀಕ್ಷೆಗಳನ್ನು ಅರ್ಥ ಮಾಡಿಕೊಂಡರು. ವನಿತಾ ಕೂಡ ಬಿಚ್ಚು ಮನಸ್ಸಿನಿಂದ ಅವರೊಂದಿಗೆ ಮಾತನಾಡಲು ಕಲಿತುಕೊಂಡಳು. ಅವಳ ಮನಸ್ಸಿನಲ್ಲಿ ಮನೆ ಮಾಡಿದ್ದ ನೋವು, ಕೋಪ, ಅತೃಪ್ತಿಗಳು ಕಡಿಮೆಯಾಗತೊಡಗಿದುವು. ಒಂದೆರಡು ತಿಂಗಳಲ್ಲಿ ಅವಳ ಮನಸ್ಸಿನಲ್ಲಿ ನೆಮ್ಮದಿ ಮನೆ ಮಾಡಿತು. ಖಾಯಿಲೆಯ ಲಕ್ಷಣಗಳು ಇಲ್ಲವಾದವು. ಈಗ ಆರೋಗ್ಯವಾಗಿದ್ದಾಳೆ. ಮನೆಯವರೊಂದಿಗೆ ನಗು ನಗುತ್ತಾ, ತನ್ನ ಓದನ್ನು ಮುಂದುವರೆಸಿದ್ದಾಳೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕ್ತಿ ಕಳೆದುಕೊಂಡ ರಮಾಕಾಂತ

ನಾನು ನನ್ನ ಆಫೀಸಿನಲ್ಲಿ ಕುಳಿತು, ಮುಂದಿನ ತಿಂಗಳಿನಲ್ಲಿ ತರಪೇತಿಗಾಗಿ ಬರಲಿದ್ದ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ಪಟ್ಟಿಯೊಂದನ್ನು ತಯಾರು ಮಾಡುತ್ತಿದ್ದೆ. "ಸಾರ್, ನಾನು ಒಳಕ್ಕೆ ಬರಬಹುದೇ" ಎಂಬ ಮಾತನ್ನು ಕೇಳಿ ತಲೆ ಎತ್ತಿ ನೋಡಿದೆ. ಚಿಗುರು ಮೀಸೆಯ ಹುಡುಗನೊಬ್ಬ ಸಂಕೋಚ ಪಡುತ್ತಾ ಬಾಗಿಲಲ್ಲಿ ನಿಂತಿದ್ದ. ಗೌರವರ್ಣ. ಅಮಿತಾಬ್ ಬಚ್ಚನ್ ಶೈಲಿಯಲ್ಲಿ ಬಾಚಿದ ಕೂದಲು, ಚೆಕ್ಸ್ ಶರಟು, ನೀಲಿ ಬಣ್ಣದ ಜೀನ್ಸ್ ಹಾಕಿದ್ದ. ನಾನು ಅವನನ್ನು ನೋಡುತ್ತಲೇ ನಾಚಿಕೆಯಿಂದಲೋ, ಮತ್ಯಾವ ಭಾವನೆಯಿಂದಲೋ ತಲೆ ತಗ್ಗಿಸಿದ. "ಒಳಗೆ ಬಾ. ಸಂಕೋಚ ಪಡಬೇಡ ಕುಳಿತುಕೋ" ಎಂದೆ.

ರೂಮಿನೊಳಕ್ಕೆ ಬಂದ. ನಿಂತುಕೊಂಡೇ "ನೀವೇನೋ ಬರೆಯುತ್ತಾ ಇದ್ದೀರಿ. ಡಿಸ್ಟರ್ಬ್ ಮಾಡಿದೆ ಅಂತ ಕಾಣತ್ತೆ. ನನ್ನನ್ನು ಕ್ಷಮಿಸಿ ಸಾರ್" ಎಂದ.

"ಕ್ಷಮಿಸುವಂತ ತಪ್ಪನ್ನು ನೀನು ಮಾಡಿಲ್ಲ. ಕುಳಿತುಕೋ. ನನ್ನಿಂದ ಏನಾಗಬೇಕು ಧೈರ್ಯವಾಗಿ ಹೇಳು" ಎಂದು ಅವನನ್ನು ಪ್ರೋತ್ಸಾಹಿಸಿದೆ.

ಕುರ್ಚಿಯ ಮೇಲೆ ಮುಳ್ಳುಗಳಿವೆ ಏನೋ ಎಂಬಂತೆ ಆತ ಮುಜುಗರ ಪಡುತ್ತಾ ಕುರ್ಚಿಯ ತುದಿಯಲ್ಲಿ ಕುಳಿತುಕೊಂಡ. "ನೀವು ನನಗೆ ಸಹಾಯ ಮಾಡಬೇಕು. ತರಂಗ ವಾರಪತ್ರಿಕೇಲಿ ನಿಮ್ಮ ಲೇಖನಗಳನ್ನು ಓದಿದ್ದೇನೆ. ನೀವು ಒಳ್ಳೇ ಟ್ರೀಟ್‌ಮೆಂಟ್ ಕೊಡ್ತೀರಾ. ನಾನು ಆಗ ಸರಿಹೋಗ್ತೀನೆ ಅನ್ನೋ ಆಸೆಯಿಂದ ಬಂದಿದ್ದೇನೆ. ನೀವು ನನಗೆ ಸಹಾಯ ಮಾಡದೇ ಹೋದರೆ ನಾನು ಸತ್ತು ಹೋಗ್ತೀನೆ .." ಅವನ ಕಣ್ಣುಗಳಲ್ಲಿ ನೀರು ಕಾಣಿಸಿಕೊಂಡಿತು. ಬಿಕ್ಕಿದ, ಅಳುವನ್ನು ತಡೆಯಲು ಕಷ್ಟ ಪಡುತ್ತಿದ್ದ.

Sri Vidyabharathi Book Centre, Sringeri

"ಅಳಬೇಡ, ನನ್ನಿಂದಾಗುವ ಎಲ್ಲ ಸಹಾಯವನ್ನು ಮಾಡ್ತೀನೆ.

 CC-O. In Public Domain. Digitized by eGangotri

ಸಮಾಧಾನ ಮಾಡಿಕೋ. ನಿನ್ನ ಹೆಸರೇನು, ಯಾವ ಊರು, ನಿಮ್ಮ ತಂದೆ ಯಾರು, ನೀನೇನು ಮಾಡ್ತಿದ್ದೀಯಾ ?" ಎರಡು ನಿಮಿಷ ಆತ ಮಾತಾಡ ಲಿಲ್ಲ. ತನ್ನ ಭಾವೋದ್ವೇಗವನ್ನು ಹತೋಟಿ ಮಾಡಿ, ಕುಗ್ಗಿದ ಸ್ವರದಲ್ಲಿ "ನನ್ನ ಹೆಸರು ರಮಾಕಾಂತ ಸಾರ್. ಇದೇ ಊರು. ಮಹಾಲಕ್ಷ್ಮಿ ಲೇಔಟ್ ನಲ್ಲಿ ನಮ್ಮ ಮನೆ. ನಮ್ಮ ತಂದೆ ಅನಂತರಾಮಯ್ಯ ಅಂತ. ಪೀಣ್ಯದ ಒಂದು ಪ್ರೈವೇಟ್ ಫ್ಯಾಕ್ಟರೀನಲ್ಲಿ ಸೂಪರ್‌ವೈಸರ್ ಆಗಿದ್ದಾರೆ. ನಾನು ಬಿ. ಎ. ಫೈನಲ್ ಇಯರ್‌ನಲ್ಲಿದ್ದೇನೆ." ಎಂದು ತನ್ನ ಪರಿಚಯ ಮಾಡಿ ಕೊಂಡ.

"ವೆರಿಗುಡ್. ಹೇಗೆ ಓದ್ತಾ ಇದೀಯ. ಓದೋದಕ್ಕೆ ಏನಾದರೂ ತೊಂದರೆ ಇದೆಯಾ ?"

"ಸುಮಾರಾಗಿ ಓದ್ತಿದೇನೆ ಸಾರ್. ಇತ್ತೀಚೆಗೆ ಓದೋದರಲ್ಲಿ ಆಸಕ್ತಿ ಹೋಗಿಬಿಟ್ಟಿದೆ. ಟೈಪ್‌ರೈಟಿಂಗ್‌ಗೂ ಹೋಗ್ತಿದ್ದೀನಿ. ಏನು ಮಾಡಲಿಕ್ಕೂ ಮನಸ್ಸಿಲ್ಲ... ನಾನು ಸತ್ತುಹೋಗಬೇಕು..." ಮತ್ತೆ ಅವನ ಧ್ವನಿ ಗದ್ಗದಿತ ವಾಯ್ತು.

"ಏಕೆ ರಮಾಕಾಂತ. ಸತ್ತುಹೋಗಬೇಕೆನ್ನುವಷ್ಟು ಬೇಜಾರಾಗಿದೆಯೇ? ಏನು ಕಷ್ಟ ನಿನಗೆ ? ನಿಮ್ಮ ಮನೆಯವರು ನಿನ್ನನ್ನು ಪ್ರೀತಿಯಿಂದ ಕಾಣುವು ದಿಲ್ಲವೇ ? ನಿನ್ನ ತಂದೆ ತಾಯಿ ನಿನ್ನನ್ನು ಉಪೇಕ್ಷೆ ಮಾಡಿ ಬೈಯುತ್ತಾರಾ ?"

"ನಮ್ಮ ಮನೆಯವರಿಂದ ನನಗೆ ಯಾವ ತೊಂದರೆಯೂ ಇಲ್ಲ ಸಾರ್. ನನ್ನನ್ನು ಬಹಳ ಪ್ರೀತಿಯಿಂದ ನೋಡಿಕೊಳ್ತಾರೆ. ನನ್ನ ಬಗ್ಗೆ ಬಹಳ ಆಸೆ ಭರವಸೆಗಳನ್ನು ಇಟ್ಕೊಂಡಿದ್ದಾರೆ. ನಾನು ಅವರ ನಿರೀಕ್ಷೆ ಮಟ್ಟಕ್ಕೆ ಬಂದಿಲ್ಲ. ನನ್ನ ಬದುಕನ್ನು ನಾನೇ ಕೈಯಾರೆ ಹಾಳು ಮಾಡಿಕೊಂಡಿದ್ದೇನೆ. ನನ್ನಂತವನು ಬದುಕಿರಬಾರದು. ಕೆಲಸಕ್ಕೆ ಬಾರದವನಾಗಿ, ನಿಷ್ಪ್ರಯೋಜಕನಾಗಿ, ನಡೆ ದಾಡೋ ಹೆಣದಂತೆ ಏಕೆ ಬದುಕಬೇಕು, ನೀವೇ ಹೇಳಿ ಸಾರ್."

"ಏನು ಹಾಗೆಂದರೆ ; ನಿಷ್ಪ್ರಯೋಜಕ, ನಡೆದಾಡೋ ಹೆಣ ಅಂತ ಏಕೆ ಭಾವಿಸ್ತೀಯಾ ? ನೋಡೋದಕ್ಕೆ ಗುಂಡು ಗುಂಡಗೇ ಇದ್ದೀಯಾ ನಿನ್ನ ವಯಸ್ಸಿಗೆ ತಕ್ಕಂತಹ ಶರೀರ ನಿನಗಿದೆ."

"ಕುಟ್ಟೆ ಹತ್ತಿದ ಮರ ಸಾರ್ ಇದು. ಈ ಶರೀರ ನೋಡೋದಿಕ್ಕೆ ಅಲಂಕಾರವಾಗಿದೆ. ಒಳಗೆ ಏನೂ ಇಲ್ಲ, ಟೊಳ್ಳು. ಅದರ ಶಕ್ತಿಯೆಲ್ಲಾ ಹರಿದು ಹೊರಟು ಹೋಗಿದೆ ಸಾರ್. ಅದಕ್ಕೆ ನಾನೇ ಕಾರಣ. ನನ್ನ ಚಂಚಲ, ದುರ್ಬಲ ಮನಸ್ಸೇ ಕಾರಣ."

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

"ಅದು ಹೇಗೆ ?"

"ನಾನೊಂದು ಭಯಂಕರ, ಕೆಟ್ಟ ಚಟಕ್ಕೆ ಬಿದ್ದಿದ್ದೇನೆ. ಒಬ್ಬ ಸ್ನೇಹಿತ ಇದನ್ನು ನನಗೆ ಕಲಿಸಿ ಬಿಟ್ಟ. ಈಗ ಬಿಡಬೇಕು ಅಂತ ಎಷ್ಟು ಪ್ರಯತ್ನ ಮಾಡ್ತಿದ್ದೇನೆ. ಆದರೆ ಸಾಧ್ಯವಾಗ್ತಾ ಇಲ್ಲ."

"ಏನು, ಮಾದಕ ವಸ್ತುವನ್ನು ಸೇವನೆ ಮಾಡ್ತಿಯಾ ? ಯಾವುದು ಗಾಂಜಾನಾ, ಅಫೀಮಾ, ಬ್ರೌನ್ ಶುಗರ್ರಾ ಅಥವಾ ಆಲ್ಕೋಹಾಲಾ ?"

"ಮಾದಕ ವಸ್ತುವಿನ ಚಟವಲ್ಲ..."

"ಮತ್ತೇನು. ಡಾಕ್ಟರ ಹತ್ತಿರ ಹೇಳಲು ಸಂಕೋಚ ಪಡಬೇಡ."

"ಹಸ್ತಮೈಥುನ ಮಾಡಿಕೊಳ್ಳುವ ಕೆಟ್ಟ ಚಟ. ಎರಡು ವರ್ಷದ ಹಿಂದೆ ಶುರುವಾಯಿತು. ಕೆಲವು ದಿನಗಳಲ್ಲಿ ಪ್ರತಿದಿನ ಮಾಡಿಕೊಂಡಿದ್ದೇನೆ. ಇದರಿಂದ ನಾನು ಹಾಳಾಗಿ ಹೋಗಿದ್ದೇನೆ. ತುಂಬಾ ವೀಕಾಗಿ ಬಿಟ್ಟಿದ್ದೇನೆ. ಕೈಕಾಲುಗಳಲ್ಲಿ ಶಕ್ತಿಯೇ ಇಲ್ಲ, ಸ್ವಲ್ಪ ಹೊತ್ತು ನಿಂತರೆ, ನಡೆದರೆ, ಕಾಲುಗಳು ನಡುಗಲು ಶುರುವಾಗುತ್ತವೆ. ನಾಲ್ಕು ಪೇಜು ಬರೆಯಲಾಗುವುದಿಲ್ಲ. ನನ್ನ ಜನನಾಂಗ ಕೂಡ ಚಿಕ್ಕದಾಗಿ ಬಿಟ್ಟಿದೆ. ಈಗ ಅದು ಮೊದಲಿನ ಹಾಗೆ ಉದ್ರೇಕವಾಗೋದೇ ಇಲ್ಲ. ಅದನ್ನು ನೋಡಿದಾಗ ಎದೆ ಒಡೆದು ಹೋದ ಹಾಗೆ ಆಗತ್ತೆ. ಹೃದಯ ಢವಢವ ಅಂತ ಬಡ್ಕೊಳತ್ತೆ. ಉಸಿರು ಎದೆಯಲ್ಲೇ ಸಿಕ್ಕಿಹಾಕಿಕೊಂಡು ಬಿಡತ್ತೆ. ಈ ಚಿಕ್ಕವಯಸ್ಸಿಗೇ ನಾನು ಮುದುಕನಂತಾಗಿ ಬಿಟ್ಟಿದ್ದೇನೆ. ಈ ಸ್ಥಿತಿಯಲ್ಲಿ ನಾನು ಓದಿ ಡಿಗ್ರಿ ತಗೋಳ್ಳೋದು, ಉದ್ಯೋಗ ಮಾಡಿ ಸಂಪಾದಿಸೋದು, ಮದುವೆಯಾಗಿ ಸಂಸಾರ ಮಾಡೋದು ಸಾಧ್ಯವೇ ಇಲ್ಲ. ಅಂದ ಮೇಲೆ ನಾನು ಯಾಕೆ ಬದುಕಬೇಕು ಸಾರ್ ?"

"ರಮಾಕಾಂತ, ಹಸ್ತಮೈಥುನ ಕೆಟ್ಟದ್ದು ಅಂತ ನಿನಗೆ ಯಾರು ಹೇಳಿದರಪ್ಪ ?"

"ಅದನ್ನು ನನಗೆ ಹೇಳಿಕೊಟ್ಟ ನನ್ನ ಸ್ನೇಹಿತನೇ ಹೇಳಿದ ಸಾರ್. ಒಂದು ದಿನ ನಾವಿಬ್ಬರೇ ಇದ್ದಾಗ ನಿನಗೆ ಒಂದು ಮಜಾ ತೋರಿಸ್ತೇನೆ ಅಂತ ತನ್ನ ಲಿಂಗವನ್ನು ಹೊರತೆಗೆದು ಹಸ್ತಮೈಥುನ ಮಾಡಿಕೊಂಡ. ಅದನ್ನು ನೋಡಿ ನನಗೂ ಉದ್ರೇಕವಾಯ್ತು, ನಾನೂ ಮಾಡಿಕೊಂಡೆ. ವೀರ್ಯ ಹೊರ ಬರುವಾಗ ಮತ್ತು ಬರೋವಷ್ಟು ಕಾಲ ಒಂದು ರೀತಿ ಸುಖದ ಅನುಭವ ಆಯ್ತು, ಆಮೇಲೆ ಅವನು 'ನೋಡಿದ್ಯಾ ಎಷ್ಟು ಚೆನ್ನಾಗಿರತ್ತೆ. ಚೆನ್ನಾಗಿದೆ ಅಂತ ಪದೇ ಪದೇ ಮಾಡ್ಕೊ [illegible]. ಅದು ಹೊರಗೆ ಹೋಗ್ತಾ ಇದ್ರೆ, ನಮ್ಮ ಶಕ್ತಿ ಎಲ್ಲಾ ಸೋರಿ ಹೋಗಿಬಿಡತ್ತೆ. ಆಗ ನಿನ್ನದು

Sri Vidyabharathi Book Centre, Sringeri

CC-O. In Public Domain. Digitized by eGangotri

ವೀಕ್ ಆಗಿ, ಚಿಕ್ಕದಾಗಿ ಬಿಡತ್ತೆ. ಆಮೇಲೆ ನಿನ್ನನ್ನು ಯಾರು ಮದುವೆ ಮಾಡ್ಕೊಳ್ಳಲ್ಲ. ಉಶಾರ್. ತಿಂಗಳಿಗೋ ಎರಡು ತಿಂಗಳಿಗೋ ಒಂದು ಸಲ ಮಾಡ್ಕೋ ತಿಳೀತಾ ಎಚ್ಚರಿಕೆ' ಅಂತ ಹೇಳಿದ. ಅನಂತರ ನಾನು ಒಂದು ಮ್ಯಾಗಜೀನ್‌ನಲ್ಲಿ ಹಸ್ತಮೈಥುನ ಕೆಟ್ಟದು ಅದರಿಂದ ಷಂಡತನ ಬರತ್ತೆ ಅಂತ ಬರೆದಿದ್ದನ್ನು ಓದಿದೆ. ಆದರೆ ಮನಸ್ಸಿನ ಆಸೆ ತಡೆಯೋದಕ್ಕೆ ಆಗದೆ ಪದೇ ಪದೇ ಮಾಡ್ಕೊಳ್ಳೋದಕ್ಕೆ ಶುರುಮಾಡಿದೆ. ಪ್ರತಿಸಲ ಮಾಡಿಕೊಂಡ ನಂತರ, ನನ್ನ ಬಗ್ಗೆ ನನಗೇ ಜಿಗುಪ್ಸೆ ಬಂದು ಬಿಡೋದು. ಥೇ ಎಂತಾ ದುರ್ಬಲ ಮನಸ್ಸಿನವನು ನಾನು, ಇದು ಒಳ್ಳೇದಲ್ಲ ಅಂತ ಗೊತ್ತಿದ್ದರೂ, ಅದಕ್ಕೆ ಸೋಲುತ್ತಾ ಇದ್ದೇನಲ್ಲ. ನಾನು ಎಂತಹ ಚಪಲ ಚಿತ್ತ ಮನುಷ್ಯ ಅನ್ನಿಸೋದು. ಕೆಲವು ಸಲ ನನ್ನ ಮೇಲೆ ಕೋಪವೂ ಬರೋದು. ನನ್ನ ಕೈಗೆ ಬರೆ ಹಾಕಬೇಕು. ಚಾಕುವನ್ನೋ, ಬ್ಲೇಡನ್ನೋ ತೆಗೆದುಕೊಂಡು ಕುಯ್ದುಬಿಡಬೇಕು. ಆದರೆ ಇವೆಲ್ಲಾ ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಕಲಿತ ಚಟ ಬಿಡೋದಿಕ್ಕೆ ಆಗಲೇ ಇಲ್ಲ. ಪೇಪರ್‌ನಲ್ಲಿ ಜಾಹೀರಾತು ಬರುತ್ತಲ್ಲ, ನವತಾರುಣ್ಯ ಡಿಸ್ಪೆನ್ಸರಿ, ನಿಮ್ಮ ಲೈಂಗಿಕ ದೌರ್ಬಲ್ಯಗಳಿಗೆ ಡಾ|| ಕೆಕ್ಕರ್ ಇವರನ್ನು ಭೇಟಿಮಾಡಿ ಅಂತ. ಒಂದು ದಿನ ಅಲ್ಲಿಗೆ ಹೋದೆ. ಅವರಿಗೆ ನನ್ನ ಸಮಸ್ಯೆಯನ್ನು ಹೇಳಿಕೊಂಡೆ. ಅವರು ನನ್ನ ಪರೀಕ್ಷಾ ಕೊಠಡಿಗೆ ಕರೆದುಕೊಂಡು ಹೋಗಿ ನನ್ನ ಜನನಾಂಗವನ್ನು ತೋರಿಸು ಎಂದರು. ನನ್ನದನ್ನು ನೋಡಿ, ಆರೇಳು ವರ್ಷ ಹುಡುಗನ ಸೈಜ್ ಇದೆ. ಎಲ್ಲಾ ಹಾಳುಮಾಡಿಕೊಂಡಿದ್ದೀಯಾ ಈಗಲೇ ಮುದುಕನಾಗಿಬಿಟ್ಟಿದ್ದೀಯಾ. ಆದರೆ ಹೆದರಬೇಡ. ನನ್ನ ಬಳಿ ಜರ್ಮನಿಯಿಂದ, ರಷ್ಯಾದಿಂದ ತರಿಸಿರುವ ಔಷಧಿ ಇದೆ. ಒಟ್ಟು ಮುನ್ನೂರು ರೂಪಾಯಿ ಖರ್ಚು ಬೀಳತ್ತೆ. ಮೂರು ಕಂತಿನಲ್ಲಿ ಕೊಡು. ಔಷಧ ಕೊಡ್ತೇನೆ, ಅಂದರು. ಆಗಲೀ ಸಾರ್ ಅಂತ ಬಂದು ಬಿಟ್ಟೆ,ನನ್ನ ಹತ್ತಿರ ಅಷ್ಟು ದುಡ್ಡು ಎಲ್ಲಿಂದ ಬರಬೇಕು. ಅಂದರೆ ಈ ಚಟ ಹೋಗೋಲ್ಲ. ನನ್ನನ್ನು ಷಂಡನನ್ನಾಗಿ ಮಾಡಿ ಬಿಡುತ್ತೆ ಅನ್ನೋ ಭಯ ಶುರುವಾಯಿತು. ನಿಂತರೆ, ಕುಳಿತರೆ ಅದೇ ಯೋಚನೆ. ಎಷ್ಟೋ ರಾತ್ರಿಗಳನ್ನು ನಿದ್ರೆ ಇಲ್ಲದೆ ಕಳೆದಿದ್ದೇನೆ ಸಾರ್. ಕೆಟ್ಟ ಕೆಟ್ಟ ಕನಸುಗಳು ಸಾರ್. ಒಂದು ಕನಸಿನಲ್ಲಿ ನಾನು ಸ್ನಾನದ ಮನೆಗೆ, ಸ್ನಾನ ಮಾಡಲು ಹೋಗಿ ಬಟ್ಟೆ ಬಿಚ್ಚೇನೆ, ಜನನಾಂಗವೇ ಇಲ್ಲ. ಆ ಜಾಗದಲ್ಲಿ ದೊಡ್ಡ ಗಾಯವಾಗಿಬಿಟ್ಟಿದೆ, ರಕ್ತ ಸುರೀತಾ ಇದೆ. ರಕ್ತ ಸುರಿದೂ ಸುರಿದೂ ನಾನು ಪ್ರಜ್ಞೆತಪ್ಪಿ ಬಿದ್ದು ಬಿಟ್ಟಿದ್ದೇನೆ. ಹೀಗೆ ಇಂಥವೇ ಭಯಂಕರ ಕನಸುಗಳು. ಈ ಭಯ ಶುರು ಆದಮೇಲೆ ಜನನಾಂಗ ಮತ್ತಷ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕದಾಯಿತು. ಕೈಯಿಂದ ಮುಟ್ಟಲೀ, ಲೈಂಗಿಕ ವಿಚಾರಗಳನ್ನು ಕಲ್ಪನೆ ಮಾಡಿಕೊಳ್ಳಲಿ, ಏನೇ ಮಾಡಲಿ ಈಗ ಅದು ಉದ್ರೇಕವಾಗೋದೇ ಇಲ್ಲ. ನನ್ನ ಸ್ನೇಹಿತ ಹೇಳಿದಾಗೆ, ಆ ಸೆಕ್ಸ್‌ಡಾಕ್ಟರು ಹೇಳಿದಾಗೆ ನಾನು ಷಂಡನಾಗಿ ಬಿಟ್ಟಿದ್ದೇನೆ. ಇದಕ್ಕೆ ಹಸ್ತಮೈಥುನವೇ ಕಾರಣ. ನೀವು ಮನಸ್ಸು ಮತ್ತು ನರ ಸಂಬಂಧ ರೋಗಗಳ ತಜ್ಞರು. ಹಸ್ತಮೈಥುನದಿಂದ ವೀಕ್ ಆಗಿರೋ ನನ್ನ ನರ ಮಂಡಲಕ್ಕೆ ಒಳ್ಳೆ ಚಿಕಿತ್ಸೆ ಕೊಟ್ಟು ಸರಿಪಡಿಸ್ತೀರಾ ಅನ್ನೋ ಆಸೆಯಿಂದ ಬಂದಿದ್ದೇನೆ. ನನ್ನ ಕೈ ಬಿಡಬೇಡಿ ಸಾರ್. ನನ್ನಲ್ಲಿ ದುಡ್ಡಿಲ್ಲ ಅಂತ ಉದಾಸೀನ ಮಾಡಬೇಡಿ. ನೀವು ನನ್ನ ಈ ತೊಂದರೆಯನ್ನು ವಾಸಿಮಾಡಿದರೆ, ಜೀವನವಿಡೀ ದುಡಿದು ನಿಮ್ಮ ಋಣ ತೀರಿಸ್ತೇನೆ. ನೀವು ನನ್ನ ಕೈಬಿಟ್ಟರೆ ಸಾವೇ ನನಗೆ ಗತಿ ಸಾರ್" ಎಂದು ಬಿಕ್ಕಿದ. ಅಸಹಾಯಕನಾದ ವ್ಯಕ್ತಿ ಎಷ್ಟು ದೈನ್ಯತೆಯನ್ನು ಪ್ರದರ್ಶಿಸುತ್ತಾನೆ ಎನ್ನುವುದಕ್ಕೆ ರಮಾಕಾಂತ ಉದಾಹರಣೆಯಾಗಿದ್ದ.

"ರಮಾಕಾಂತ, ನಿನ್ನ ಈ ವೀಕ್‌ನೆಸ್‌ಗೆ, ತೊಂದರೆಗಳಿಗೆ, ನಿನ್ನ ಈ ದುಃಸ್ಥಿತಿಗೆ ಕಾರಣ ಹಸ್ತಮೈಥುನವಲ್ಲ. ಅದಕ್ಕೆ ಕಾರಣ, ಹಸ್ತಮೈಥುನದ ಬಗ್ಗೆ ನಿನಗಿರುವ ತಪ್ಪು ನಂಬಿಕೆ, ಭಯ, ತಪ್ಪಿತಸ್ಥ ಮನೋಭಾವ ಮತ್ತು ಅಸಹಾಯಕತೆಗಳೇ. ಇದನ್ನು ಅರ್ಥ ಮಾಡಿಕೊಳ್ಳೋದಿಕ್ಕೆ ಪ್ರಯತ್ನಿಸು."

"ಏನು ಸಾರ್, ಹಾಗೆಂದರೆ ? ಹಸ್ತಮೈಥುನ ಕೆಟ್ಟದ್ದಲ್ಲವೆ. ಅದರಿಂದ ನರದೌರ್ಬಲ್ಯ ಷಂಡತನ ಬರುವುದಿಲ್ಲವೇ ?"

"ಇಲ್ಲಪ್ಪಾ, ಹಸ್ತ ಮೈಥುನ ಕೆಟ್ಟದಲ್ಲ. ಅದಕ್ಕೂ ನಿನ್ನ ವೀಕ್‌ನೆಸ್‌ಗೂ ಯಾವ ಸಂಬಂಧವೂ ಇಲ್ಲ. ಗಮನವಿಟ್ಟು ಕೇಳು. ಹಸ್ತಮೈಥುನ ಒಂದು ಸಹಜವಾದ, ಸ್ವಾಭಾವಿಕವಾದ ಚಟುವಟಿಕೆ. ಹರೆಯದಲ್ಲಿ ಲೈಂಗಿಕ ರಸದೂತಗಳ ಉತ್ಪತ್ತಿಯಿಂದ ಮೈಮನಸ್ಸಿನಲ್ಲಿ ಲೈಂಗಿಕ ವಿಚಾರದ ಬಗ್ಗೆ ಆಸೆ ಬಯಕೆಗಳು ಮೊಳೆಯುತ್ತವೆ. ಅದುವರೆಗೆ ಶೈಶವಾವಸ್ಥೆಯಲ್ಲಿದ್ದ ಜನನಾಂಗ ವ್ಯವಸ್ಥೆ ಬೆಳೆದು, ದೊಡ್ಡದಾಗಿ ಕ್ರಿಯಾಶೀಲವಾಗುತ್ತದೆ. ಅಂದರೆ ಜನನಾಂಗ ಉದ್ರೇಕವಾಗುವುದು, ವೀರ್ಯ ಸ್ಖಲನವಾಗುವುದು ಇತ್ಯಾದಿ. ಆಗ ಸಹಜವಾಗಿ, ಜನನಾಂಗದ ಸ್ಪರ್ಶ, ಮನಸ್ಸಿಗೆ, ಮೈಗೆ ಹಿತವಾಗಿರುತ್ತದೆ ಸ್ಪರ್ಶ ಸಂವೇದನೆಗಳಿಂದ ಲೈಂಗಿಕ ಆಸೆ, ಬಯಕೆಗಳು ಗರಿಗೆದರುತ್ತವೆ. ವ್ಯಕ್ತಿ ಕಲ್ಪನೆಯ ಕುದುರೆಯ ಬೆನ್ನೇರಿ ವಿಹರಿಸತೊಡಗುತ್ತಾನೆ. ತಾನು ನೋಡಿದ, ತನಗೆ [illegible] ತಾರೆಯರೊಂದಿಗೆ ಪ್ರೇಮಸಲ್ಲಾಪ ಮಾಡಿದಂತೆ ಕನಸು ಕಾಣುತ್ತಾನೆ. ಈ ಬಗೆಯ ಫ್ಯಾಂಟಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಟುವಟಿಕೆಯಲ್ಲಿ ಸುಖ ಕಾಣುತ್ತಾನೆ. ಇದು ವ್ಯಕ್ತಿಯ ಮುಂದಿನ ಲೈಂಗಿಕ ಜೀವನಕ್ಕೆ ಒಂದು ಬಗೆಯ ತರಪೇತಿ ಸಿದ್ಧತೆ ಎನ್ನಬಹುದು. ಅಂದರೆ ಹುಡುಗನಾಗಲೀ, ಹುಡುಗಿಯಾಗಲೀ ಹಸ್ತಮೈಥುನ ಮಾಡಿಕೊಂಡರೆ, ಅವರಲ್ಲಿ ಲೈಂಗಿಕ ಬೆಳವಣಿಗೆ, ವಿಕಾಸ ಸರಿಯಾಗಿ ಆಗುತ್ತಿದೆ ಎಂದು ಅರ್ಥವೇ ಹೊರತು, ಬೇರೇನೂ ಅಲ್ಲ. ಹಸ್ತಮೈಥುನ ಅನಾರೋಗ್ಯಕಾರಿ, ಅದರಿಂದ ನರಮಂಡಲಕ್ಕೆ ಅಥವಾ ಲೈಂಗಿಕ ವ್ಯವಸ್ಥೆಗೆ ಹಾನಿಯಾಗುತ್ತದೆ ಎಂದು ಹೇಳಲು ಯಾವುದೇ ವೈಜ್ಞಾನಿಕ ಆಧಾರವಿಲ್ಲ. ಇದನ್ನು ನೀನು ತಿಳಿಯಬೇಕು. ಹಾಗೆಯೇ ವೀರ್ಯಸ್ಖಲನದಿಂದ ಯಾವ ತೊಂದರೆಯೂ ಆಗದು. ಶರೀರದ ಯಾವುದೇ ಇತರ ಸ್ರಾವದಂತೆ, ವೀರ್ಯವೂ ನಮ್ಮ ದೇಹದಲ್ಲಿ ಉತ್ಪತ್ತಿಯಾಗುತ್ತವೆ. ವೃಷಣ, ವೀರ್ಯನಾಳ, ಪ್ರಾಸ್ಟೇಟ್ ವೀರ್ಯವನ್ನು ಉತ್ಪಾದಿಸುತ್ತದೆ. ಹೀಗೆ ಉತ್ಪತ್ತಿಯಾದ ವೀರ್ಯ ವೀರ್ಯ ಚೀಲದಲ್ಲಿ ಸಂಗ್ರಹವಾಗುತ್ತದೆ. ಅವಧಿಗೊಂದಾವರ್ತಿ ಅದು ಹೊರಬರುತ್ತದೆ ; ಹೊಸ ವೀರ್ಯಕ್ಕೆ ವೀರ್ಯ ಚೀಲದಲ್ಲಿ ಎಡೆ ಮಾಡಿಕೊಡುತ್ತದೆ. ಹೊರ ಬರಲೆಂದೇ ಉತ್ಪತ್ತಿಯಾದ ವೀರ್ಯ ಸಂಭೋಗದ ಮೂಲಕ ಅಥವಾ ಹಸ್ತಮೈಥುನದ ಮೂಲಕ ಅಥವಾ ತಾನೇ ತಾನಾಗಿ ನಿದ್ರೆಯಲ್ಲಿ ಹೊರ ಬರುತ್ತದೆ. ಇದು ಹೇಗೆ ಅಸಹಜ, ಹಾನಿಕಾರಿ ನೀನೇ ಹೇಳು. ವೀರ್ಯೋತ್ಪತ್ತಿಗೆ ಅಪಾರ ಪ್ರಮಾಣದ ರಕ್ತ ಬೇಕಾಗುತ್ತದೆ ಎನ್ನುವ ನಂಬಿಕೆ ಆಧಾರವಿಲ್ಲದ್ದು. ಆದ್ದರಿಂದ ಹಸ್ತಮೈಥುನದಿಂದಾಗಲೀ, ವೀರ್ಯಸ್ಖಲನದಿಂದಾಗಲೀ ವ್ಯಕ್ತಿಗೆ ಯಾವರೀತಿಯ ಹಾನಿಯಾಗುವುದಿಲ್ಲ, ದುರ್ಬಲತೆ ಬರುವುದಿಲ್ಲ. ತಿಳಿಯಿತೇ ?

"ನನಗಿರೋ ವೀಕ್‌ನೆಸ್‌ಗೆ ಹಸ್ತಮೈಥುನ ಕಾರಣ ಅಲ್ಲದೇ ಹೋದರೆ, ಇನ್ನೇನು ಕಾರಣದಿಂದ ನಾನು ಹೀಗಾಗಿದ್ದೇನೆ ? ನನ್ನ ಶರೀರದಲ್ಲಿ ಸ್ವಲ್ಪವೂ ಶಕ್ತಿ ಇಲ್ಲದೇ ಇರೋದಕ್ಕೆ, ಮನಸ್ಸಿಗೆ ಬೇಜಾರು, ಕಳವಳ, ದುಃಖವಾಗೋದಿಕ್ಕೆ ನನಗೆ ಏನು ಖಾಯಿಲೆ ಆಗಿದೆ. ಇದಕ್ಕೆ ಚಿಕಿತ್ಸೆ ಇಲ್ಲವೇ ?"

"ನಿನ್ನ ವೀಕ್‌ನೆಸ್‌ಗೆ ಕಾರಣ ನಿನ್ನ ಮನಸ್ಸನ್ನು ಆತಂಕ, ತಪ್ಪಿತಸ್ಥ ಭಾವನೆ ಮತ್ತು ಅಸಹಾಯಕತೆ ತುಂಬಿಕೊಂಡು ನಿನ್ನಲ್ಲಿ ನಿನಗೆ ವಿಶ್ವಾಸ ಹೊರಟು ಹೋಗಿದೆ. ಆತ್ಮ ವಿಶ್ವಾಸವಿಲ್ಲದ ಮನುಷ್ಯ ನಿಷ್ಪ್ರಯೋಜಕನಾಗ್ತಾನೆ, ಯಾವಾಗ ನಮ್ಮ ಮನಸ್ಸಿಗೆ ನೆಮ್ಮದಿ ಇರೋಲ್ಲವೋ, ಆಗ ನಮ್ಮ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸೋದಿಕ್ಕೆ ಆಗೋದಿಲ್ಲ. ನೀನು ಹಸ್ತಮೈಥುನದ ಬಗ್ಗೆ ಭಯ, ನಾಚಿಕೆ, ಪಾಪಪ್ರಜ್ಞೆ ಬೆಳೆಸಿಕೊಂಡು, ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡಿಕೊಂಡೆ. ತತ್ಫಲವಾಗಿ ಮಾನಸಿಕವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನರಳತೊಡಗಿದೆ. ಆದ್ದರಿಂದ ಅನಗತ್ಯವಾದ ಭಯವನ್ನು ಬಿಡು. ಮನಸ್ಸನ್ನು ಉಲ್ಲಾಸವಾಗಿಟ್ಟುಕೋ. ಆಗ ನಿನ್ನ ಆರೋಗ್ಯ ಸುಧಾರಿಸತ್ತೆ."

"ಮನಸ್ಸನ್ನು ಉಲ್ಲಾಸವಾಗಿಡೋದು ಹೇಗೆ ಸಾರ್. ನಾನೆಷ್ಟೋ ಪ್ರಯತ್ನಪಟ್ಟೇಸ. ಆದರೆ ಸಾಧ್ಯವಾಗ್ತಿಲ್ಲ. ಬೇಜಾರು ದುಃಖ ಹೋಗೋದೇ ಇಲ್ಲ."

"ನಮಗೆ ಸಂತೋಷ ಕೊಡೋ ಅಂತಹ ಚಟುವಟಿಕೆ, ಹವ್ಯಾಸಗಳನ್ನು ಮಾಡೋದರಿಂದ ಮನಸ್ಸಿಗೆ ಉಲ್ಲಾಸವಾಗತ್ತೆ. ಉದಾಹರಣೆಗೆ ನಿನ್ನ ಸ್ನೇಹಿತರೊಂದಿಗೆ ಅಥವಾ ಮನೆಯುವರೊಂದಿಗೆ ಕುಳಿತು ಮಾತನಾಡು. ಒಳ್ಳೆಯ ಕಥೆ, ಕವನ, ಕಾದಂಬರಿ ಅಥವಾ ಪುಸ್ತಕವನ್ನು ಓದು. ಅದರ ಬಗ್ಗೆ ಚರ್ಚೆ ಮಾಡು. ಅಭಿರುಚಿ ಇದ್ದರೆ ಯಾವುದಾದರೂ ವಾದ್ಯವನ್ನು ನುಡಿಸೋದಿಕ್ಕೆ ಕಲಿ. ಅದಾಗದಿದ್ದರೆ, ಹಾಡು, ಸಂಗೀತವನ್ನು ಕೇಳು, ದಿನಕ್ಕೆ ಒಂದು ಅರ್ಧ ಘಂಟೆ ಕಾಲವಾದರೂ ಒಳ್ಳೇಗಾಳಿ ಬೆಳಕು ಇರೋ ಜಾಗದಲ್ಲಿ ವ್ಯಾಯಾಮ ಮಾಡು ಅಥವಾ ವಾಕಿಂಗ್ ಮಾಡು. ಇಲ್ಲವೇ ಆಟ ಆಡು. ಕಷ್ಟದಲ್ಲಿರೋ ವರಿಗೆ ನಿನ್ನ ಕೈಲಾದ ಸಹಾಯ ಮಾಡು. ಸಹಾನುಭೂತಿ ತೋರಿಸು, ಹೀಗೆ ಸೃಜನಾತ್ಮಕವಾದ, ಹಿತ ಕೊಡತಕ್ಕಂತ ಚಟುವಟಿಕೆ ಪ್ರಾರಂಭಮಾಡು. ನಿನ್ನ ತೊಂದರೆಗಳೆಲ್ಲ ಹೇಳ ಹೆಸರಿಲ್ಲದಂತಾಗುತ್ತವೆ."

"ಹಾಗಾದರೆ ನನಗೆ ಮಾತ್ರೆ, ಇಂಜೆಕ್ಷನ್, ಟಾನಿಕ್ ಏನೂ ಬೇಡವೇ ಸಾರ್"

"ಬೇಡ ರಮಾಕಾಂತ, ನಾವು ತಿನ್ನೋ ಆಹಾರದಲ್ಲಿ ಹಸಿರು ಸೊಪ್ಪು, ತರಕಾರಿ, ಹಾಲು, ಹಣ್ಣು (ಮಾಂಸಾಹಾರಿಗಳಾದರೆ ಮೊಟ್ಟೆ, ಮಾಂಸ) ದ್ವಿದಳಧಾನ್ಯ ಇದ್ದರೆ, ಬೇರೆ ಯಾವ ಟಾನಿಕ್ಕೂ ಬೇಕಾಗೋದಿಲ್ಲ. ಆದ್ದರಿಂದ ಆಯಾ ಕಾಲದಲ್ಲಿ ಸಿಗೋ ತರಕಾರಿ, ಹಣ್ಣುಗಳನ್ನು ಉಪಯೋಗಿಸು."

"ಆಗಲೀ ಸಾರ್, ನೀವು ನನ್ನ ಮನಸ್ಸಿನೊಳಗೆ ಬಂದೆಯಂತೆ ಕುಳಿತು ನೋವು ಕೊಡ್ತಿದ್ದ ವಿಚಾರವನ್ನು ಸರಿಯಾದ ತಿಳಿವಳಿಕೆ ಕೊಟ್ಟು ತೆಗೆದು ಹಾಕಿದಿರಿ, ಈಗ ಸ್ವಲ್ಪ ನೆಮ್ಮದಿ ಸಿಕ್ತು. ನೀವು ಹೇಳಿದ ಹಾಗೆ ನನ್ನ ನಂಬಿಕೆಯನ್ನು ಬದಲಾಯಿಸಿಕೊಳ್ತೇನೆ, ಚಟುವಟಿಕೆಯಲ್ಲಿ ತೊಡಗ್ತೇನೆ, ಮತ್ತೆ ನಿಮ್ಮನ್ನು ಬಂದು ನೋಡಬೇಕು ಅಂದರೆ, ಬರಬಹುದೇ."

"ಖಂಡಿತ ಬಾ. ಅನುಮಾನಗಳಿದ್ದರೆ ಸಂಕೋಚವಿಲ್ಲದೆ ಕೇಳು" ಎಂದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಾದನಂತರ ರಮಾಕಾಂತ ನಾಲ್ಕು ಸಲ ನನ್ನನ್ನು ನೋಡಲು ಬಂದ. ಅವನಲ್ಲಿ ಸಾಕಷ್ಟು ಬದಲಾವಣೆಗಳಾದುವು. ಇತರ ಚಟುವಟಿಕೆಗಳಲ್ಲಿ ಹೆಚ್ಚು ಕಾಲವನ್ನು ವಿನಿಯೋಗಿಸುತ್ತಿರುವುದರಿಂದ, ಮೊದಲಿನಷ್ಟು ಲೈಂಗಿಕ ಒತ್ತಡವೂ ಇಲ್ಲ ಎಂದು ತಿಳಿಸಿದ, ದಿನಕಳೆದಂತೆ ಲವಲವಿಕೆಯಿಂದ, ಆರೋಗ್ಯದಿಂದ ಅವನ ಮನೋಕ್ಲೇಶ ನಿವಾರಣೆಯಾಯಿತು. ನಿಶ್ಶಕ್ತಿ, ಖಿನ್ನತೆ ಮರೆಯಾದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಕಾಗಿ ಕೂರುವ ಶಿವರಾಜ

"ತಾವು ಡಾ॥ ಚಂದ್ರಶೇಖರ್ ಅಲ್ಲವೇ ?"

"ಹೌದು, ನನ್ನಿಂದೇನಾಗಬೇಕಿತ್ತು. ಒಳಗೆ ಬನ್ನಿ ಕುಳಿತು ಕೊಳ್ಳಿ" ಎಂದೆ.

"ನಾನು ಕುಮಾರ ಸ್ವಾಮಿ ಅಂತ. ಹಾಸನದ ಬಳಿ ಒಂದು ಹಳ್ಳಿಯಿಂದ ಬಂದಿದ್ದೇನೆ. ನಮ್ಮ ಅಣ್ಣನ ಮಗ ಒಬ್ಬಿದ್ದಾನೆ. ಶಿವರಾಜ ಅಂತ. ಅವನ ವಿಚಾರವಾಗಿ ನಿಮ್ಮ ಸಲಹೆ ಬೇಕಿತ್ತು. ಅವನಿಗಿನ್ನೂ ಚಿಕ್ಕ ವಯಸ್ಸು. ಇಪ್ಪತ್ತು ವರ್ಷವೂ ಇನ್ನೂ ಆಗಿಲ್ಲ. ಎಸ್ಸೆಸ್ಸೆಲ್ಸಿ ಆದ ಮೇಲೆ ಮುಂದಕ್ಕೆ ಓದದೆ, ವ್ಯವಸಾಯದ ಕೆಲಸ ಮಾಡ್ಕೊಂಡಿದ್ದ. ಈಗ ಅವನಿಗೇನಾಗಿದೆ ಅಂತ ನಮಗೆ ಯಾರಿಗೂ ಅರ್ಥವಾಗ್ತಿಲ್ಲ. ಅವರ ಅಜ್ಜಿ, ಅಮ್ಮ ಮತ್ತೆ ಕೆಲವರು ಅವನಿಗೆ ಮದುವೆ ಮಾಡಿಬಿಡಿ. ಒಳ್ಳೆಯ ಕಾಲ್ಗುಣ ಇರೋ ಹುಡುಗಿ ಮನೆಗೆ ಸೊಸೆಯಾಗಿ ಬಂದರೆ, ಅವನನ್ನು ಕಾಡ್ತಾ ಇರೋ ಅನಿಷ್ಟ ಬಿಟ್ಟು ಹೋಗುತ್ತೆ; ಸರಿಹೋಗ್ತಾನೆ ಅಂತ ಹೇಳ್ತಿದ್ದಾರೆ. ನಮ್ಮಣ್ಣ 'ಸ್ವಾಮಿ, ಏನ್ಮಾಡೋದು ನೀನು ಏನಂತೀಯ' ಅಂತ ಕೇಳಿದ. ಶಿವರಾಜನ ಸ್ಥಿತಿಯನ್ನು ನೋಡಿದರೆ ಅವನಿಗೆ ಮದುವೆ ಮಾಡಿದರೆ, ಬರೋ ಹುಡುಗಿಗೆ ನಾವು ಅನ್ಯಾಯ ಮಾಡಿದ ಹಾಗೆ ಆಗತ್ತೆ. ಆದ್ದರಿಂದ ನಾವು ದುಡುಕಬಾರದು, ನಾನು ಬೆಂಗಳೂರಿಗೆ ಹೋಗಿ ಚಂದ್ರಶೇಖರ ಡಾಕ್ಟರನ್ನು ಕಂಡು ಶಿವರಾಜನ ವಿಚಾರವನ್ನು ಹೇಳಿ, ಅವರ ಸಲಹೆ ಪಡೆದು ಬರ್ತೀನಿ ಅಂತ ಹೇಳಿ ಬಂದಿದ್ದೀನಿ ಡಾಕ್ಟರೆ..."

"ನಿಮ್ಮ ಶಿವರಾಜನಿಗೆ ಏನು ತೊಂದರೆ ಇದೆ ? ಏನು ಖಾಯಿಲೆ ? ವಿವರವಾಗಿ ಹೇಳಿ."

"ಅವನಿಗೆ ಯಾವ ಖಾಯಿಲೆಯೂ ಇದ್ದ ಹಾಗಿಲ್ಲ. ಛಳಿ ಇಲ್ಲ ಜ್ವರ ವಿಲ್ಲ. ನೋಡೋದಿಕ್ಕೆ ಪುಷ್ಟಿಯಾಗಿ ಗಟ್ಟಿ ಮುಟ್ಟಯಾಗೇ ಇದ್ದಾನೆ. ಪ್ರತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನ ಒಂದು ಘಂಟೆ ವ್ಯಾಯಾಮ ಮಾಡೋನು. ಅವನಿಗೆ ಯಾವ ತೊಂದರೇನೂ ಇದ್ದ ಹಾಗಿಲ್ಲ. ಎಲ್ಲಾ ವಿಚಿತ್ರವಾಗಿದೆ ಡಾಕ್ಟರೆ. ನಮಗೆ ಒಂದೂ ತೋಚ್ತಾ ಇಲ್ಲ. ಅವನಿಗೇನಾಗಿದೆ ಅಂತ ನೀವೇ ಹೇಳಬೇಕು. ಎರಡು ವರ್ಷದ ಹಿಂದೆ ಆತ ಚೆನ್ನಾಗಿದ್ದ. ನಾನು ಮೊದಲೇ ಹೇಳಿದ ಹಾಗೆ ಹದಿನಾರನೇ ವಯಸ್ಸಿಗೇ ಎಸ್ಸೆಸ್ಸೆಲ್ಸಿ ಮಾಡಿಕೊಂಡ. ಎಲ್ಲೂ ಫೇಲಾಗದೆ, ಚೆನ್ನಾಗಿ ಓದ್ತಿದ್ದ. ನಾನು 'ಶಿವರಾಜ, ನೀನು ಮುಂದಕ್ಕೆ ಓದಬೇಕು. ಹಾಸನಕ್ಕೆ ಹೋಗಿ ಕಾಲೇಜಿಗೆ ಸೇರು. ನಿನಗೆ ವಸತಿ, ಊಟದ ಸೌಕರ್ಯವನ್ನು ನಾನು ಮಾಡ್ತೇನೆ. ನನ್ನ ಮಕ್ಕಳೆಲ್ಲ ದಡ್ಡ ಶಿಖಾಮಣಿಗಳು. ಒಬ್ಬರೂ ಎಸ್ಸೆಸ್ಸೆಲ್ಸಿ ಪಾಸ್ ಮಾಡ್ಲಿಲ್ಲ. ನೀನು ಓದಿ ಬುದ್ಧಿವಂತ ಆದರೆ ನಮಗೆಲ್ಲಾ ಹೆಮ್ಮೆ' ಅಂತ ಹೇಳಿದೆ. ನಮ್ಮ ಅಣ್ಣನಿಗೂ ಇದು ಇಷ್ಟವಿತ್ತು. ಆದರೆ ನಮ್ಮೆಲ್ಲರ ಆಶ್ಚರ್ಯಕ್ಕೆ ಶಿವರಾಜ ಓದು ಮುಂದುವರೆಸೋದಿಕ್ಕೆ ಇಷ್ಟಪಡ್ಲಿಲ್ಲ. ನನಗೆ ಓದು ಸಾಕು ಚಿಕ್ಕಪ್ಪ, ಓದಿ ಯಾವುದೋ ಒಂದು ಆಫೀಸಿನಲ್ಲಿ ನೌಕರಿ ಹಿಡಿಯೋದಕ್ಕೆ ನನಗೆ ಇಷ್ಟವಿಲ್ಲ. ನನಗೆ ಗದ್ದೆ ತೋಟ, ಗಿಡಮರಗಳನ್ನು ಬೆಳೆಸೋದು ಅಂದ್ರೆ ಬಲು ಇಷ್ಟ ಅನ್ನೋದು ನಿನಗೆ ಗೊತ್ತಿದೆ. ಕಾಡಿನ ಮಧ್ಯೆ ಒಂದು ಪುಟ್ಟಮನೆ ಕಟ್ಟಿಕೊಂಡು, ಪ್ರಕೃತಿಯ ಮಧ್ಯೆ ಜೀವನ ಮಾಡೋ ಕನಸು ನನ್ನದು. ಆದ್ದರಿಂದ ಓದು ಅಂತ ನನ್ನ ಬಲವಂತಮಾಡ ಬೇಡಿ. ವ್ಯವಸಾಯ ಮಾಡೋದನ್ನ ಕಲೀತೇನೆ. ನಮಗಿರೋ ಗದ್ದೆ ತೋಟದಲ್ಲಿ ದುಡೀತೇನೆ ಎಂದ. ಅವನು ಓದೋದಿಕ್ಕೆ ಒಪ್ಪಲಿಲ್ಲವಲ್ಲಾ ಅಂತ ನಿರಾಶೆಯಾದರೂ, ಸ್ವತಃ ವ್ಯವಸಾಯಗಾರರಾದ ನಮಗೆ, ಅವನ ವ್ಯವಸಾಯ ಮಾಡೋ ಮನಸ್ಸನ್ನು ಕಂಡು ಸಮಾಧಾನಪಟ್ಟೆವು,ಆಯಿತು ಇದೂ ಒಳ್ಳೇದೇ ಯಾರ ಹಂಗಿಲ್ಲದೆ, ಸ್ವತಂತ್ರವಾಗಿ ದುಡಿದು ಮುಂದುವರೀಲಿ, ನಮಗೂ ಸಹಾಯವಾಗ್ತದೆ ಅಂತ ಮಾತಾಡಿಕೊಂಡೆವು. ಎರಡು ವರ್ಷ ನಮ್ಮ ನಿರೀಕ್ಷೆಗೂ ಮೀರಿ ಕಷ್ಟ ಪಟ್ಟು ಕೆಲಸ ಮಾಡತೊಡಗಿದ. ನಸುಕಿನಲ್ಲಿ ಎದ್ದು ಕೆಲಸ ಶುರು ಮಾಡಿದರೆ, ಸೂರ್ಯ ಮುಳುಗೋವರೆಗೂ ಒಂದಲ್ಲ ಒಂದು ಬದುಕನ್ನು ಮಾಡ್ತನೇ ಇರೋನು. ಮಾಡುವ ಕೆಲಸವನ್ನು ಬಲು ಅಚ್ಚುಕಟ್ಟಾಗಿ ಮಾಡೋನು. ಅವನಿಗೆ ಪುಸ್ತಕಗಳು ಅಂದರೆ ಪ್ರಾಣ. ಬಿಡುವಿದ್ದಾಗಲೆಲ್ಲಾ ಕುಳಿತು ಓದುತ್ತಿದ್ದ. ಕಥೆ ಚೆನ್ನಾಗಿದ್ದರೆ, ಅಜ್ಜಿ ಮತ್ತು ತಾಯಿಗೆ ಅದನ್ನು ಓದಿ ಹೇಳುತ್ತಿದ್ದ. ಹೀಗೆ ಮನೆಯವರ ಅಚ್ಚುಮೆಚ್ಚಾಗಿದ್ದ. ಊರಿನ ಹಿರಿಯರು ಮತ್ತು ಇತರರು ತಮ್ಮ ಮಕ್ಕಳಿಗೆ ಹೇಳೋರು, ಆ ಶಿವರಾಜನನ್ನು ನೋಡಿ ಕಲಿಯಿರಿ. ಅವನ ಬುದ್ಧಿಯಲ್ಲಿ ಅರ್ಧದಷ್ಟಾದರೂ ನಿಮಗಿದ್ದರೆ, ಹೆತ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವೇ ಪುಣ್ಯವಂತರು ಅಂತ ಹೇಳುತ್ತಿದ್ದರು. ಈ ಎರಡು ವರ್ಷದಿಂದೀಚೆಗೆ ಎಲ್ಲರಿಗೆ ಮಾದರಿಯಾಗಿದ್ದ ಶಿವರಾಜ ಬದಲಾಗಿ ಹೋಗಿದ್ದಾನೆ. ಈಗ ಯಾರೊಂದಿಗೂ ಮಾತನಾಡೋದಿಕ್ಕೆ ಇಷ್ಟಪಡೋಲ್ಲ. ಮಂಕನಂತೆ ಕುಳಿತಲ್ಲಿ ಕುಳಿತಿರ್ತಾನೆ, ನಿಂತಲ್ಲಿ ನಿಂತಿರ್ತಾನೆ. ಹತ್ತು ಪ್ರಶ್ನೆಗೆ ಒಂದಕ್ಕೆ ಉತ್ತರಿಸಿದರೆ ಉತ್ತರಿಸಿದ ಇಲ್ಲದಿದ್ದರೆ ಇಲ್ಲ. ಶಿವು, ಯಾಕೋ ಮಾತಾಡೋಲ್ಲ, ಯಾಕೋ ಹೀಗಿದ್ದೀ ಅಂದ್ರೆ, ಹೇಗಿದ್ದೇನೆ ಚೆನ್ನಾಗೇ ಇದ್ದೇನೆ. ಮಾತಾಡೋದಕ್ಕೆ ಏನಿದೆ ಅಂತಾನೆ. ತೋಟದ ಕಡೆ, ಗದ್ದೆಕಡೆ ಮೊದಲು ತಾನಾಗಿ ಹೋಗ್ತಿದ್ದವನು ಈಗ ಹೋಗೋಲ್ಲ. ಬಾ ಅಂತ ಬಲವಂತ ಮಾಡಿ ಕರೆದೊಯ್ದರೆ, ಮೂಕ ಹಸುವಿನ ಹಾಗೆ ಹಿಂದೆ ಕಾಲು ಎಳೆದುಕೊಂಡು ಬರ್ತಾನೆ. ಬಂದು ಒಂದು ಕಡೆ ಮೂದೇವಿ ತರ ಕೂತ್ಕೋಳ್ತಾನೆ. ಆಕಾಶವನ್ನೋ ದೂರದ ಬೆಟ್ಟವನ್ನೋ, ಮರದತುದಿಯನ್ನೋ ದಿಟ್ಟಿಸಿ ನೋಡ್ತಿರ್ತಾನೆ. ಅಲ್ಲೇನಿದೆಯೋ ಎಂದರೆ, ಏನೂ ಇಲ್ಲ ಅಂತಾನೆ. ಊಟ ತಿಂಡಿ ಬಗ್ಗೆ ಈಗ ಸ್ವಲ್ಪ ಅಕ್ಕರೆಯೂ ಇಲ್ಲ, ಈ ಮೊದಲು ತಾಯಿಯನ್ನು ಅಮ್ಮ ಈ ದಿನ ಪಾಯಸ ಮಾಡು ಈ ದಿನ ಅವಲಕ್ಕಿ ಉಪ್ಪಿಟ್ಟು ಮಾಡು ತಿನ್ನ ಬೇಕು ಅಂತ ಆಸೆಯಾಗಿದೆ ಅಂತ ಕೇಳಿ ತಿನ್ನುತ್ತಿದ್ದವನು ಈಗ ಬಲವಂತ ಮಾಡಿದರೆ ಊಟ ಮಾಡ್ತಾನೆ. ಸಾರಿಗೆ ಹುಳಿ ಕಡಿಮೆ ಇರಲಿ, ಮಜ್ಜಿಗೆಗೆ ಉಪ್ಪು ಹಾಕದೇ ಇರಲಿ, ಮಾತಾಡದೆ ತಿಂದು ಬಿಡುತ್ತಾನೆ. ಮೊದಲಿನಿಂದಲೂ ಆತನಿಗೆ ಬಟ್ಟೆಗಳ ಬಗ್ಗೆ ಬಹಳ ಮೋಹ. ಹಲವಾರು ಜೊತೆ ಬಟ್ಟೆಗಳನ್ನು ಹೊಲಿಸಿಕೊಂಡು, ಪ್ರತಿದಿನ ಇಸ್ತ್ರಿಮಾಡಿದ ಬಟ್ಟೆಗಳನ್ನೇ ಹಾಕುತ್ತಿದ್ದವನು ಈಗ ವಾರವಾದರೂ ಉಟ್ಟ ಬಟ್ಟೆಯನ್ನು ಕಳಚುವುದಿಲ್ಲ. ತಾಯಿ ಹೇಳಿ ಹೇಳಿ ಮಡಿ ಬಟ್ಟೆ ಹಾಕಿಸಬೇಕು. ಬಟ್ಟೆ ಕೊಳೆಯಾಗಿದೆಯಲ್ಲೋ ಎಂದರೆ ಆಗಿದ್ದರೆ ಏನಾಯಿತು, ಇರಲಿ ಬಿಡು ಎನ್ನುತ್ತಾನೆ. ಆತ ಪುಸ್ತಕಗಳನ್ನು ಮುಟ್ಟಿ ಒಂದು ವರ್ಷದ ಮೇಲಾಯ್ತು. ಏನೂ ಮಾಡದೇ ಸುಮ್ಮನೆ ಕಲ್ಲು ಬೊಂಬೆಯ ಹಾಗೆ ಕುಳಿತಿರುತ್ತೀಯಲ್ಲಾ ಬೇಜಾರಾಗುವುದಿಲ್ಲವೇ. ಕುಳಿತು ಏನು ಯೋಚಿಸುತ್ತೀಯಾ ಅಂತ ಒಂದು ದಿನ ಕೇಳಿದೆ. ಅದಕ್ಕೆ ಅವನು 'ಚಿಕ್ಕಪ್ಪ, ಹೀಗೆ ಕುಳಿತಿರಲು ಸ್ವಲ್ಪವೂ ಬೇಸರವಾಗುವುದಿಲ್ಲ ಎಂದರೆ ನೀವು ನಂಬುವುದಿಲ್ಲ. ನಾನು ಏನೂ ಯೋಚನೆಯನ್ನು ಮಾಡುವುದಿಲ್ಲ. ತಲೆಯೆಲ್ಲಾ ಖಾಲಿಖಾಲಿಇರುತ್ತದೆ. ಗಂಟೆಗಳು ಉರುಳಿ ಹೋದರೂ, ನನಗೆ ಏನು ಮಾಡಲೂ ತೋಚುವುದಿಲ್ಲ. ನನ್ನ ಸ್ಥಿತಿಯನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ' ಎಂದ. ಕಳೆದ ಎರಡು ಮೂರು ತಿಂಗಳಿನಿಂದ ಆತ ರಾತ್ರಿ ಹೊತ್ತು ಸರಿಯಾಗಿ ನಿದ್ರೆ ಮಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದಿಲ್ಲವಂತೆ. ಲೈಟ್ ಹಾಕಿಕೊಂಡು ಹಾಸಿಗೆಯಮೇಲೆ ಕುಳಿತಿರುತ್ತಾನಂತೆ. ಆಗಾಗ್ಯೆ ತನಗೆ ತಾನೇ ಮಾತಾಡಿಕೊಳ್ಳುವುದು, ಮುಗುಳ್ನಗುವುದು ಮಾಡು ತ್ತಾನಂತೆ, ಮೊನ್ನೆ ಆತ ಅಪರೂಪಕ್ಕೆ ಮಾತಾಡುತ್ತಾ 'ಚಿಕ್ಕಪ್ಪಾ ನಾವೇಕೆ ಈ ಪ್ರಪಂಚದಲ್ಲಿ ಹುಟ್ಟಿದ್ದೇವೆ. ಊಟ ಮಾಡಿ, ಹಣ ಸಂಪಾದಿಸಿ ಖರ್ಚು ಮಾಡುವುದು, ಮದುವೆಯಾಗಿ ಮಕ್ಕಳನ್ನು ಪಡೆಯುವುದೇ ನಮ್ಮ ಜೀವನದ ಉದ್ದೇಶವೇ. ನಾವೆಲ್ಲ ಸಾಯುವುದು ನಿಶ್ಚಿತವಾಗಿರುವಾಗ, ಈಗಲೇ ಯಾಕೆ ಸಾಯಬಾರದು. ಏನೂ ಮಾಡದೆ ಸುಮ್ಮನೆ ಯಾಕಿರಬಾರದು' ಎಂದು ಕೇಳಿದ. ಅದಕ್ಕೆ ನಾನು ಏನು ಉತ್ತರ ಕೊಡಬೇಕೆಂದು ಯೋಚಿಸುತ್ತಿದ್ದ ಹಾಗೆ, ಆತ ಅಲ್ಲಿಂದ ಎದ್ದು ತನ್ನ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟ. ಇದಲ್ಲದೆ ಇನ್ನಾವ ವಿಚಿತ್ರ ನಡೆವಳಿಕೆ ಇಲ್ಲ. ಯಾರನ್ನೂ ಬೈಯ್ಯೋ ದಿಲ್ಲ. ಅಪದ್ಧ ಮಾತಾಡೋದಿಲ್ಲ. ಜನ ಹೇಳೋಪ್ರಕಾರ ಶಿವರಾಜನಿಗೆ ಯಾರೋ ಮಾಟ ಮಾಡಿಸಿ ಬಿಟ್ಟಿದ್ದಾರೆ ಅಥವಾ ಮದ್ದೀಡು ಹಾಕಿ ಬಿಟ್ಟಿ ದ್ದಾರೆ. ಅದಕ್ಕೇ ಈ ರೀತಿ ಮಂಕಾಗಿದ್ದಾನೆ. ಅದರಂತೆ ನಮ್ಮ ಅಣ್ಣ ಹಲವಾರು ಮಂತ್ರವಾದಿಗಳನ್ನು ಕರೆಸಿದ್ದೂ ಆಯಿತು. ಅವರಿಂದ ಮಾಟ ತೆಗಿಸಿದ್ದೂ ಆಯಿತು. ನಾಲ್ಕಾರು ಬಾರಿ ಶಿವರಾಜನಿಗೆ ವಾಂತಿ ಮಾಡಿಸಿ ಮದ್ದು ತೆಗೆಸಿದ್ದೂ ಆಯಿತು. ದುಡ್ಡು ಖರ್ಚಾಯಿತೇ ವಿನಾ ಶಿವರಾಜ ಸರಿಹೋಗ ಲಿಲ್ಲ. ಅವನ ಈ ಸ್ಥಿತಿಯನ್ನು ನೋಡಿ, ಅವನ ತಾಯಿ, ಅಜ್ಜಿ ಕಣ್ಣೀರು ಹಾಕ್ತಾರೆ, ನಮಗೆಲ್ಲ ದಿಕ್ಕೇ ತೋಚದ ಹಾಗೇ ಆಗಿಬಿಟ್ಟಿದೆ. ಶಿವರಾಜನಿಗೆ ಏನಾಗಿರಬಹುದು ಅಂತ ನಿಮ್ಮ ಅಭಿಪ್ರಾಯ ಡಾಕ್ಟರೇ. ನಿಮ್ಮಿಂದ ನಿಮ್ಮ ಆಸ್ಪತ್ರೆಯಿಂದ ಅವನಿಗೆ ಏನಾದರೂ ಸಹಾಯ ಆದೀತೆ ?"

"ಕುಮಾರಸ್ವಾಮಿಯವರೇ ,ನಿಮ್ಮ ಅಣ್ಣನ ಮಗನ ವಯಸ್ಸು ಮತ್ತು ಅವನಲ್ಲಿ ಈ ಎರಡು ವರ್ಷಗಳಲ್ಲಿ ಆಗಿರೋ ಬದಲಾವಣೆಗಳನ್ನು ಗಮನಿಸಿದರೆ ಆತ ಸ್ಕಿಜೋಫ್ರೆನಿಯಾ ಕಾಯಿಲೆಯಿಂದ ಒಳಲ್ತಾ ಇರಬೇಕು ಅನ್ನಿಸತ್ತೆ. ಈ ಕಾಯಿಲೆ ಬಂದಾಗ ವ್ಯಕ್ತಿ ವಿನಾಕಾರಣ ಮಂಕಾಗ್ತಾನೆ. ತನ್ನ ದೈನಂದಿನ ಚಟುವಟಿಕೆಗಳನ್ನು, ಕರ್ತವ್ಯಗಳನ್ನು, ಬೇಕು ಬೇಡಗಳನ್ನು ನಿರ್ಲಕ್ಷ್ಯ ಮಾಡ್ತಾನೆ. ಈ ಕಾಯಿಲೆಗೆ ಚಿಕಿತ್ಸೆ ಇದೆ. ನೀವು ಆತನನ್ನು ನಮ್ಮ ಹೊರ ರೋಗಿ ವಿಭಾಗಕ್ಕೆ ಕರೆತನ್ನಿ. ಆತನನ್ನು ವಿವರವಾಗಿ ಪರೀಕ್ಷೆ ಮಾಡಿ, ಸ್ಕಿಜೋಫ್ರೇನಿಯಾ ಇದೆ ಎಂದು ಖಾತ್ರಿಯಾದರೆ, ಔಷಧೋಪಚಾರವನ್ನು ಪ್ರಾರಂಭ ಮಾಡೋಣ" ಎಂದೆ.

Sri Vidyabharathi Book Centre, Sringeri

* * *

 CC-O. In Public Domain. Digitized by eGangotri

"ಶಿವರಾಜ, ನೀನು ಇತ್ತೀಚೆಗೆ ಮಂಕಾಗಿದ್ದೀಯಾ, ಯಾವ ಕೆಲಸವನ್ನೂ ಮಾಡೋದಿಲ್ಲ. ಆಹಾರ ನಿದ್ರೆ ಬಗ್ಗೆ ನಿನಗೆ ಆಸಕ್ತಿ ಇಲ್ಲ ಅಂತಾರೆ. ನಿನಗೆ ಏನಾಗ್ತಿದೆ ಅಂತ ಹೇಳ್ತೀಯಾ" ಎಂದೆ.

ಶಿವರಾಜ ತತ್‌ಕ್ಷಣ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಕೆಲವು ಸೆಕೆಂಡುಗಳ ಕಾಲ ನನ್ನತ್ತ ನೋಡಿ, ಆಮೇಲೆ ಗೋಡೆಯತ್ತ ದೃಷ್ಟಿಸುತ್ತಾ ಕುಳಿತ. ತೆಳುವಾದ ಶರೀರ. ಅಸ್ತವ್ಯಸ್ತ ಉಡುಪು. ಕಾಗದದಲ್ಲಿ ಮಾಡಿದಂತೆ ಭಾವ ರಹಿತ ಮುಖ.

"ಶಿವರಾಜ, ನಾನು ಹೇಳಿದ್ದು ಕೇಳಿಸಿತೆ ?" ಎಂದು ಅವನ ಭುಜ ಮುಟ್ಟಿ ಅಲುಗಾಡಿಸಿ ಕೇಳಿದೆ.

ಯಾವುದೋ ಬೇರೆ ಲೋಕದಲ್ಲಿದ್ದು, ಕಷ್ಟಪಟ್ಟು ಅಲ್ಲಿಂದ ಹೊರ ಬಂದವನಂತೆ 'ಆಂ... ಏನು' ಎಂದ. ಆದರೆ ಮುಖದಲ್ಲಿ ಸಂಭಾಷಣೆಯನ್ನು ಮುಂದುವರೆಸುವ ಯಾವ ಆಸಕ್ತಿಯೂ ಇದ್ದಂತಿರಲಿಲ್ಲ.

"ಶಿವರಾಜ, ನಿನಗೇನು ತೊಂದರೆ ?"

"ನನಗೆ ಕೆಲಸಮಾಡಲು ಇಷ್ಟವಿಲ್ಲ. ಸುಮ್ಮನೆ ಕುಳಿತಿರು ಎನ್ನುತ್ತಾರೆ.."

"ಯಾರು ಹಾಗೆ ಹೇಳುವವರು ?"

"ಅವರೇ..."

"ಅವರೇ ಎಂದರೆ ಗಂಡಸರೇ. ಹೆಂಗಸರೇ. ಅವರು ನಿನಗೆ ಪರಿಚಯದವರೇ ?"

"ಗಂಡಸರು, ಹೆಂಗಸರು ಇಬ್ಬರೂ. ಅವರು ಯಾರು ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿಲ್ಲ."

"ಅಂದರೆ ಅವರು ನಿನ್ನ ಕಣ್ಣಿಗೆ ಕಾಣಿಸುವುದಿಲ್ಲ, ಆದರೆ ಅವರ ಮಾತುಗಳು ಮಾತ್ರ ಕೇಳಿಸುತ್ತವೆಯೆ ?"

"ಹೌದು."

"ಅವರು ಯಾವಾಗ ಮಾತಾಡ್ತಾರೆ, ಏನು ಮಾತಾಡ್ತಾರೆ ?"

"ಯಾವಾಗೆಂದರೆ ಆವಾಗ, ನನ್ನ ವಿಚಾರವನ್ನೇ ಮಾತಾಡ್ತಾರೆ. ನನಗೆ ಹಾಗೆ ಮಾಡು, ಹೀಗೆ ಮಾಡು ಅಂತ ಹೇಳ್ತಾರೆ. ನಮ್ಮ ಮಾತು ಕೇಳಲೇ ಬೇಕು ಅಂತ ಒತ್ತಾಯ ಹಾಕ್ತಾರೆ."

"ಕೇಳೊಲ್ಲ ಅಂದರೆ ಏನು ಹೇಳ್ತಾರೆ. ಅವರ ಮಾತನ್ನು ನಿಲ್ಲಿಸೋದಕ್ಕೆ ಆಗೋಲ್ಲವೇ ?"

Sri Vidyabharathi Book Centre, Sringeri

"ಕೇಳೊಲ್ಲ ಅಂದರೆ ಬೆದರಿಸ್ತಾರೆ. ಕೆಟ್ಟ ಮಾತಲ್ಲಿ ಬೈತಾರೆ. ಅವರೇನು

CC-O. In Public Domain. Digitized by eGangotri

ರೇಡಿಯೋ ಅಲ್ವಲ್ಲ, ನಾನು ಬೇಕು ಅಂದಾಗ ನಿಲ್ಸೋಕೆ. ಅವರ ಮಾತಿಂದ ತಲೆ ಚಿಟ್ಟು ಹಿಡಿದರೂ ನಾನು ಏನೂ ಮಾಡೋ ಹಾಗಿಲ್ಲ. ಅದಕ್ಕೆ ನಾನು ಒಂಟಿಯಾಗಿ, ಜನರಿಂದ ದೂರ ಇದ್ದೀನಿ. ಬೇರೆ ಗಲಾಟೆಯಾದರೂ ಕಡಿಮೆ ಆಗಲಿ ಅನ್ನೋದೇ ಉದ್ದೇಶ."

"ಈ ಧ್ವನಿಗಳು ಎಲ್ಲಿಂದ ಬರುತ್ವೆ ?"

"ಎಲ್ಲಾ ಕಡೆಯಿಂದ. ಒಂದು ಸಲ ಹಿಂದಿನಿಂದ, ಇನ್ನೊಂದು ಸಲ ಪಕ್ಕದಿಂದ. ನೀವ್ಯಾರು, ನನ್ನ ಮುಂದೆ ಬನ್ನಿ ಅಂದರೆ, ಸುಮ್ಮನೆ ನಗ್ತಾರೆ. ನನಗೆ ಕಾಣಿಸ್ಕೊಳಲ್ಲ. ಈ ವಿಚಾರವನ್ನು ನಾನು ನನ್ನ ಮನೆಯವರಿಗೆ ಹೇಳಿಲ್ಲ. ಹೇಳಿದ್ರೆ ದೆವ್ವಗಳು ನನ್ನೊಂದಿಗೆ ಮಾತಾಡುತ್ವೆ ಅಂತ ಹೆದರಿಕೋ ಬಹುದು. ಇವರು ನಮ್ಮ ಹಾಗೇ ಮನುಷ್ಯರೇ. ಬುದ್ಧಿವಂತರು. ನನ್ನ ಕಣ್ಣಿಗೆ ಬೀಳದೇ, ಉಶಾರಿನಿಂದ ಇದ್ದಾರೆ."

"ಅವರು ಎಲ್ಲರನ್ನು ಬಿಟ್ಟು, ನಿನ್ನೊಂದಿಗೆ ಮಾತ್ರ ಏಕೆ ಮಾತಾಡ್ತಾರೆ?"

"ಅದೇ ಗೊತ್ತಿಲ್ಲ. ನಾನು ಒಳ್ಳೇ ಹುಡುಗ ಅಂತ ಇರಬಹುದು..."

"ಇನ್ನೇನು ತೊಂದರೆ ಇದೆ ?"

"ತೊಂದರೆ... ಒಂದೊಂದು ಸಲ ತಲೆ ಖಾಲಿ ಇರತ್ತೆ. ಎಲ್ಲ ಬಟ್ಟ ಬಯಲು. ಒಂದೊಂದು ಸಲ ಏನೇನೋ ಯೋಚನೆಗಳು ಬರುತ್ವೆ. ಉತ್ತರ ಗೊತ್ತಿಲ್ದೆ ಇರೋ ಪ್ರಶ್ನೆಗಳು ಮನಸ್ಸನ್ನು ಕಾಡುತ್ವೆ... ನೀವು ಡಾಕ್ಟರೇ...?"

"ಹೌದು."

"ಸಾರ್. ನಾವು ಯಾಕೆ ಹುಟ್ತೀವೆ, ಯಾಕೆ ಸಾಯ್ತೀವೆ. ಬದುಕಿ ದ್ದಾಗ ನಾವು ಏನು ಮಾಡಬೇಕು ? ಕೆಲಸ ಮಾಡಲೇಬೇಕೇ ?"

"ನಿನಗೇನು ಅನ್ನಿಸತ್ತೆ ?"

"ನನಗೊಂದೂ ಗೊತ್ತಾಗೋಲ್ಲ. ಬರೀ ಗೊಂದಲ, ಗಜಿ ಬಿಜಿ..."

ಶಿವರಾಜ ಮನಸ್ಸಿನ ಮಾರಕ ರೋಗ 'ಸ್ಕಿಜೋಫ್ರೀನಿಯಾ'ದಿಂದ ಬಳಲುತ್ತಿದ್ದಾನೆ ಎನ್ನುವುದರಲ್ಲಿ ಅನುಮಾನವಿಲ್ಲ. ಸಾಮಾನ್ಯವಾಗಿ ಹದಿ ವಯಸ್ಸಿನಲ್ಲಿ ಪ್ರಾರಂಭವಾಗುವ ಈ ಚಿತ್ತವಿಕಲತೆ (ತೀವ್ರತರದ ಮನೋ ಬೇನೆ)ಯಲ್ಲಿ ವ್ಯಕ್ತಿಯ ವಾಸ್ತವಿಕ ಪ್ರಜ್ಞೆ ಹಾಳಾಗುತ್ತದೆ. ಪಂಚೇಂದ್ರಿಯ ಗಳಿಂದ ಪರಿಸರವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಕುಂದಿಹೋಗಿ, ವ್ಯಕ್ತಿ ಭ್ರಮಾಧೀನನಾಗುತ್ತಾನೆ. ಅವನಿಗೆ ಸುತ್ತಮುತ್ತ ಯಾರಿಲ್ಲದಿದ್ದರೂ, ಯಾರೋ ಮಾತಾಡಿದಂತೆ, ಧ್ವನಿಗಳು ಕೇಳಿಸತೊಡಗುತ್ತವೆ. ಇದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರವಣ ಚಿತ್ತಭ್ರಮೆ ಎನ್ನಲಾಗುತ್ತದೆ. ಈ ಧ್ವನಿಗಳು ರೋಗಿಗೆ ಆಜ್ಞೆ ಮಾಡುತ್ತವೆ. ಅವನ ಚಟುವಟಿಕೆಗಳನ್ನು ಕಾಮೆಂಟರಿ ರೀತಿಯಲ್ಲಿ ಅವನಿಗೇ ವರದಿ ಮಾಡುತ್ತವೆ. ಅವನನ್ನು ಟೀಕಿಸುತ್ತವೆ. ಹತೋಟಿಯಲ್ಲಿಟ್ಟು ಕೊಳ್ಳುತ್ತವೆ. ಈ ಧ್ವನಿಗಳ ಮೇಲೆ ಅವನಿಗೆ ಸ್ವಲ್ಪವೂ ಹತೋಟಿ ಇರುವು ದಿಲ್ಲ. ಹಗಲಿನಲ್ಲೇ ಗಂಟೆ ಗಟ್ಟಳೆ ಈ ಧ್ವನಿಗಳು ಕೇಳುವುದರಿಂದ ವ್ಯಕ್ತಿಗೆ ಬೇರಾವ ಕೆಲಸ ಮಾಡಲಾಗದೆ ನಿಷ್ಕ್ರಿಯನಾಗುತ್ತಾನೆ. ಮಿದುಳಿನ ನರಕೋಶ ಗಳಲ್ಲಿ ರಾಸಾಯನಿಕ ವಸ್ತುಗಳ ಏರು ಪೇರಿನಿಂದ, ಸ್ವಪ್ರಚೋದನೆಯಿಂದಾಗಿ, ಈ ಚಿತ್ತ ಭ್ರಮೆ ಉಂಟಾಗುತ್ತದೆ ಎಂದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಸ್ಕಿಜೋಫ್ರೀನಿಯಾದಲ್ಲಿ ಇದರ ಜೊತೆಗೆ, ತರ್ಕಬದ್ಧವಾಗಿ, ಅರ್ಥಪೂರ್ಣವಾಗಿ, ಸರಾಗವಾಗಿ ಆಲೋಚಿಸುವ ಶಕ್ತಿ ಹಾಳಾಗುತ್ತದೆ. ರೋಗಿ ತಪ್ಪು ತಪ್ಪಾಗಿ, ಅಸಂಬದ್ಧವಾಗಿ ಕೆಲವು ಸಲ ಅಪಾಯಕಾರಿಯಾಗಿ ಆಲೋಚಿಸುತ್ತಾನೆ. ಕೆಲವು ಸಲ ಬದಲಿಸಲಾಗದ ತಪ್ಪು ನಂಬಿಕೆಗಳನ್ನು ಬೆಳೆಸಿಕೊಳ್ಳುತ್ತಾನೆ. ಉದಾಹರಣೆ: "ಒಂದು ಗುಂಪಿನ ಜನ ಅಥವಾ ಎಲ್ಲರೂ ನನ್ನ ವಿರುದ್ಧವಾಗಿದ್ದಾರೆ. ಅವರು ನನ್ನನ್ನು ಕೊಲ್ಲಲು ಪ್ರಯತ್ನಿಸು ತ್ತಿದ್ದಾರೆ,' ಅಥವಾ 'ಯಾವುದೋ ಒಂದು ಒಂದು ಬಗೆಯ ಕಿರಣಗಳಿಂದ ಅಥವಾ ಯಂತ್ರದಿಂದ ನನ್ನ ಮಿದುಳು ಮತ್ತು ಅಂಗಾಂಗಗಳನ್ನು ನಿಷ್ಕ್ರಿಯ ಗೊಳಿಸಲಾಗಿದೆ, ಅಥವಾ "ನನ್ನ ದೇಹ ಮೊದಲಿನ ಹಾಗಿಲ್ಲ. ಬದಲಾಗಿ ಹೋಗಿದೆ. ನಾನು ಜೀವಂತವಾಗಿಲ್ಲ" ಇತ್ಯಾದಿ. ಸ್ಕಿಜೋಫ್ರೀನಿಯಾ ಕಾಯಿಲೆಯಲ್ಲಿ ಸಮಯ, ಸಂದರ್ಭಕ್ಕೆ ತಕ್ಕಂತಹ ಭಾವನೆಗಳನ್ನು ಪ್ರಕಟಿಸುವ ಸಾಮರ್ಥ್ಯ ಕೂಡ ಕುಂಠಿತವಾಗುತ್ತದೆ. ರೋಗಿ ಕಾರಣವಿಲ್ಲದೆ, ಅಸಂಬದ್ಧ ವಾಗಿ ನಗುವುದು, ಅಳುವುದು, ಕೋಪಿಸಿಕೊಳ್ಳುವುದು ಮಾಡಬಹುದು. ಅಥವಾ ಭಾವನೆಯನ್ನೇ ತೋರದ ಮೇಣದ ಬೊಂಬೆಯಂತೆ ತೋರಬಹುದು. ಇಷ್ಟಲ್ಲದೆ ರೋಗಿ ತನ್ನ ಶರೀರದ ಅವಶ್ಯಕತೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸ ತೊಡಗುತ್ತಾನೆ. ನಿದ್ರೆ, ಆಹಾರ ಸೇವನೆ, ಮಲ ಮೂತ್ರ ವಿಸರ್ಜನೆ ಕ್ರಮ ತಪ್ಪಿ ಏರು ಪೇರಾಗುತ್ತವೆ. ದೇಹದ ಸ್ವಚ್ಛತೆ ಬಗ್ಗೆ ಆತ ಗಮನ ಕೊಡುವು ದಿಲ್ಲ. ಮೊದಲು ದಿನವೂ ಸ್ನಾನ ಮಾಡಿ, ಶುಭ್ರ ಬಟ್ಟೆ ತೊಡುತ್ತಿದ್ದ ಹುಡುಗ, ತಲೆ ಬಾಚಿಕೊಂಡು ಅಲಂಕಾರ ಮಾಡಿಕೊಂಡು ನೀಟಾಗಿರುತ್ತಿದ್ದ ಹುಡುಗಿ ಈಗ ದಿನಗಳು ಕಳೆದರೂ ಸ್ನಾನ ಮಾಡದಿರಬಹುದು. ಕೊಳೆ ಬಟ್ಟೆಯನ್ನೇ ತೊಡಬಹುದು. ತಲೆಯನ್ನು ಕೆದರಿಕೊಂಡು ಅಸ್ತವ್ಯಸ್ತವಾಗಿರ ಬಹುದು. ಕೆಲವು ಸಲ ರೋಗಿ ವಿಪರೀತ ಚಟುವಟಿಕೆ ತೋರಿಸುತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri
ಗಲಾಟೆ ಮಾಡತೊಡಗಬಹುದು. ನಾಯಿಯಂತೆ ನಿಂತಲ್ಲಿ ನಿಲ್ಲದೆ, ಗುರಿ ಇಲ್ಲದೆ ಅಲೆದಾಡಬಹುದು. ತನ್ನ ಮತ್ತು ಮನೆತನದ ಸ್ಥಾನಮಾನಗಳನ್ನು ಗಾಳಿಗೆ ತೂರಿ 'ಅಯ್ಯಾ ಬೀಡಿ, ಅಮ್ಮಾ ತಿಂಡಿ, ಅಣ್ಣಾ ಪೈಸ' ಎಂದು ಭಿಕ್ಷೆ ಬೇಡಬಹುದು. ಅರೆ ಬೆತ್ತಲೆ ಓಡಾಡಬಹುದು. ರಸ್ತೆಯಲ್ಲಿ ಬಿದ್ದ ಕಸ ಕಡ್ಡಿ ಕಾಗದಗಳನ್ನು ಹೆಕ್ಕಿ ಗಂಟು ಕಟ್ಟಿ ಹೊತ್ತು ತಿರುಗಬಹುದು. ಅವರಿವ ರನ್ನು ಬೈಯುತ್ತಾ, ಹಿಂಸಾಚಾರಕ್ಕೂ ಇಳಿಯಬಹುದು. ಚಿಕಿತ್ಸೆ ಸಿಗದಿದ್ದರೆ ಈ ಕಾಯಿಲೆ ತಿಂಗಳುಗಳು, ವರ್ಷಗಳು ರೋಗಿಯನ್ನು ಬಿಡದೆ ಕಾಡುತ್ತದೆ.

ಈ ಕಾಯಿಲೆಯೂ ಮಿದುಳಿಗೆ ಸಂಬಂಧಪಟ್ಟದ್ದು. ಮಿದುಳಿನ ರಚನೆ ಯಲ್ಲಿ, ವಸ್ತುವಿನಲ್ಲಿ ಬದಲಾವಣೆ ಇರುವುದಿಲ್ಲವಾಗಿ, ಮಿದುಳು ಮೇಲ್ನೋ ಟಕ್ಕೆ ಚೆನ್ನಾಗೇ ಇರುತ್ತದೆ. ಎಕ್ಸ್‌ರೇ ಚಿತ್ರ, ವಿದ್ಯುತ್ ಬರವಣಿಗೆ (ಇಇಜಿ), ಬಿಡಿ ಚಿತ್ರ (ಸ್ಕ್ಯಾನಿಂಗ್) ಇವೆಲ್ಲ ನಾರ್ಮಲ್ ಆಗೇ ಇರುತ್ತವೆ. ಏರು ಪೇರು ಕಂಡು ಬರುವುದು ನರಕೋಶಗಳ ರಾಸಾಯನಿಕ ಚಟುವಟಿಕೆಯಲ್ಲಿ. 'ಡೋಪಮಿನ್' ಎಂಬ ನರವಾಹಕ ವ್ಯವಸ್ಥೆ ಅತಿಸೂಕ್ಷ್ಮವಾಗಿ ವಿಪರೀತ ಚಟುವಟಿಕೆ ತೋರಿಸುವುದೇ ಸ್ಕಿಜೋಫ್ರೇನಿಯಾ ರೋಗ ಲಕ್ಷಣಗಳಿಗೆ ಕಾರಣ ಎಂದು ತಿಳಿದು ಬರುತ್ತದೆ. ಇದೇನು ವಂಶಪಾರಂಪರ್ಯವಾಗಿ ಬರುವ ಕಾಯಿಲೆ ಅಲ್ಲ. ರೋಗಿಯ ಮಕ್ಕಳು ಇತರರಂತೆ ಆರೋಗ್ಯವಂತರಾಗೇ ಇರಬಹುದು. ಆದ್ದರಿಂದ ಇದರ ಬಗ್ಗೆ ಭಯ ಸಲ್ಲ, ಅಲ್ಲದೆ ಈಗ ಈ ಕಾಯಿಲೆಗೆ ಪರಿಣಾಮಕಾರಿ ಚಿಕಿತ್ಸೆ ಇದೆ. ಚಿತ್ತವಿಕಲತೆ ನಿರೋಧಕ ಔಷಧ ಗಳನ್ನು ಸೂಕ್ತ ಪ್ರಮಾಣದಲ್ಲಿ ಕೊಟ್ಟರೆ, ಕಾಯಿಲೆ ಹತೋಟಿಗೆ ಬರುತ್ತದೆ. ರೋಗದ ಪ್ರಾರಂಭದಲ್ಲೇ ಕ್ರಮವಾಗಿ ಚಿಕಿತ್ಸೆ ನಡೆಸಿದರೆ, ಕಾಯಿಲೆ ಪೂರ್ಣವಾಗಿ ಗುಣವಾಗುತ್ತದೆ. ವ್ಯಕ್ತಿ ಕೆಲಸ ಕಾರ್ಯ ಮಾಡುತ್ತಾ ಎಲ್ಲರಂತೆ ಉಪಯುಕ್ತವಾಗಿ ಬದುಕಬಹುದು. ಈ ವಿಚಾರವನ್ನೆಲ್ಲಾ ಶಿವರಾಜನ ತಂದೆ ಮತ್ತು ಚಿಕ್ಕಪ್ಪನಿಗೆ ತಿಳಿಯ ಹೇಳಿದೆ.

"ಹಾಗಾದರೆ ಶಿವರಾಜೂನ ಆಸ್ಪತ್ರೆಗೆ ಸೇರಿಸಬೇಕಾ? ಎಷ್ಟು ದಿವಸ ಔಷಧಿ ಕೊಡಬೇಕು" ಕುಮಾರ ಸ್ವಾಮಿ ಪ್ರಶ್ನಿಸಿದ.

"ಶಿವರಾಜುವನ್ನು ಆಸ್ಪತ್ರೆಗೆ ಸೇರಿಸೋ ಅವಶ್ಯಕತೆ ಇಲ್ಲ. ನಾವು ಬರೆದು ಕೊಡುವ ಕ್ಲೋರ್ ಪ್ರೋಮಜಿನ್‌ನಂತಹ ಚಿತ್ತವಿಕಲತೆ ನಿರೋಧಕ ಮಾತ್ರೆಗಳನ್ನು, ಕ್ರಮವಾಗಿ ಆತನಿಗೆ ತಿನ್ನಿಸಿ. ಈ ಔಷಧ ನರಕೋಶಗಳಲ್ಲಿ ವ್ಯತ್ಯಾಸವಾಗಿರುವ ಡೋಪಮಿನ್ ನರವಾಹಕ ವ್ಯವಸ್ಥೆಯನ್ನು ಸರಿಪಡಿಸಿ, ಕಾಯಿಲೆಯ ಲಕ್ಷಣಗಳನ್ನು ಕಡಿಮೆ ಮಾಡುತ್ತದೆ. ದಿನ ಕ್ರಮೇಣ ಶಿವರಾಜಿಂ
Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತಮಗೊಳ್ಳುತ್ತಾನೆ. ಪ್ರಾರಂಭದಿಂದಲೇ ಮನೆಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಲು ಹೇಳಿ ಪ್ರೋತ್ಸಾಹಿಸಿ."

"ಯಾವ ರೀತಿಯ ಕೆಲಸ ಹೇಳಬೇಕು ? ಹೇಳಿದರೆ ಮಾಡುತ್ತಾನೆಯೇ ಅವನು ?"

"ಯಾವುದೇ ಮನೆ ಕೆಲಸವಾದರೂ ಆದೀತು. ನೀರು ತುಂಬುವುದು, ಸಾಮಾನುಗಳನ್ನು ಜೋಡಿಸುವುದು, ನಿಮ್ಮ ಮನೆಯಲ್ಲಿ ದನಕರುಗಳಿವೆ. ಅವುಗಳಿಗೆ ಮೇವು, ನೀರು ಕೊಡುವುದು, ಅವುಗಳ ಮೈ ತೊಳೆಯುವುದು, ತೋಟದ ಗಿಡಗಳಿಗೆ ನೀರುಣಿಸುವುದು ಹೀಗೆ ಯಾವುದೇ ಸರಳ ಕೆಲಸ.' ಜೊತೆಗೆ, ನೀವೂ ಅವನೊಟ್ಟಿಗೆ ಈ ಕೆಲಸ ಮಾಡಿ, ಪ್ರೋತ್ಸಾಹಿಸಿ. ಆತ ಸ್ವಲ್ಪ ಹೊತ್ತು ಚೆನ್ನಾಗಿ ಮಾಡಿದಾಗ ಭೇಷ್ ಎನ್ನಿ. ತಪ್ಪಾದಾಗ ರೇಗದೆ, ಹೀಯಾಳಿಸದೆ, ಪ್ರೀತಿಯಿಂದ ತಿದ್ದಿ. ಸ್ಕಿಜೋಫ್ರೇನಿಯಾ ರೋಗಿಗೆ ಔಷಧ ಕೊಡುವುದು ಎಷ್ಟು ಮುಖ್ಯವೋ, ಪ್ರೀತಿ ಆಸರೆ ಕೊಟ್ಟು, ಈ ರೀತಿಯ ಚಟುವಟಿಕೆಗಳಲ್ಲಿ ತೊಡಗುವಂತೆ ಉತ್ತೇಜನ ಕೊಟ್ಟು, ಉಪಯುಕ್ತ ಕೆಲಸ ಮಾಡುವಂತೆ ಮಾಡುವುದೂ ಅಷ್ಟೇ ಮುಖ್ಯ."

"ಅದೇನೋ ಕರೆಂಟ್ ಕೊಡ್ತಾರಂತಲ್ಲ. ಅದನ್ನು ಶಿವರಾಜನಿಗೆ ಕೊಡಬೇಕೇ. ಅದನ್ನು ಕೊಟ್ಟರೆ, ಹುಚ್ಚು ಬೇಗ ವಾಸಿಯಾಗುತ್ತದಂತಲ್ಲ" ಕುಮಾರಸ್ವಾಮಿ ಪ್ರಶ್ನಿಸಿದ.

"ನೀವು ವಿದ್ಯುತ್ ಕಂಪನ ಚಿಕಿತ್ಸೆಯ ಬಗ್ಗೆ ಕೇಳುತ್ತಿದ್ದೀರಿ. ಸಣ್ಣ ಪ್ರಮಾಣದ ವಿದ್ಯುತ್ತನ್ನು ಮಿದುಳಿನೊಳಕ್ಕೆ ಹಾಯಿಸಿ, ಕೃತಕವಾಗಿ ಫಿಟ್ಸ್ ಬರಿಸಿ, ನರವಾಹಕ ವ್ಯವಸ್ಥೆಯನ್ನು ಸರಿಪಡಿಸುವುದೇ ವಿದ್ಯುತ್ ಕಂಪನ ಚಿಕಿತ್ಸೆ. ಔಷಧಗಳು ಬರುವ ಮೊದಲು, ಸ್ಕಿಜೋಫ್ರೇನಿಯಾ ರೋಗಿಗಳ ಚಿಕಿತ್ಸೆಗೆ ಇದನ್ನು ಬಳಸಲಾಗುತ್ತಿತ್ತು. ಆದರೆ ಈಗ ಔಷಧೋಪಚಾರ ಮಾಡುವುದು ಈ ಕಾಯಿಲೆಗೆ ಪರಿಣಾಮಕಾರಿ ಚಿಕಿತ್ಸೆ. ಔಷಧಗಳು ನಿರೀಕ್ಷಿತ ಪರಿಣಾಮ ಬೀರದಿದ್ದಾಗ ವಿದ್ಯುತ್ ಕಂಪನ ಚಿಕಿತ್ಸೆಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಶಿವರಾಜನಿಗೆ ಈ ಹಂತದಲ್ಲಿ ಈ ಚಿಕಿತ್ಸೆ ಬೇಡ."

"ಆದರೂ ಡಾಕ್ಟರೆ, ಶಿವರಾಜನನ್ನು ಒಂದೆರಡು ತಿಂಗಳು ಆಸ್ಪತ್ರೆಗೆ ಸೇರಿಸಿದರೆ ಹೇಗೆ. ಇಲ್ಲಿ ನೀವುಗಳು, ನರ್ಸ್‌ಗಳು ಇರುತ್ತೀರಿ. ಸಮಯಕ್ಕೆ ಸರಿಯಾಗಿ ಔಷಧಿ ಕೊಟ್ಟು ನೋಡಿಕೊಳ್ಳುತ್ತೀರಿ. ಮನೆಯಲ್ಲಿ ಆತ ನಮ್ಮ ಮಾತನ್ನು ಕೇಳದಿರಬಹುದು..." ಶಿವರಾಜನ ತಂದೆ ನುಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಬೇಡ ಯಜಮಾನರೇ. ಶಿವರಾಜನಂತಹ ರೋಗಿಗಳನ್ನು ಆಸ್ಪತ್ರೆಯ ಕೃತಕ ವಾತಾವರಣದಲ್ಲಿ, ಅಪರಿಚಿತರ ನಡುವೆ ಇಡುವುದರಿಂದ ಅನುಕೂಲ ಕ್ಕಿಂತ ಅನಾನುಕೂಲವೇ ಹೆಚ್ಚು. ಆಸ್ಪತ್ರೆಯ ಅಸಹಜ ಪರಿಸರದಲ್ಲಿ ಅವರು ಮತ್ತಷ್ಟು ಮಂಕಾಗಿಬಿಡುವ ಅಪಾಯವಿರುತ್ತದೆ. ಮನೆಯಲ್ಲೇ, ಮನೆಯವರ ನಡುವೆ, ಪರಿಚಿತ ಪರಿಸರದಲ್ಲೇ ಅವರನ್ನು ಬಿಡುವುದರಿಂದ, ಅವರು ಬೇಗ ಉತ್ತಮರಾಗುತ್ತಾರೆ ಎಂಬುದು ನಮ್ಮ ಅನುಭವ. ಅನೇಕ ವೈಜ್ಞಾನಿಕ ಅಧ್ಯಯನಗಳು ಇದನ್ನು ಪುಷ್ಟೀಕರಿಸಿವೆ. ಮನೆಯವರಷ್ಟು ಪ್ರೀತಿ, ಮಮತೆಯನ್ನು ತೋರಲು, ಇತರರಿಗೆ ಅವರು ವೈದ್ಯವೃತ್ತಿಯವ ರಾದರೂ ಕಷ್ಟವಾಗುತ್ತದೆ. ಆದ್ದರಿಂದ ಶಿವರಾಜುವನ್ನು ನಿಮ್ಮ ಜೊತೆ ಯಲ್ಲೇ ಇಟ್ಟುಕೊಂಡು, ಔಷಧೋಪಚಾರ ಮಾಡಿ. ತಿಂಗಳಿಗೊಮ್ಮೆ ಬಂದು ಹೇಗಿದ್ದಾನೆ ಎಂದು ಹೇಳಿ" ಎಂದು ಒಪ್ಪಿಸಿದೆ.

ಎರಡು ಮೂರು ತಿಂಗಳಲ್ಲಿ ಔಷಧ ಪ್ರಮಾಣವನ್ನು ಸ್ವಲ್ಪ ಹೆಚ್ಚು ಮಾಡಿ ಹೊಂದಿಸಬೇಕಾಯಿತು, ಒಂದೆರಡು ಅಡ್ಡ ಪರಿಣಾಮಗಳನ್ನು ಆತ ಅನುಭವಿಸಿದ. ಉದಾಹರಣೆಗೆ ಬಾಯಿ ಒಣಗುವುದು, ಸ್ವಲ್ಪ ಮೈ ಬಿಗಿತ ಇತ್ಯಾದಿ. ಅನಂತರ ಅವೆಲ್ಲ ನಿಂತವು. ಎರಡು ತಿಂಗಳ ನಂತರ ಬಂದ ಕುಮಾರಸ್ವಾಮಿ 'ಈಗ ಶಿವರಾಜ ಸ್ವಲ್ಪ ಉತ್ತಮ ಡಾಕ್ಟರೇ. ತನಗೆ ತಾನೇ ಮಾತಾಡಿಕೊಳ್ಳುವುದು, ನಗುವುದು ನಿಂತು ಹೋಗಿದೆ. ನಾವು ಮಾತಾಡಿಸಿದರೆ ತುಸು ಆಸಕ್ತಿಯಿಂದ ಉತ್ತರ ಕೊಡುತ್ತಾನೆ. ಮನೆಯ ಎರಡು ಹಸುಗಳಿಗೆ, ಕಳೆದ ವಾರದಿಂದ ಅವನೇ ಹುಲ್ಲು ನೀರು ಕೊಡುತ್ತಾನೆ. ಪ್ರತಿ ಶನಿವಾರ ಭಾನುವಾರ ಭಜನೆ ಮಂದಿರಕ್ಕೆ ಹೋಗುತ್ತಾನೆ. ಆದರೆ ಇದೆಲ್ಲವನ್ನು ನಾವು ಜ್ಞಾಪಿಸಿದರೆ ಮಾಡುತ್ತಾನೆ. ತಾನಾಗಿಯೇ ಮಾಡುತ್ತಿಲ್ಲ' ಎಂದ.

"ಈಗಾಗಿರುವ ಬದಲಾವಣೆ ತೃಪ್ತಿಕರವಾಗಿದೆ. ನೀವು ಆತನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೀರಿ. ಚಿಕಿತ್ಸೆಗಾಗಿ ತುಂಬಾ ಸಹಕಾರ ತೋರಿಸು ತ್ತಿದ್ದೀರಿ. ಹೀಗೇ ನೀವು ಚಿಕಿತ್ಸೆಯನ್ನು ಮುಂದುವರಿಸಿದರೆ ಶಿವರಾಜನ ಗುಣಮುಖನಾಗುವುದರಲ್ಲಿ ಸಂದೇಹವಿಲ್ಲ" ಎಂದು ಅವರನ್ನು ಪ್ರೋತ್ಸಾಹಿ ಸಿದೆ.

ಹೀಗೆ ಹದಿವಯಸ್ಸಿನಲ್ಲಿ ಬರುವ ಸ್ಕಿಜೋಫ್ರೀನಿಯಾ ಕಾಯಿಲೆಯನ್ನು ಬೇಗ ಗುರುತಿಸಬೇಕು ; ಬೇಗ ಸೂಕ್ತ ಚಿಕಿತ್ಸೆಯನ್ನು ವೈದ್ಯರ ಮಾರ್ಗದರ್ಶನ ದಲ್ಲಿ ವ್ಯವಸ್ಥೆ ಮಾಡುವುದರಿಂದ ಈ ವ್ಯಕ್ತಿಗಳು ಎಲ್ಲರಂತೆ ಬಾಳಲು ಅವಕಾಶ ಏದೆ. ಅದು ಬಿಟ್ಟು ರೋಗಿಯ ಬದಲಾದ ವಿಚಿತ್ರ ನಡೆವಳಿಕೆ, ಮಾತನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ದೈವ, ಭೂತಗಳ ಚೇಷ್ಟೆ ಎಂದೋ, ಮದ್ದು ಮಾಟದ ಪ್ರಭಾವ ಎಂತಲೋ ನಂಬಿ, ಭೂತೋಚ್ಚಾಟನೆ, ಮಂತ್ರ ತಂತ್ರ ಎಂದು ಅಲ್ಲಿ ಇಲ್ಲಿ ಹೋಗುವುದರಿಂದ ಯಾವ ಲಾಭವೂ ಇಲ್ಲ. ಇದು ನಮ್ಮ ಪೂರ್ವಾರ್ಜಿತ ಕರ್ಮ, ಗ್ರಹಗತಿಗಳ ಕಾಟ, ದುರಾದೃಷ್ಟ ಎಂದು ಅಸಹಾಯಕರಾಗಿ ಕೈಚೆಲ್ಲಿ ಕೂರುವುದು ಸಲ್ಲದು.

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ರೂಪಿನ ಬಗ್ಗೆ ಚಿಂತಿಸಿ ಕೊರಗುವ ಯುವಕ

"ಮಾನ್ಯ ಡಾಕ್ಟರಿಗೆ ನನ್ನ ನಮಸ್ಕಾರಗಳು.

ನಿಮ್ಮ ಹಲವಾರು ಲೇಖನಗಳನ್ನು, ಬೇರೆ ಬೇರೆ ಪತ್ರಿಕೆಗಳಲ್ಲಿ ಓದಿದ್ದೇನೆ. ಅದರಿಂದ ಸಾಕಷ್ಟು ಅನುಕೂಲಗಳನ್ನು ಹೊಂದಿದ್ದೇನೆ. ಅದಕ್ಕಾಗಿ ನಾನು ನಿಮಗೆ ಆಭಾರಿಯಾಗಿದ್ದೇನೆ.

ನಾನು ಹತ್ತೊಂಭತ್ತು ವರ್ಷದ ತರುಣ. ನಾನು ಕೃಷಿ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದೇನೆ. ನನ್ನ ಮುಖ್ಯ ತೊಂದರೆ ಏನೆಂದರೆ ನಾನು ಸಣ್ಣಗಿದ್ದೇನೆ. ಮೂಳೆಗಳೆಲ್ಲಾ ಎದ್ದು ಕಾಣುತ್ತವೆ. ನನಗೆ ಯಾವ ದೈಹಿಕ ಕಾಯಿಲೆ ಇಲ್ಲ. ವೈದ್ಯರಿಂದ ತಪಾಸಣೆ ಮಾಡಿಸಿದ್ದೇನೆ. ರಕ್ತ, ಮಲ, ಮೂತ್ರ, ಎದೆಯ ಎಕ್ಸ್‌ರೇ ಚಿತ್ರ ಎಲ್ಲವೂ ನಾರ್ಮಲ್ ಇವೆ. ನನ್ನ ಎದೆ ಬಡಿತ ಯಾವತ್ತೂ ತೊಂಭತ್ತರ ಮೇಲಿರುತ್ತದೆ. ಅಲ್ಲದೆ ಹೃದಯ ಜೋರಾಗಿ ಬಡಿಯುತ್ತದೆ. ನನಗೆ ನಿದ್ರೆಯೂ ಹತ್ತುವುದಿಲ್ಲ.

ನಾನು ಯಾವತ್ತೂ ತುಂಬಾ ಯೋಚನೆ ಮಾಡುತ್ತಿರುತ್ತೇನೆ. ಹಗಲು ಕನಸು ಕಾಣುತ್ತಿರುತ್ತೇನೆ. ನಾನು ಚಿಂತೆ ಮಾಡುವುದು, ನನ್ನ ರೂಪದ ಬಗ್ಗೆ. ನಾನು ನೋಡಲು ಅಷ್ಟೇನೂ ಚೆನ್ನಾಗಿಲ್ಲ ಅಂತ ನನ್ನ ಅನಿಸಿಕೆ. ಆದರೆ ನಾನೇನು ಕುರೂಪಿಯಲ್ಲ. ಸ್ವಲ್ಪ ಮೈ ಕೈ ತುಂಬಿಕೊಂಡರೆ ಚಂದ ಕಾಣುತ್ತೇನೆ ಎನ್ನುವ ಆಸೆ. ನನ್ನ ಸ್ನೇಹಿತರೆಲ್ಲಾ ನನ್ನನ್ನು 'ಸ್ಕೆಲಿಟನ್' ಎಂದು ರೇಗಿಸುತ್ತಾರೆ. ಆಗ ನನಗೆ ತುಂಬಾ ಬೇಜಾರಾಗಿ ಬಿಡುತ್ತದೆ. ಮನೆಗೆ ಹೋದಾಗ, ಊರಿನಲ್ಲಿ 'ಏಕೆ ಇಷ್ಟೊಂದು ಇಳಿದುಹೋಗಿದ್ದೀಯಾ, ಮೈಯಲ್ಲಿ ಉಶಾರಿಲ್ಲವೇ 'ಎಂದು ಕೇಳಿದಾಗ ನನಗೆ ಏನು ಉತ್ತರ ಕೊಡಬೇಕೆಂದು ತಿಳಿಯುವುದಿಲ್ಲ. ನಾನು ಚೆನ್ನಾಗಿ ಉಡುಪು ತೊಡುತ್ತೇನೆ. ತರಹೆವಾರಿ ಬಟ್ಟೆಗಳು, ಶೂಸ್ ಉಪಯೋಗಿಸುತ್ತೇನೆ. ಹಣಕ್ಕೆ ಕೊರತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲ. ನನ್ನ ತಂದೆ ತಾಯಿಗೆ ನನ್ನನ್ನು ಕಂಡರೆ ಬಹಳ ಅಕ್ಕರೆ. ಧಾರಾಳವಾಗಿ ದುಡ್ಡು ಕೊಡುತ್ತಾರೆ.

ನನ್ನ ಮತ್ತೊಂದು ಸಮಸ್ಯೆ ಎಂದರೆ ನನಗೆ ನನ್ನಲ್ಲಿ ವಿಶ್ವಾಸವೇ ಇಲ್ಲ. ಬೇರೆಯವರೊಂದಿಗೆ ಕಣ್ಣಲ್ಲಿ ಕಣ್ಣಿಟ್ಟು ಮಾತಾಡುವುದು ಕಷ್ಟವಾಗುತ್ತದೆ. ಯಾರಾದರೂ ನನ್ನನ್ನು ಗಮನಿಸುತ್ತಿದ್ದಾರೆ ಎಂದು ಗೊತ್ತಾದ ಕೂಡಲೇ ನನಗೆ ಹೇಗೇಗೋ ಆಗಿಬಿಡುತ್ತದೆ. ದೃಢವಾಗಿ ಮಾತಾಡಲು, ನಡೆದು ಕೊಳ್ಳಲು ಆಗುವುದೇ ಇಲ್ಲ. ಅಷ್ಟು ಸಂಕೋಚದ ಪ್ರವೃತ್ತಿ. ಹೀಗಾಗ ಬಾರದು ಎಂದುಕೊಳ್ಳುತ್ತೇನೆ. ಆದರೆ ನನಗರಿವಿಲ್ಲದಂತೆಯೇ, ಮಾತು ತೊದಲುತ್ತದೆ, ಮೈ ಬೆವರುತ್ತದೆ.

ನನಗೆ ಇಬ್ಬರು ಒಳ್ಳೆಯ ಸ್ನೇಹಿತರಿದ್ದಾರೆ. ಇನ್ನೂ ಕೆಲವರು ಸ್ನೇಹಿತ ರಿದ್ದಾರೆ. ಯಾರಾದರೂ ಒಬ್ಬರು ನನ್ನ ಬಗ್ಗೆ ಕೇಳದಿದ್ದರೆ, ನಾನು ಅಲ್ಲಿದ್ದೂ ಗಮನಿಸದಿದ್ದರೆ, ಅವರ ಉದಾಸೀನತೆಯಿಂದ ನಾನು ನೊಂದು ಹೋಗು ತ್ತೇನೆ. ಕೆಲವು ಸಲ ಇದರಿಂದಾಗಿ ಅತ್ತು ಕಣ್ಣೀರು ಸುರಿಸಿದ್ದೇನೆ. ನನ್ನ ತಮ್ಮ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾನೆ. ನನ್ನ ತಂದೆ, ಅವನಿಗೆ ನನಗಿಂತ ಮೊದಲು ವಾಚ್ ತೆಗೆದು ಕೊಟ್ಟರು. ಆಗ ನಾನೆಷ್ಟು ದುಃಖ ಪಟ್ಟೆ ಗೊತ್ತೇ. ನನ್ನ ತಂದೆ ನನಗೂ ವಾಚ್ ತೆಗೆದು ಕೊಡುತ್ತಾರೆ. ಅದರಲ್ಲಿ ಅನುಮಾನವಿಲ್ಲ. ಆದರೂ ಅವನಿಗೇ ಮೊದಲ ಪ್ರಾಶಸ್ತ್ಯ, ನನಗೆ ಆ ಗೌರವ ಸಿಗಲಿಲ್ಲವಲ್ಲ ಎಂದು ಖೇದವಾಗುತ್ತದೆ. ಕೆಲವು ಸಲ ನನ್ನಮನೆಯವರು ನನ್ನನ್ನು ಹೆಚ್ಚು ಪ್ರೀತಿಸುವುದಿಲ್ಲ ಎಂಬ ಅನುಮಾನ ಬರುತ್ತದೆ. ಆದರೆ ವಸ್ತುನಿಷ್ಟವಾಗಿ ಯೋಚಿಸಿದರೆ, ತುಲನೆ ಮಾಡಿದರೆ ಅವರು ಒಬ್ಬರಿಗೊಂದು ಇನ್ನೊಬ್ಬರಿಗೆ ಮತ್ತೊಂದು ಎಂಬ ವ್ಯತ್ಯಾಸ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಕಾಣುತ್ತದೆ.

ಒಂದು ಸಲ ನನ್ನ ಸೋದರ ಮಾವನವರು ತಮ್ಮ ಹೊಸ ಮನೆಯ ಗೃಹ ಪ್ರವೇಶ ಸಮಾರಂಭವನ್ನು ಏರ್ಪಡಿಸಿದ್ದರು. ನನಗೆ ಆಹ್ವಾನ ಪತ್ರಿಕೆ ಕೊಡಲಿಲ್ಲ. ಸ್ವಲ್ಪ ದಿವಸಗಳ ನಂತರ ಅವರು ಸಿಕ್ಕಿ 'ನಿನಗೆ ಪ್ರತ್ಯೇಕವಾಗಿ ಆಹ್ವಾನ ಪತ್ರಿಕೆ ಕೊಡಬೇಕೇನೋ. ಯಾಕೋ ಆ ದಿನ ಬರಲಿಲ್ಲ' ಎಂದು ಜೋರು ಮಾಡಿದಾಗ ನನಗೆ ಕಣ್ಣಲ್ಲಿ ನೀರು ಬಂತು.

ನಾನು ಒಂದು ಸೆಮಿಸ್ಟರ್ ಹಿಂದಿದ್ದೇನೆ. ಇದು ಮನೆಯವರಿಗೆ ಗೊತ್ತಿಲ್ಲ. ಅಂದರೆ ನಾನು ಕಲಿಯುವುದರಲ್ಲಿ ಹಿಂದಿದ್ದೇನೆ, ದಡ್ಡ ಎಂದು ಕೊಳ್ಳಬೇಡಿ. 'ಬಾಡಿ ಬಿಲ್ಡಿಂಗ್' ಗಾಗಿ ವ್ಯಾಯಾಮ ಶಾಲೆಗೆ ಹೋಗಿ, ಅಲ್ಲಿ ಸಾಕಷ್ಟು ಸಮಯ ಕಳೆದದ್ದರಿಂದ, ಸುಸ್ತು ಆಯಾಸವಾಗಿ ಓದಲಾಗದೆ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದೆ ಬಿದ್ದೆ. ಈಗ ವ್ಯಾಯಾಮ ಶಾಲೆಗೆ ಹೋಗಲೂ ಬೇಜಾರು. ಸಂಜೆ ಕಾಫಿಕುಡಿದ ನಂತರ ವಾಕಿಂಗ್ ಹೋಗುತ್ತೇನೆ. ಇಷ್ಟು ಸಾಕಾಗುವುದಿಲ್ಲ ಎನಿಸಿದರೂ, ಹೆಚ್ಚು ವ್ಯಾಯಾಮ ಮಾಡಲಾಗುತ್ತಿಲ್ಲ.

ನನ್ನ ಮೈ ಮೃದುವಾಗಿದೆ. 'ಏನೋ ಒಳ್ಳೇ ಹೆಣ್ಣಿನ ಮೈ ರೀತಿ ಇದೆ' ಎಂದು ಸ್ನೇಹಿತರು ಹೇಳಿದಾಗ ನಾಚಿಕೆ ಆಗುತ್ತದೆ. ಗಂಡಸಿನ ತರ ಕಾಣಲು ಅವರ ಮುಂದೆ ಸ್ಟೈಲ್‌ನಿಂದ ಸಿಗರೇಟ್ ಸೇದುತ್ತೇನೆ. ಒಂದೆರಡು ಸಲ ಬ್ಲೂ ಫಿಲ್ಮ್ ನೋಡಿದ್ದೇನೆ. ಹುಡುಗಿಯರ ಬಗ್ಗೆ, ಲೈಂಗಿಕ ವಿಚಾರ ಗಳ ಬಗ್ಗೆ ಧೈರ್ಯವಾಗಿ ಅವರೊಂದಿಗೆ ಮಾತಾಡುತ್ತೇನೆ. ಪರವಾಗಿಲ್ಲ, ನೋಡೋದಕ್ಕೆ ನರಪೇತಲನಾದರೂ ಗಂಡಸ್ತನ ಇದೆ ಎಂದು ಅವರು ಹೇಳಿ ದಾಗ ನನಗೆ ಸಮಾಧಾನವಾಗುತ್ತದೆ. ಎರಡು ಮೂರು ತಿಂಗಳಿಗೊಮ್ಮೆ ಅವರೊಂದಿಗೆ ಬೀರ್ ಕುಡಿದಿದ್ದೇನೆ. ಒಂದೊಂದು ಸಲ ಇದೆಲ್ಲ ತಪ್ಪು ಎನಿಸು ತ್ತದೆ. ಏನೋ ಗೊಂದಲ ಡಾಕ್ಟರೇ, ಈ ರೀತಿ ಸಣ್ಣ ಪುಟ್ಟ ತಪ್ಪುಗಳನ್ನು ಮಾಡೋದು ಮನುಷ್ಯ ಸಹಜವಾದದ್ದು ಅಲ್ಲವೇ ?

ನನಗೆ ಆಕರ್ಷಕವಾಗಿ, ನಿರರ್ಗಳವಾಗಿ ಮಾತಾಡಬೇಕೆಂದು ಆಸೆ. ಆದರೆ ಸಂಭಾಷಣೆ ಮಾಡುವಾಗ ಕೆಲವು ಶಬ್ದಗಳು ಮರೆತು ಹೋಗುತ್ತವೆ. ಆಗ ಭೂಮಿ ಬಾಯಿ ಬಿಟ್ಟು ನನ್ನನ್ನು ನುಂಗಿ ಬಿಡಬಾರದೇ ಎನಿಸುತ್ತದೆ. ನನಗೆ ಗುಂಪಿನಲ್ಲಿ ಜನರೊಂದಿಗೆ ಬೆರೆಯಲು ಬರುವುದೇ ಇಲ್ಲ. ಸಮಾರಂಭಗಳಲ್ಲಿ ಒಂಟಿಯಾಗಿ ಬಿಡುತ್ತೇನೆ. ಏಕೆ ?

ನನಗೆ ಆಗಾಗ್ಗೆ ನಿದ್ರೆ ಸರಿಯಾಗಿ ಬರುವುದಿಲ್ಲ. ಅದೂ ಇದೂ ಯೋಚನೆ ಮಾಡುತ್ತಾ, ನನ್ನ ಕೊರತೆಗಳ ಬಗ್ಗೆ ಚಿಂತಿಸಲು ಶುರುಮಾಡಿದರೆ, ನಿದ್ರೆ ಹತ್ತಿರ ಸುಳಿಯುವುದಿಲ್ಲ, ನನ್ನ ರೂಮ್ ಮೇಟ್ ಆನಂದವಾಗಿ ಗೊರಕೆ ಹೊಡೆಯುವುದನ್ನು ನೋಡಿ ಮತ್ಸರವಾಗುತ್ತದೆ.

ಕೆಲವು ಸಲ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಯಾರೊಡನೆಯೂ ಮಾತನಾಡುವುದು ಬೇಡ ಅನಿಸುತ್ತದೆ. ಮತ್ತೊಬ್ಬರನ್ನು ನೋಯಿಸೋಣ ಎನಿಸುತ್ತದೆ. ಯಾವುದರಲ್ಲೂ ಆಸಕ್ತಿ ಇಲ್ಲದವನ ಹಾಗೇ ವರ್ತಿಸುತ್ತೇನೆ. ಆಗ ಯಾರಾದರೂ ಪ್ರಶ್ನಿಸಿದರೆ ಒರಟೊರಟಾಗಿ ಉತ್ತರಿಸುತ್ತೇನೆ. ಹಾಗೆ ಮಾಡುವುದರಿಂದ ಮನಸ್ಸಿಗೆ ಏನೋ ಒಂದು ತೃಪ್ತಿಯಾಗುತ್ತದೆ.

ನನ್ನ ಹವ್ಯಾಸಗಳು ಹೀಗಿವೆ. ನಾನು ತುಂಬಾ ಪುಸ್ತಕಗಳನ್ನು ಓದು ತ್ತೇನೆ. ಸಹಜತೆಗೆ ಹತ್ತಿರವಾದ ಚಲನ ಚಿತ್ರಗಳೆಂದರೆ ಅಚ್ಚು ಮೆಚ್ಚು. ನಾನೊಬ್ಬ ಪ್ರಕೃತಿ ಪ್ರೇಮಿ. ಬೆಳದಿಂಗಳು, ಗುಡ್ಡಕಾಡುಗಳು, ಹಸಿರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಯುವ ನೀರು ಎಲ್ಲವೂ ಇಷ್ಟ. ಹಳೆಯ ಚಿತ್ರಗೀತೆಗಳು, ಶಾಸ್ತ್ರೀಯ ಸಂಗೀತವೂ ಇಷ್ಟ. ನನ್ನ ಹವ್ಯಾಸಗಳು ಚೆನ್ನಿವೆ ಅಲ್ಲವೇ ಸಾರ್ ?

ನಾನು ಹೇಗೆ ನನ್ನ ಆತ್ಮ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲಿ ? ನನಗೇನಾದರೂ ಖಾಯಿಲೆ ಇದೆಯೇ ನೀವು ಹೇಳಬೇಕು. ಸಲಹೆ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥಿಸುತ್ತೇನೆ"

* * *

ಹದಿವಯಸ್ಸಿನ ಯುವಕನೊಬ್ಬನಿಂದ ಬಂದ ಈ ಪತ್ರ ಈ ವಯಸ್ಸಿನವರ ಮಾನಸಿಕ ಗೊಂದಲ, ಅವ್ಯವಸ್ಥೆಯನ್ನು ಬಹಳ ಪ್ರಾತಿನಿಧಿಕವಾಗಿ ಚಿತ್ರಿಸುತ್ತದೆ. ತಮ್ಮ ಬಾಹ್ಯರೂಪ, ಆಕಾರದ ಬಗ್ಗೆ ಹದಿಹರೆಯದವರಿಗೆ ಬಹಳ ಕಾಳಜಿ. ತನ್ನ ಶರೀರದ ಆಕಾರ ಮತ್ತು ಲಕ್ಷಣ ಆಕರ್ಷಕವಾಗಿರಬೇಕು. ತಾನು ಯಾವುದೇ ಗುಂಪಿನಲ್ಲಿ ಎದ್ದು ಕಾಣಬೇಕು. ಜನ ತನಗೆ ಮಾನ್ಯತೆ ನೀಡಬೇಕು. ತಾನು ಎಲ್ಲರ ಹೀರೋ ಆಗಿ, ಹುಡುಗಿಯರ ಆಕರ್ಷಣೆಯ ಕೇಂದ್ರವಾಗಿ ಮೆರೆಯಬೇಕು ಎಂಬ ಉತ್ಕಟ ಆಸೆ. ಪ್ರತಿದಿನ ಕನ್ನಡಿಯ ಮುಂದೆ ನಿಂತು ಸಾಕಷ್ಟು ಹೊತ್ತು ತಾನು ಹೇಗೆ ಕಾಣುತ್ತೇನೆ ಎಂದು ಪರಿಶೀಲಿಸುತ್ತಾರೆ. ಅಲಂಕಾರ ವಸ್ತುಗಳಿಂದ, ಫ್ಯಾಶನ್ ಉಡುಪುಗಳಿಂದ ತಮ್ಮ ವರ್ತನೆಯಿಂದ ಎದ್ದುಕಾಣಲು ಪ್ರಯತ್ನಿಸುತ್ತಾರೆ. ಈ ದಿಸೆಯಲ್ಲಿ ತಮ್ಮ ಮೆಚ್ಚಿನ ಸಿನೇಮಾ ನಾಯಕನನ್ನೂ, ಕ್ರೀಡಾ ನಾಯಕನನ್ನೂ ಅನುಸರಿಸುತ್ತಾರೆ. ಅಕಸ್ಮಾತ್ ಹರೆಯದ ವ್ಯಕ್ತಿಗೆ ವಂಶಿಕ ಕಾರಣದಿಂದಲೋ ಅಥವಾ ಪೌಷ್ಟಿಕಾಂಶದ ಕೊರತೆಯಿಂದಲೋ ಅಥವಾ ಕಾಯಿಲೆಯಿಂದಲೋ ಗಿಡ್ಡ ಅಥವಾ ತೆಳು ದೇಹವಿದ್ದರೆ ಅವನ ಸ್ಥಿತಿ ಚಿಂತಾಜನಕವಾಗುತ್ತದೆ. "ಅಯ್ಯೋ ನಾನು ತೆಳ್ಳಗಿದ್ದೇನೆ, ಕುಳ್ಳಗಿದ್ದೇನೆ. ಕಪ್ಪಗಿದ್ದೇನೆ" ಎಂದು ಕೊರಗ ತೊಡಗುತ್ತಾರೆ. ದೇಹವನ್ನು ಬೆಳೆಸಲು, ಎತ್ತರ ಬೆಳೆಯುವಂತೆ ಮಾಡಲು ನಾನಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ. ಯಾರು ಏನು ಹೇಳುತ್ತಾರೋ ಅದನ್ನೆಲ್ಲಾ ಮಾಡಲು ಪ್ರಾರಂಭಿಸುತ್ತಾರೆ. ವ್ಯಾಯಾಮ ಶಾಲೆಗೆ ಹೋಗಿ ಕಸರತ್ತು ಮಾಡುತ್ತಾರೆ. ಬೆಳಗಿನ ಜಾವದಲ್ಲೆದ್ದು ಚಳಿಯಲ್ಲಿ ಗಡ ಗಡನೆ ನಡುಗುತ್ತಾ ಜಾಗಿಂಗ್‌ಗೆ ಹೊರಡುತ್ತಾರೆ. ಮೊಟ್ಟೆ ಕಂಡರೆ ವಾಕರಿಕೆ ಬಂದರೂ, ಮೂಗು ಹಿಡಿದುಕೊಂಡು ಹಸಿ ಮೊಟ್ಟೆಯನ್ನು ಕುಡಿಯುತ್ತಾರೆ, Sri Vidyabharathi Book Centre, Sringeri ಹಾಲು ಸೇವಿಸುತ್ತಾರೆ. ಈಜು ಹೊಡೆದರೆ ಉದ್ದ ಬೆಳೆಯುತ್ತಾರೆ ಎಂದು ಯಾರಾದರೂ ಹೇಳಿದರೆ, ಹತ್ತಿರದ ಕರೆ ಬಾವಿ ನದಿಗೆ ಓಡಿ ಬೀಳುತ್ತಾರೆ.

CC-O. In Public Domain. Digitized by eGangotri

ಯೋಗಾಸನ ಮಾಡಿದರೆ ಶರೀರದ ಕಾಂತಿ ಹೆಚ್ಚುತ್ತದೆ ಎಂದರೆ, ಹೋಗಿ ಅದನ್ನೂ ಮಾಡುತ್ತಾರೆ. ಇದರ ಜೊತೆಗೆ ವೈದ್ಯರ ಬಳಿಗೆ ಹೋಗಿ 'ಡಾಕ್ಟರೇ ಒಳ್ಳೆಯ ಟಾನಿಕ್ ಬರೆದು ಕೊಡಿ' ಎಂದು ದುಂಬಾಲು ಬೀಳುತ್ತಾರೆ. ವಂಶಿಕ ಕಾರಣಗಳಿಂದ ಶರೀರ ತೆಳ್ಳಗೆ ಕುಳ್ಳಗೇ ಉಳಿದು ಬಿಟ್ಟರೆ, ನಿರಾಶರಾಗುತ್ತಾರೆ. ಕೀಳರಿಮೆ ಬೆಳೆಸಿಕೊಳ್ಳುತ್ತಾರೆ. ಗುಂಪಿನೊಡನೆ ಬೆರೆಯಲು, ಇತರರೊಂದಿಗೆ ಒಡನಾಡಲು, ನಾಲ್ಕು ಮಂದಿಯ ಮುಂದೆ ಮಾತಾಡಲು ಹಿಂಜರಿಯುತ್ತಾರೆ. ಒಂಟಿಯಾಗುತ್ತಾರೆ. ಹಿಂದೆ ಬೀಳುತ್ತಾರೆ. ಜೀವನದ ಕಷ್ಟನಷ್ಟಗಳನ್ನು ಎದುರಿಸುವ ಸ್ಥೈರ್ಯವನ್ನು ಕಳೆದುಕೊಳ್ಳುತ್ತಾರೆ. ಇದಾಗಬಾರದು. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ನುಡಿಯನ್ನು ಹರೆಯದವರು ನೆನಪಿನಲ್ಲಿಟ್ಟುಕೊಳ್ಳಬೇಕು. ಪೌಷ್ಟಿಕ ಆಹಾರ ಮತ್ತು ವ್ಯಾಯಾಮದಿಂದ ಒಂದು ನಿರ್ದಿಷ್ಟ ಹಂತದವರೆಗೆ ಶರೀರವನ್ನು ಉತ್ತಮಪಡಿಸಬಹುದು, ಅನಂತರ ಸಾಧ್ಯವಿಲ್ಲ. ಯಾವುದೇ ವ್ಯಕ್ತಿಯ ಶರೀರದ ಆಕಾರ ಮತ್ತು ಎತ್ತರವನ್ನು ಆತನಿಗೆ ತಂದೆ ತಾಯಿಯಿಂದ, ಹಿರಿಯರಿಂದ ಬಂದ ವಂಶಿಕ ಗುಣಗಳು ನಿರ್ಧರಿಸುತ್ತವೆಯಾದ್ದರಿಂದ, ಪ್ರಕೃತಿ ನಮಗಿತ್ತ ದೇಹವನ್ನು ನಾವು ಒಪ್ಪಿಕೊಳ್ಳಬೇಕು. ಯಾವುದೇ ಷರತ್ತಿಲ್ಲದೆ, ದೇಹ ಈಗ ಹೇಗಿದೆಯೋ ಹಾಗೆ, ಅದನ್ನು ಸ್ವೀಕರಿಸಿ, ಅದರ ಬಗ್ಗೆ ಹೆಮ್ಮೆ ಪಡಲು ಪ್ರಯತ್ನಿಸಬೇಕು. 'ನಾನಿರುವುದು ಹೀಗೆ, ಇದು ಜೈವಿಕ ಹಾಗೂ ಪ್ರಾಕೃತಿಕ ಕೊಡುಗೆ. ಇದು ನನ್ನ ಸ್ವತ್ತು. ಇದರಿಂದ ಎಷ್ಟು ಪ್ರಯೋಜನ ಪಡೆಯಲು ಸಾಧ್ಯ, ಎಂದು ಯೋಚಿಸಬೇಕು. ನನ್ನ ಮಾತು ನಡೆವಳಿಕೆಯಿಂದ, ಗುಣ ವ್ಯವಹಾರಗಳಿಂದ ಪ್ರೀತಿವಿಶ್ವಾಸಗಳಿಂದ, ಸಾಧನೆಯಿಂದ ನಾನು ಎತ್ತರಕ್ಕೆ ಬೆಳೆಯಬೇಕು, ಮಾನ್ಯತೆ ಪಡೆಯಬೇಕು ಕೀರ್ತಿಗಳಿಸಬೇಕು, ಎಂಬ ಧೋರಣೆ ನಮ್ಮದಾಗಬೇಕು. ಇದರ ಜೊತೆ ಜೊತೆಗೆ ಹಸಿರು ಸೊಪ್ಪು, ತರಕಾರಿ, ಹಾಲು, ಹಣ್ಣು, ಬೇಳೆಕಾಳುಗಳು (ಮಾಂಸಾಹಾರಿಗಳಾದರೆ ಮೊಟ್ಟೆ ಮಾಂಸ) ಇರುವ ಆಹಾರವನ್ನು ಕ್ರಮವಾಗಿ ಸೇವಿಸಿ, ಶಾರೀರಕ ಚಟುವಟಿಕೆಗಳನ್ನು (ಆಟ, ಓಟ, ವ್ಯಾಯಾಮ ಇತ್ಯಾದಿ) ನಡೆಸಿಕೊಂಡು ಹೋಗಬೇಕು.

ಮನೆಯಲ್ಲಿ, ಸುತ್ತಮುತ್ತಲಿನ ಪರಿಸರದಲ್ಲಿ, ಶಾಲಾ ಕಾಲೇಜಿನಲ್ಲಿ ಎಲ್ಲರೂ ತನ್ನ ಅಸ್ತಿತ್ವವನ್ನು ಗುರುತಿಸಬೇಕು, ತನ್ನ ಮಾತಿಗೆ, ಕೃತಿಗೆ ಬೆಲೆ ಕೊಡಬೇಕು, ನಡೆಯಲಿರುವ ಘಟನೆಗಳ ಮೇಲೆ ತನ್ನ ಅಂಕಿತವಿರಬೇಕು ಎಂದು ಹರೆಯದವರು ಬಯಸುತ್ತಾರೆ(ಕ). ಇದೂ ಪ್ರಶ್ನೆ (ಳ) 'ಐಡೆಂಟಿಟಿ ಕ್ರೈಸಿಸ್'ನ ಒಂದು ಭಾಗ ಎಂದು ಈ ಮೊದಲೇ ಹೇಳಿದೆ. ತನ್ನ ಐಡೆಂಟಿಟಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಕಂಡು ಹಿಡಿದುಕೊಳ್ಳುವಲ್ಲಿ ಹದಿಹರೆಯದವರಿಗೆ ಸಂಬಂಧಪಟ್ಟವರೆಲ್ಲರೂ ನೆರವಾಗಬೇಕಾಗುತ್ತದೆ. ಇದರ ಜೊತೆಗೆ ಹದಿಹರೆಯದವರೂ ಕೂಡ, ಕೆಲವು ಸನ್ನಿವೇಶಗಳಲ್ಲಿ, ಕೆಲವರಿಂದ ನಿರೀಕ್ಷಿತ ಮಾನ್ಯತೆ ದೊರಕದಿದ್ದಾಗ, ಅದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುವುದನ್ನು ತಡೆಗಟ್ಟಬೇಕು. (ಪತ್ರ ಬರೆದ ಹುಡುಗ ತನ್ನ ಸೋದರ ಮಾವ ತನಗೆ ವಿಶೇಷ ಆಹ್ವಾನವನ್ನು ಕೊಡದಿದ್ದಾಗ ಅತಿಯಾಗಿ ನೊಂದುಕೊಳ್ಳುತ್ತಾನೆ.)

ತಾವು ಪ್ರೌಢರಾಗುತ್ತಿದ್ದೇವೆ. ಸ್ವತಂತ್ರರಾಗಿದ್ದೇವೆ. ತಾವು ಮುಗ್ಧರಲ್ಲ ಎಂಬುದನ್ನು ತೋರಿಸುವುದಕ್ಕೆ ಅಥವಾ ನೀತಿನಿಯಮಗಳನ್ನು ತಮ್ಮ ಮೇಲೆ ಹೇರಿ, ತಾವು ಮಾತ್ರ ಅವುಗಳನ್ನು ಪಾಲಿಸದೆ, ತಾವು ದೊಡ್ಡವರು ಏನು ಮಾಡಿದರೂ ನಡೆಯುತ್ತದೆ ಎಂದು ನಡೆದುಕೊಳ್ಳುವ ಹಿರಿಯರ ಧೋರಣೆಯನ್ನು ಪ್ರತಿಭಟಿಸುವುದಕ್ಕೋಸ್ಕರ, ಹದಿವಯಸ್ಸಿನವರು ಕೆಲವು ಅನಾರೋಗ್ಯಕರ ಹಾಗೂ ಅಪಾಯಕಾರಿ ಹವ್ಯಾಸ ಮತ್ತು ಚಟುವಟಿಕೆಗಳನ್ನು ರೂಢಿಸಿಕೊಳ್ಳುತ್ತಾರೆ. ಉದಾಹರಣೆಗೆ ಸಿಗರೇಟ್ ಸೇವನೆ, ಬೀರ್, ಬ್ರಾಂದಿ, ವಿಸ್ಕಿ, ಇತರ ಮಾದಕ ವಸ್ತುಗಳ ಸೇವನೆ, ಲೈಂಗಿಕ ವಿಚಾರಗಳ ಬಗ್ಗೆ ಬಹಿರಂಗವಾಗಿ ಚರ್ಚಿಸುವುದು, ಅಶ್ಲೀಲವಾಗಿ ಮಾತಾಡುವುದು, ಬ್ಲೂಫಿಲ್ಮ್‌ಗಳನ್ನು ನೋಡುವುದು, ಲೈಂಗಿಕ ದುಸ್ಸಾಹಸಗಳನ್ನು ಮಾಡುವುದು ಇತ್ಯಾದಿ. ಹದಿಹರೆಯದವರು ಈ ಮಾರ್ಗ ಹಿಡಿಯದೆ, ಆರೋಗ್ಯಕರ ಹವ್ಯಾಸಗಳಲ್ಲಿ ತಮ್ಮ ಹಿರಿಮೆಯನ್ನು ಸಾಧಿಸಬೇಕು. ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಭಾಗವಹಿಸುವುದು, ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ ಲಲಿತ ಕಲೆಗಳನ್ನು ಕಲಿತು ಪ್ರದರ್ಶಿಸುವುದು, ಸಾಹಿತ್ಯ ರಚನೆ ಅಥವಾ ಇನ್ಯಾವುದೇ ಸೃಜನಾತ್ಮಕ ಚಟುವಟಿಕೆ, ಸಾಹಸ ಕಾರ್ಯಗಳನ್ನು ಕೈಗೊಳ್ಳುವುದು ಇತ್ಯಾದಿ.

ತಂದೆ ತಾಯಿಗಳಾಗಲೀ, ಶಿಕ್ಷಕರಾಗಲೀ, ಇತರರಾಗಲೀ ಒಬ್ಬರಿಗೊಂದು, ಮತ್ತೊಬ್ಬರಿಗೆ ಇನ್ನೊಂದು ಎಂಬಂತೆ ಪಕ್ಷಪಾತ ಮಾಡುವುದನ್ನು ಮಕ್ಕಳಂತೆ ಹದಿಹರೆಯದವರೂ ಬಲವಾಗಿ ವಿರೋಧಿಸುತ್ತಾರೆ. ಪ್ರತಿಭಟಿಸುತ್ತಾರೆ. ದೊಡ್ಡವರು ಇದನ್ನು ನಿಲ್ಲಿಸದಿದ್ದರೆ, ನೊಂದುಕೊಳ್ಳುತ್ತಾರೆ. ತತ್ಪರಿಣಾಮವಾಗಿ ಮಾನಸಿಕ ಅಸ್ವಸ್ಥತೆಗೆ ಈಡಾಗಬಹುದು. ಉದಾಹರಣೆ ಆತಂಕ, ಖಿನ್ನತೆ, ಉನ್ಮಾದ ಇತ್ಯಾದಿ. ಆದ್ದರಿಂದ ದೊಡ್ಡವರು ಈ ಬಗ್ಗೆ ಬಹು ಎಚ್ಚರಿಕೆಯಿಂದಿರಬೇಕಾಗುತ್ತದೆ. ಎಲ್ಲರೂ ಸಮಾನ ಎಂಬುದನ್ನು ನಿರೂಪಿಸಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಹಲವಾರು ಕಾರಣಗಳಿಂದ ತಮ್ಮ ಬಗ್ಗೆ ಕೀಳರಿಮೆ ಬೆಳೆಸಿಕೊಂಡು, ಆತ್ಮವಿಶ್ವಾಸವಿಲ್ಲದೆ ನರಳುವ ಹದಿಹರೆಯುವದವರು ಎಲ್ಲೆಡೆ ಕಾಣಸಿಗುತ್ತಾರೆ. ತಮ್ಮ ಮನೆಯುವರ ಬಗ್ಗೆ, ಉಪಾಧ್ಯಾಯರುಗಳ ಬಗ್ಗೆ, ಸಮಾಜದ ಬಗ್ಗೆ ಕೋಪ, ಅಸಮಾಧಾನವನ್ನು ಮೂಡಿಸಿಕೊಂಡು ನೇರವಾಗಿ ಅಥವಾ ಪರೋಕ್ಷವಾಗಿ ತಮ್ಮ ರೋಷವನ್ನು, ಆಕ್ರಮಣಕಾರಿ ಮನೋಭಾವವನ್ನು ಹೊಂದಿರುವ ಹದಿಹರೆಯುದವರೂ ಇದ್ದಾರೆ. ತಮ್ಮ ಇರುವಿಕೆಯನ್ನು ತಮ್ಮ ಐಡೆಂಟಿಟಿಯನ್ನು, ತಾವು ದೊಡ್ಡವರಾಗಿದ್ದೇವೆ ಎಂದು ಪ್ರಕಟಿಸಲು ಮದ್ಯಪಾನ, ಧೂಮಪಾನ, ಮಾದಕವಸ್ತು ಸೇವನೆ, ಲೈಂಗಿಕ ಅಪಚಾರಗಳನ್ನು, ಹಿಂಸಾ ಪ್ರವೃತ್ತಿಯನ್ನು ತೋರಿಸುವ ಹದಿಹರೆಯುದವರೂ ಇರುತ್ತಾರೆ. ಇವರಿಗೆ ಮನೆಯುವರ, ಸಂಬಂಧ ಪಟ್ಟವರೆಲ್ಲರ ಸಹಾನುಭೂತಿ, ಹೆಚ್ಚಿನ ಪ್ರೀತಿ, ಆಸರೆ, ಮಾರ್ಗದರ್ಶನ ಬೇಕಾಗುತ್ತದೆ. ಆರೋಗ್ಯಕರ ವಿಧಾನಗಳಿಂದ ತಮ್ಮ ಸಾಧನೆ, ಸಾಮರ್ಥ್ಯಗಳನ್ನು ಪ್ರಕಟಿಸಲು ಪ್ರೋತ್ಸಾಹ ಮತ್ತು ಅವಕಾಶಗಳು ಬೇಕಾಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭ್ರಮಾಧೀನ ಯೋಗೀಶ

“ಯೋಗೀಶ ರಿಪೇರಿ ಆಗಲಾರದಷ್ಟು ಕೆಟ್ಟು ಹೋಗಿದ್ದಾನೆ ಕಣೋ…” ಅರವಿಂದ ನುಡಿದ.

“ಅವನು ಕೆಟ್ಟಿದ್ದಾನೆ ನಿಜ. ಆದರೆ ರಿಪೇರಿ ಆಗದಷ್ಟು ಕೆಟ್ಟಿದ್ದಾನೆ ಅಂತ ಹೇಗೆ ಹೇಳ್ತೀ” ಸುಧೀಂದ್ರ ಪ್ರಶ್ನಿಸಿದ.

“ನನ್ನ ಹತ್ತಿರ ಕೈಗಡ ಅಂತ ಮುನ್ನೂರು ರೂಪಾಯಿ ತೆಗೆದುಕೊಂಡು ಐದು ತಿಂಗಳಾಯ್ತು, ವಾಪಸ್ ಕೊಟ್ಟಿಲ್ಲ. ಕೇಳಿದ್ರೆ ಈಹೊತ್ತು, ನಾಳೆ ಅಂತ ತಾರಮ್ಮಯ್ಯ ಮಾಡ್ತಿದ್ದಾನೆ.”

“ಅಂದರೆ ನಿನ್ನ ಸಾಲದ ಹಣವನ್ನು ಕೊಡ್ಲಿಲ್ಲ ಅಂತ, ಅವನ ಮೇಲೆ ನಿನಗೆ ಕೋಪ ಅಲ್ಲವೆ ?” ಸುಧೀಂದ್ರ ಅವನನ್ನು ಚುಚ್ಚಿದ.

“ಅಷ್ಟೇ ಅಲ್ಲವೋ, ಅವನು ಎಲ್ಲರ ಹತ್ತಿರ ಸಾಲ ಮಾಡಿಕೊಂಡಿದ್ದಾನೆ. ಹತ್ತಿರ ಹತ್ತಿರ ನಾಲ್ಕು ಸಾವಿರ ರೂಪಾಯಿಗಳನ್ನು ಅವನು ನುಂಗಿಹಾಕಿದ್ದಾನೆ ಅನ್ನಬಹುದು.”

“ಹೌದಾ… ಇದು ನಿನಗೆ ಹೇಗೆ ಗೊತ್ತಾಯ್ತು ?”

“ಹೀಗೆ ನನ್ನ ಸಾಲದ ವಿಚಾರ ಅವರಿವರಲ್ಲಿ ಹೇಳಿಕೊಂಡಾಗ, ಅವರೆಲ್ಲ ಅಯ್ಯೋ, ಯೋಗೀಶನಿಗೆ ನಾವೂ ಸಾಲ ಕೊಟ್ಟು ಟೋಪಿ ಹಾಕಿಸಿಕೊಂಡಿದ್ದೇವೆ ಅಂತ ಹೇಳಿದ್ರು. ಅದಿರಲಿ ನೀನು ಅವನಿಗೆ ದುಡ್ಡು ಕೊಟ್ಟಿಲ್ಲ ತಾನೆ…?”

“ದುಡ್ಡು ಕೊಟ್ಟಿಲ್ಲ… ಆದರೆ ಕಳೆದ ವಾರ ನನ್ನ ಕ್ವಾರ್ಟ್ಸ್ ವಾಚ್ ಇತ್ತಲ್ಲ ಅದನ್ನು ತೆಗೆದುಕೊಂಡು ಹೋದ. ಪರೀಕ್ಷೆ ಇದೆ ನನ್ನದು ಕೆಟ್ಟು ಹೋಗಿದೆ. ನಿನ್ನದು ಕೊಟ್ಟಿರು ಅಂತ ಹೇಳಿ ಇಸಿದುಕೊಂಡು ಹೋದ. ಈ ಹೊತ್ತಿನವರೆಗೆ ಅವನ ದರ್ಶನವಿಲ್ಲ…”

“ಆಯಿತು, ವಾಚನ್ನು ಮರೆತು ಬಿಡು. ಅದು ನಿನಗೆ ವಾಪಸ್ ಬರೋಲ್ಲ. ಅದು ಯಾವುದೋ ಮಾರವಾಡಿ ಅಂಗಡಿಯನ್ನು ಈಗಾಗಲೇ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸೇರಿದೆ ಅಥವಾ ಯಾವುದೋ ಬಾರ್, ಬೀಡಿ ಅಂಗಡಿ ಮಾಲೀಕನಿಗೆ ಸೇರಿರತ್ತೆ" ಅರವಿಂದ ನಕ್ಕ.

"ಛೇ... ಯೋಗೀಶ ಈ ಮಟ್ಟಕ್ಕೆ ಇಳೀತಾನೆ ಅಂತ ನಾನು ಅಂದ್ಕೊಂಡಿರಲಿಲ್ಲ. ಅವರಪ್ಪ ಅಷ್ಟು ಶ್ರೀಮಂತ. ಮಗನಿಗೆ ಖರ್ಚಿಗೆ ಸಾಲುವಷ್ಟು ಹಣ ಕಳಿಸೋದಕ್ಕೆ ಅವನಿಗೇನು ದಾಡಿ. ಜಿಪುಣ ಅಂತ ಕಾಣತ್ತೆ..."

ಯೋಗೀಶನಿಗೆ ಎಷ್ಟು ದುಡ್ಡಿದ್ದರೂ ಸಾಲೋದಿಲ್ಲ, ಸುಧೀಂದ್ರ. ಪಾಪ ಅವರಪ್ಪ ಕಳುಹಿಸೋ ದುಡ್ಡಿನಲ್ಲಿ ನಾಲ್ಕು ಜನ ಸುಲಭವಾಗಿ ಜೀವನ ಮಾಡಬಹುದು. ಆದರೆ ಯೋಗೀಶನಿಗೆ ಇರಬಾರದ ಚಟ ಇದೆ. ಮಾದಕ ವಸ್ತುಗಳನ್ನು ಸೇವಿಸೋ ಚಟಕ್ಕೆ ಬಿದ್ದಿದ್ದಾನೆ. ಅದರಲ್ಲೇ ಮುಳುಗಿ ತೇಲ್ತಿದ್ದಾನೆ. ಅವನಿಗೆ ಈಗ ಕೊಳಗ ಹಣ ಇದ್ದರೂ ಸಾಲೋದಿಲ್ಲ. ಇಷ್ಟರಲ್ಲೇ ಬುದ್ಧಿ ಕೆಟ್ಟು ಹುಚ್ಚ ಆಗ್ತಾನೆ ಇಲ್ಲವೇ ಅವನಿಗೆ ಡ್ರಗ್ಸ್ ಸಪ್ಲೈ ಮಾಡುವವರ ಕೈಗೊಂಬೆಯಾಗಿ ಯಾರನ್ನಾದರೂ ಕೊಲೆ ಮಾಡಿ ಅಥವಾ ದರೋಡೆ ಮಾಡಿ ಜೈಲಿಗೆ ಹೋಗೋದಂತೂ ಗ್ಯಾರಂಟಿ.

"ನಾನು ಮೊದಲಿನಿಂದಲೂ ಹೇಳಿದೆ ಅವನಿಗೆ, ಬೇಡವೋ ಈ ಮಾದಕ ವಸ್ತುಗಳ ಸಹವಾಸ ಅಂತ. ಕೇಳಿದನಾ ಅವನು. ಆ ರೌಡಿ ಭೂಪತಿಯು ಸಹವಾಸ ಮಾಡಿ ಕುಲಗೆಟ್ಟು ಹೋದ...ಯೋಗೀಶ ಬೀರ್ ಬ್ರಾಂದಿ ಕುಡಿಯೋದನ್ನು ಕಂಡಿದ್ದೆ. ಈಗ ಏನು ಕುಡಿಯೋದನ್ನು ಕಲ್ತಿದ್ದಾನೆ?"

"ಬ್ರಾಂದಿ, ವಿಸ್ಕಿ, ರಮ್ ಇರಲಿ, ಅಫೀಮು, ಗಾಂಜಾ ಮತ್ತು ಇತ್ತೀಚೆಗೆ ಬ್ರೌನ್ ಶುಗರ್ ಉಪಯೋಗಿಸಲು ಕಲ್ತಿದ್ದಾನೆ. ಅದಕ್ಕಾಗಿ ನೀರಿನಂತೆ ಹಣ ಖರ್ಚು ಮಾಡ್ತಾನೆ."

"ಬ್ರೌನ್ ಶುಗರ್ ಅಂದ್ರೆ ಒಂದು ರೀತಿ ಪುಡಿ. ಸಿಗರೇಟಿನೊಂದಿಗೆ ಸೇರಿಸಿ ದಂ ಹೊಡಿಯೋದು ತಾನೇ."

"ಹೌದೋ."

"ಯೋಗೀಶ ಇಷ್ಟು ಹಾಳಾಗಿರೋದು ಅವನ ತಂದೆ ತಾಯಿ, ಮನೆಯವರಿಗೆ ಗೊತ್ತಿಲ್ಲವೇ. ಅನ್ಯಾಯವಾಗಿ ಹಾಳಾಗ್ತಾನಲ್ಲೋ."

"ತಂದೆಗೆ ಗೊತ್ತಾಗಿರಬಹುದು. ಆದರೆ ಯೋಗೀಶ ಅಡಿಕ್ಟ್ ಆಗಿದ್ದಾನೆ ಅನ್ನೋ ವಿಷಯ ಗೊತ್ತಿರಲಾರದು. ಕಳೆದ ವಾರ ಅವನ ತಂದೆ ಬಂದಿದ್ದರಲ್ಲ, ಸು[illegible] ಬುದ್ಧಿ ಹೇಳ್ತಿದ್ದುದನ್ನು ಕಂಡೆ. ಯೋಗೀಶನಿಗೆ ಕೊಡ್ತಿದ್ದ ಪಾಕೆಟ್ ಮನಿಯನ್ನು ಕಡಿಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

 CC-O. In Public Domain. Digitized by eGangotri

ಮಾಡ್ತೀವಿ ಅಂತ ಹೆದರಿಸಿದರಂತೆ. ಆತ ಹಿಂದಿರುಗಿ ಬರಲಾಗದಂತ ದಾರಿ ಯಲ್ಲಿ ಹೋಗಿದ್ದಾನೆ..."

"ಈ ಡ್ರಗ್ಸ್‌ಗೆ ಅಡಿಕ್ಟ್ ಆಗೋದು ಎಂದರೇನೋ... ಆಗ ಏನು ತೊಂದರೆ ಆಗತ್ತೆ."

"ಮ್ಯಾಗಜಿನ್ ಒಂದರಲ್ಲಿ ಬಂದಿದ್ದ ಒಂದು ಲೇಖನದ ಪ್ರಕಾರ, ಯಾವಾಗ ಒಬ್ಬ ಮಾನಸಿಕವಾಗಿ ಮತ್ತು ದೈಹಿಕವಾಗಿ ಒಂದು ವಸ್ತುವಿನ ಸೇವನೆ ಬಗ್ಗೆ ಅವಲಂಬಿತನಾಗ್ತಾನೋ, ಒಂದು ದಿನ ಅದನ್ನು ಸೇವಿಸದೇ ಹೋದರೆ ಹುಚ್ಚನಂತೆ ಚಡಪಡಿಸ್ತಾನೋ, ವಿಪರೀತ ಮೈಕೈ ನೋವು, ನರಗಳ ಸೆಳೆತ, ನಡುಕು, ನಿದ್ರೆ ಬರದಿರೋದು ಇತ್ಯಾದಿ ತೊಂದರೆಗಳು ಕಾಣಿಸಿಕೊಳ್ತದೋ ಆಗ ಆತ ಆ ವಸ್ತುವಿಗೆ ಅಡಿಕ್ಟ್ ಆಗಿದ್ದಾನೆ ಅಂತ ಹೇಳ ಬಹುದಂತೆ. ಈ ರೀತಿ ಅಡಿಕ್ಟ್ ಆದ ವ್ಯಕ್ತಿ ತನ್ನ ಮೆಚ್ಚಿನ ಮಾದಕ ವಸ್ತುವಿನ ಸಂಪಾದನೆಗೆ ಏನು ಮಾಡೋದಕ್ಕೂ ಸಿದ್ಧವಾಗ್ತಾನಂತೆ. ಕಳ್ಳತನ, ಸುಳ್ಳು ಹೇಳೋದು, ಲೈಂಗಿಕ ಸಂಪರ್ಕ ಅಥವಾ ಮತ್ತೊಬ್ಬರನ್ನು ಕೊಲೆ ಮಾಡೋದಕ್ಕೂ ಹೇಸೋದಿಲ್ಲವಂತೆ. ಹೀಗೆ ತನ್ನ ಚಟಕ್ಕೆ ತಾನೇ ಗುಲಾಮ ನಾಗಿ, ಕೊನೆಗೆ ನಾಶವಾಗ್ತಾನಂತೆ..."

"ಅಬ್ಬಾ, ಕೇಳೋದಿಕ್ಕೆ ಭಯಂಕರವಾಗಿದೆ. ಇನ್ನು ಅನುಭವಿಸೋದಿಕ್ಕೆ ಎಷ್ಟು ಭಯಂಕರವಾಗಿರುತ್ತೋ, ಏನೋ."

"ದುಡ್ಡಿನ ಆಸೆಗೆ, ಕೇಡಿಗಳು ಈ ಮಾದಕ ವಸ್ತುವನ್ನು ಜನರಿಗೆ ಮೊದಲು ಫ್ರೀಯಾಗಿ ಅಥವಾ ಅಗ್ಗದ ದರದಲ್ಲಿ ಕೊಟ್ಟು ಅವರನ್ನು ಅಡಿಕ್ಟ್ ಮಾಡಿ, ಆಮೇಲೆ ಒಂದಕ್ಕೆ ಹತ್ತು, ಇಪ್ಪತ್ತರಷ್ಟು ಹಣವನ್ನು ವಸೂಲು ಮಾಡ್ತಾರಂತೆ. ಇಲ್ಲವೇ ತಾವು ಹೇಳಿದ ಅಪರಾಧದ ಕೆಲಸ ಮಾಡು ಅಂತ ಒತ್ತಾಯ ಮಾಡ್ತಾರಂತೆ. ಬೇರೆ ಮಾರ್ಗವಿಲ್ಲದೆ ಅಡಿಕ್ಟಾದವರು ಅವರ ಗುಲಾಮರಾಗ್ತಾರೆ."

"ಯೋಗೀಶನನ್ನು ನಾವು ರಕ್ಷಿಸಬೇಕು. ಅವನು ಹಾಳಾಗೋದಕ್ಕೆ ಬಿಡಬಾರದು. ಆದರೆ ನಾವು ಹೇಳೋ ಮಾತನ್ನು ಕೇಳ್ತಾನಾ. ಈ ಚಟ ಬಿಡಿಸೋದಿಕ್ಕೆ ಏನಾದರೂ ಚಿಕಿತ್ಸೆ ಇದೆಯಾ ?"

"ನನಗೆ ಸರಿಯಾಗಿ ಗೊತ್ತಿಲ್ಲ. ಚಟ ಬಿಡೋದಕ್ಕೆ ದೃಢವಾದ ಮನಸ್ಸು ಬೇಕು. ನಮ್ಮ ಫ್ಯಾಮಿಲಿ ಡಾಕ್ಟರನ್ನು ವಿಚಾರಿಸ್ತೇನೆ. ಬಹುಶಃ ಮನ ಶಾಸ್ತ್ರಜ್ಞರು ಯೋಗೀಶನಿಗೆ ಸಹಾಯ ಮಾಡಬಹುದು ಅಂತ ಕಾಣುತ್ತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಸ್ಥಿತಿ ಕೈಮೀರೋದರೊಳಗೆ ಏನಾದರೂ ಮಾಡಲೇ ಬೇಕು." ಎಂದು ಗೆಳೆಯರಿಬ್ಬರು ಮಾತಾಡಿಕೊಂಡು ಹೊರಟರು.

ಕೆಲವು ದಿವಸಗಳ ನಂತರ ಒಂದು ದಿನ ರಾತ್ರಿ ಒಂಭತ್ತೂವರೆ ಘಂಟೆ ಹೊತ್ತಿನಲ್ಲಿ ಅರವಿಂದ ಸುಧೀಂದ್ರನ ಮನೆ ಬಾಗಿಲನ್ನು ತಟ್ಟಿದ. ಬಾಗಿಲು ತೆರೆದ ಸುಧೀಂದ್ರನ ತಂದೆಗೆ ಅರವಿಂದನನ್ನು ನೋಡಿ ಆಶ್ಚರ್ಯವಾಯಿತು. "ಅಂಕಲ್, ಸುಧೀಂದ್ರ ಇದ್ದಾನಾ, ಅವನನ್ನು ಕರೀರಿ" ಎಂದು ಹೇಳಿದ. "ಯಾಕೆ ಅರವಿಂದ್, ಏನಾಯಿತು. ಇಷ್ಟು ಹೊತ್ತಿನಲ್ಲಿ ನೀವಿಬ್ಬರು ಏನು ಮಾಡಲಿದ್ದೀರಿ" ಎಂದು ಅವರು ವಿಚಾರಿಸಿದರು.

"ಅಂಕಲ್, ನಮ್ಮ ಕ್ಲಾಸ್‌ಮೇಟ್ ಹಾಗೂ ಸ್ನೇಹಿತ ಯೋಗೀಶ ಅಂತ ಇದ್ದಾನೆ. ಈ ಹೊತ್ತು ಬೆಳಗಿನಿಂದ ಏನೋ ಒಂದು ರೀತಿ ಇದ್ದ ಈಗ ಸಂಜೆಯಿಂದ ಎಲ್ಲರನ್ನೂ ಬೈಯಂತ್ತಿದ್ದಾನೆ. ಹೊಡೆಯಲು ಹೋಗುತ್ತಾನೆ. ತನ್ನಷ್ಟಕ್ಕೆ ತಾನೇ ಗಟ್ಟಿಯಾಗಿ ಮಾತಾಡಿಕೊಳ್ಳುತ್ತಾನೆ. ತುಂಬಾ ಭಯ ಪಟ್ಟವನಂತೆ ಕಾಣುತ್ತಾನೆ. ಒಂದು ನಿಮಿಷ ಒಂದೆಡೆ ನಿಲ್ಲುವುದಿಲ್ಲ. ಬೋನಿನಲ್ಲಿ ಒಂದೇ ಸಮ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುವ ಪ್ರಾಣಿಯ ಹಾಗೆ ಓಡಾಡುತ್ತಿದ್ದಾನೆ. ಅವನನ್ನು ನೋಡಿದರೆ ನಮಗೆಲ್ಲ ಭಯವಾಗ್ತಿದೆ. ಆತ ಯಾರ ಮಾತೂ ಕೇಳ್ತಿಲ್ಲ. ಬೆಳಗಿನಿಂದ ಏನೂ ತಿಂದಿಲ್ಲ. ಒಂದು ಗುಟುಕು ನೀರನ್ನೂ ಕುಡಿದಿಲ್ಲ. ಆಗಾಗ್ಯೆ ಸುಧೀಂದ್ರ ನೋಡು, ಅವರೆಲ್ಲಾ ಬರ್‍ತಿದಾರೆ. ನನ್ನ ಕೊಲ್ಲೋದಿಕೆ ಚಾಕು ಚೂರಿ ಹಿಡಿದಿದ್ದಾರೆ. ನನ್ನನ್ನು ಕಾಪಾಡು ಅಂತ ಹೇಳ್ತಿರ್‍ತಾನೆ. ಸುಧೀಂದ್ರ ಮತ್ತು ಈತ ತುಂಬಾ ಕ್ಲೋಸಾಗಿದ್ದಾರೆ. ಆದ್ದರಿಂದ ಸುಧೀಂದ್ರ ಬಂದು ಮಾತಾಡಿದ್ರೆ, ಯೋಗೀಶ ಮಾತಾಡಬಹುದು. ಅವನ ಸ್ಥಿತಿ ಉತ್ತಮವಾಗಬಹುದು ಅಂತ ಓಡಿ ಬಂದೆ" ಅಷ್ಟರಲ್ಲಿ ಸುಧೀಂದ್ರ ರೆಡಿಯಾಗಿ ಬಂದ.

"ಈ ನಿಮ್ಮ ಯೋಗೀಶ ಏನಾದರೂ ಡ್ರಗ್ಸ್ ತೆಗೆದುಕೊಳ್ಳುತ್ತಾನೇನಯ್ಯ" ಅವನ ತಂದೆ ಪ್ರಶ್ನಿಸಿದರು. ಅವರ ಮಾತು ಕೇಳಿ ಅರವಿಂದ, ಸುಧೀಂದ್ರ ಇಬ್ಬರಿಗೂ ಆಶ್ಚರ್ಯವಾಯಿತು.

"ಯಾಕಪ್ಪಾ ಈ ಪ್ರಶ್ನೆ ಕೇಳಿದಿರಿ ?"

"ಇತ್ತೀಚೆಗೆ ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ಡ್ರಗ್ಸ್ ಸೇವನೆ ಮಾಡೋದು ಕಾಡುಕಿಚ್ಚಿನಂತೆ ಹರಡ್ತಾ ಇರೋದನ್ನು ಪೇಪರ್‌ನಲ್ಲಿ ಓದ್ತಾ ಇಲ್ಲವೇ… ನಾನು ಕೇಳಿದ್ದೆ ಡ್ರಗ್ಸ್‌ಗೆ ಅಡಿಕ್ಟ್ ಆದವರು, ಒಂದು
Sri Vidyabharathi Book Centre, Sringeri
ಹಂತದಲ್ಲಿ ಬುದ್ಧಿ ಭ್ರಮಣೆಗೆ ತುತ್ತಾಗ್ತಾರೆ. ಆಗ ಅವರಿಗೂ, ಹುಚ್ಚು

CC-O. In Public Domain. Digitized by eGangotri

ಖಾಯಿಲೆ ಇರುವವರಿಗೂ ಯಾವ ವ್ಯತ್ಯಾಸವೂ ಇರೋಲ್ಲ. ಕೆಲವು ಸಲ, ಕಾಯಿಲೆಯುವರಿಗಿಂತ ಇವರೇ ಹೆಚ್ಚು ಅಪಾಯಕಾರಿ ಆಗಬಲ್ಲರೂ ಅಂತ ಓದಿ ತಿಳಿದಿದ್ದೇನೆ. ಒಂದು ದಿನ ಡ್ರಗ್ಸ್ ಸೇವನೆ ಮಾಡದಿದ್ದರೆ 'ವಿತ್‌ಡ್ರಾಯಲ್ ಸಿಂಪ್ಟಮ್ಸ್' ಅಂತ ಶಾರೀರಕ ಮತ್ತು ಮಾನಸಿಕ ರೋಗ ಚಿಹ್ನೆಗಳು ಕಾಣಿಸಿ ಕೊಳ್ಳುತ್ವೆ. ಭಯ, ಭ್ರಮೆಗಳಿಂದ ಅವರಿಗೆ ಗೊಂದಲವಾಗಿ ಚಿತ್ರ ವಿಚಿತ್ರ ವಾಗಿ ನಡೆದುಕೊಳ್ತಾರೆ. ನಿಮ್ಮ ಯೋಗೀಶನ ಸ್ಥಿತಿ ನೋಡಿದರೆ ನನಗೆ ಹಾಗೇ ತೋರುತ್ತೆ."

"ನೀವು ಹೇಳೋದು ನಿಜವಿರಬೇಕು ಅಪ್ಪ. ಯೋಗೀಶ ಡ್ರಗ್ಸ್ ತೆಗೆದುಕೊಳ್ತಾನೆ. ಇತ್ತೀಚೆಗೆ ಅವನ ಈ ಚಟ ಹೆಚ್ಚಾಗಿತ್ತು. ನಮ್ಮ ಹತ್ತಿರವೆಲ್ಲಾ ಸಾಲ ಮಾಡಿದ್ದ. ನಾವು ಹೇಳಿದ ಬುದ್ಧಿ ಮಾತನ್ನು ಆತ ಕೇಳಲೇ ಇಲ್ಲ. ಈಗ ಏನು ಮಾಡೋದು."

"ಆತನನ್ನು ಬೇಗ ಮಾನಸಿಕ ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ತಾಳಿ... ಇಲ್ಲಿಂದಲೇ ನಾನು ಆಂಬುಲೆನ್ಸ್‌ಗೆ ಫೋನ್ ಮಾಡುತ್ತೇನೆ. ಹಾಸ್ಟೆಲಿಗೆ ತಕ್ಷಣ ಬರುವಂತೆ ಹೇಳುತ್ತೇನೆ..." ಎಂದು ಒಳ ಹೋದರು.

ಅವರೆಲ್ಲ ಹಾಸ್ಟೆಲ್ಲಿಗೆ ಬಂದಾಗ, ಯೋಗೀಶನ ರೂಮಿನ ಮುಂದೆ ವಿದ್ಯಾರ್ಥಿಗಳ ಒಂದು ಸಣ್ಣ ಗುಂಪೇ ಇತ್ತು. ಅರವಿಂದ ಅವರನ್ನು 'ಹೇಗಿದ್ದಾನೆ ಯೋಗೀಶ' ಎಂದು ವಿಚಾರಿಸಿದ. 'ಅಯ್ಯೋ ಅವನ ಹಾವಳಿ ತಡೆಯಲಾಗಲಿಲ್ಲ. ಹಾಸಿಗೆ ಹೊದಿಕೆ, ಬಟ್ಟೆ ಬರೆಯನ್ನೆಲ್ಲಾ ಎತ್ತಿ ಒಗೆಯಲು ಪ್ರಾರಂಭಿಸಿದ್ದ. ನಮ್ಮನ್ನೆಲ್ಲಾ ಹೊಡೆಯಲು ಬಂದಿದ್ದ. ಕೈ ಕಾಲು ಕಟ್ಟಿ ಉರುಳಿ ಹಾಕಿದ್ದೇವೆ.' ಎಂದ ಅವರಲ್ಲಿ ಒಬ್ಬ. ಬಾಗಿಲು ತೆಗೆದು ಒಳ ಹೋದಾಗ, ಯೋಗೀಶ ನೆಲದ ಮೇಲೆ ಮಲಗಿದ್ದ. ಕಟ್ಟುಗಳನ್ನು ಬಿಚ್ಚಿ ಕೊಳ್ಳಲು ಪ್ರಯತ್ನಿಸುತ್ತಿದ್ದ. ತಲೆ ಕೆದರಿತ್ತು. ಕಣ್ಣುಗಳು ಕೆಂಪಾಗಿದ್ದುವು. ಒಳ ಬಂದವರನ್ನು ನೋಡಿ 'ಏಯ್. ನನ್ನನ್ನು ಕೊಲ್ಲುತ್ತೀರಾ ನೀವು. ನಿಮ್ಮನ್ನು ಸಾಯಿಸಿ ಬಿಡುತ್ತೇನೆ...ಹೋಗಿ...ಇಲ್ಲಿಂದ ಹೊರಟು ಹೋಗಿ...' ಎಂದು ಕಿರುಚಿದ.

"ಯೋಗೀಶ... ನಾನು ನಿನ್ನ ಸ್ನೇಹಿತ ಸುಧೀ, ಬಂದಿದ್ದೇನೆ. ಏನಾಗ್ತಿದೆ ನಿನಗೆ". ಸುಧೀಂದ್ರ ಅವನ ಹತ್ತಿರ ಹೋಗುತ್ತಿದ್ದಂತೆ, ನೆರೆದವರು ಬೆಚ್ಚಿ ಬೀಳುವಂತೆ ಯೋಗೀಶ ಕೂಗು ಹಾಕಿದ "ಬೇಡಾ...ಬೇಡಾ... ಹತ್ತಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಬೇಡ...ಅಯ್ಯೋ ನನ್ನನ್ನು ಕಾಪಾಡಿ. ಇವನು ನನ್ನ ಕತ್ತು ಹಿಸುಕಲು ಬರುತ್ತಿದ್ದಾನೆ...ಕಾಪಾಡಿ" ಎಂದು ಬಡಬಡಿಸತೊಡಗಿದ.

"ಈತ ಭ್ರಮಾಧೀನನಾಗಿದ್ದಾನೆ. ಇನ್ನು ತಡಮಾಡುವುದು ಬೇಡ... ನೋಡಿ. ಆಂಬುಲೆನ್ಸ್ ಬಂತಾ... ಬಂದಿದ್ದರೆ ಇವನನ್ನು ಎತ್ತಿ ಸಾಗಿಸಿ..." ಎಂದು ಆಣತಿ ಇತ್ತರು ಸುಧೀಂದ್ರನ ತಂದೆ. ಬಡಬಡಿಸುತ್ತಾ, ಕೂಗಾಡುತ್ತಾ, ಒದ್ದಾಟ ಮಾಡುತ್ತಿದ್ದ ಅವನನ್ನು ಆಂಬುಲೆನ್ಸ್‌ಗೆ ಸಾಗಿಸಿದರು. "ಮಾನಸಿಕ ಆಸ್ಪತ್ರೆಯ ತುರ್ತು ವಿಭಾಗಕ್ಕೆ ನಡಿಯಪ್ಪ" ಎಂದು ಡ್ರೈವರ್‌ಗೆ ಹೇಳಿದರು.

ಆಸ್ಪತ್ರೆಗೆ ತಲುಪಿದಾಗ, ತುರ್ತು ವಿಭಾಗದ ವೈದ್ಯಾಧಿಕಾರಿಗೆ ಪರಿಸ್ಥಿತಿಯನ್ನು ವಿವರಿಸಲಾಯಿತು. ಅವರು ಯೋಗೀಶನನ್ನು ಪರೀಕ್ಷಿಸಿದರು. ಇದು ಮಾದಕ ವಸ್ತುವಿನ ಸೇವನೆಯ ಪರಿಣಾಮ. 'ಡ್ರಗ್ ವಿತ್‌ಡ್ರಾಯಲ್ ಸ್ಟೇಟ್' ಎಂದು ನಿರ್ಧರಿಸಿ, ಯೋಗೀಶನಿಗೆ ಶಮನಕಾರಿ ಸೂಜಿ ಮದ್ದನ್ನು ಕೊಟ್ಟರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಅಡ್ಮಿಟ್ ಮಾಡಿದರು.

* * *

ಹದಿವಯಸ್ಸಿನವರಲ್ಲಿ ಮಾದಕ ವಸ್ತುಗಳ ಸೇವನೆ ಆತಂಕಕಾರಿ ಪ್ರಮಾಣದಲ್ಲಿ ಬೆಳೆಯುತ್ತಿದೆ. ಈ ಮೊದಲು ಇದು ಅಮೆರಿಕೆಯಂತಹ ಸಡಿಲ, ಅವ್ಯವಸ್ಥ ಸಮಾಜದ ಪಿಡುಗು. ಭಾರತದಂತಹ ಸಂಪ್ರದಾಯಸ್ಥ ಸಮಾಜದಲ್ಲಿ ಬೇರೂರಲಾರದು ಎಂದು ಭಾವಿಸಲಾಗಿತ್ತು. ಆದರೆ ಕಳೆದ ಹತ್ತು ವರ್ಷಗಳಲ್ಲಿ, ನಮ್ಮ ನಗರಗಳು, ಪಟ್ಟಣಗಳು, ಏಕೆ ಸಣ್ಣ ಊರುಗಳೂ ಈ ಪಿಡುಗಿಗೆ ತುತ್ತಾಗಿವೆ. ಉತ್ಸಾಹದಿಂದ ಪುಟಿಯುತ್ತಾ, ಆದರ್ಶ ಗುರಿಗಳನ್ನಿಟ್ಟುಕೊಂಡು, ಸಿಪಾಯಿಗಳಂತೆ ಮುಂದೆ ಮುಂದೆ ಸಾಗಬೇಕಾಗಿದ್ದ ಯುವಜನ ಮಾದಕ ವಸ್ತುಗಳ ಅಮಲಿನಲ್ಲಿ ಅಧಃಪತನದತ್ತ ವೇಗವಾಗಿ ಜಾರಿ ಹೋಗುತ್ತಿರುವುದು ನಮ್ಮ ಸಮಾಜದ ದೊಡ್ಡ ದುರಂತ. ದೆಹಲಿ, ಬೊಂಬಾಯಿ, ವಾರಣಾಸಿ, ಬೆಂಗಳೂರು ನಂತಹ ನಗರಗಳಲ್ಲಿ ವೈದ್ಯ ವಿಜ್ಞಾನಿಗಳು ನಡೆಸಿದ ಅಧ್ಯಯನಗಳ ಫಲಿತಾಂಶಗಳು ಈ ದುರಂತವನ್ನು ಚೆನ್ನಾಗಿ ಬಿಂಬಿಸುತ್ತವೆ. ಶೇಕಡಾ 50ಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಹಿಂದಿನ ಒಂದು ತಿಂಗಳಲ್ಲಿ ಒಂದಲ್ಲ ಒಂದು ಮಾದಕ ಪದಾರ್ಥವನ್ನು (ಆಲ್ಕೋಹಾಲ್, ಗಾಂಜಾ, ಅಫೀಮು, ಬ್ರೌನ್ ಶುಗರ್, ಮಾಂಡ್ರಾಕ್ಸ್ ಇತ್ಯಾದಿ) ಸೇವಿಸಿದ್ದುದಾಗಿ ಒಪ್ಪಿಕೊಂಡರೆ ಶೇಕಡಾ ಮೂರರಿಂದ ನಾಲ್ಕು ಮಂದಿ ಮಾದಕ ವಸ್ತುವಿನ ಚಟಕ್ಕೆ (ಅಡಿಕ್ಷನ್) ಒಳಗಾಗಿದ್ದರೆ, ಮಾದಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುವಿಲ್ಲದೆ ಬದುಕಿಲ್ಲ ಎನ್ನುವ ತೀವ್ರ ಅವಲಂಬನೆಯ ಹಂತ ಮುಟ್ಟಿದ್ದರು. ಮಾದಕ ವಸ್ತು ಸೇವನೆಯ ಜೊತೆ ಜೊತೆಯಲ್ಲಿ ಅದರ ಪರಿಣಾಮವೋ ಎಂಬಂತೆ ಈ ವಿದ್ಯಾರ್ಥಿಗಳು ಅನೇಕ ಬಗೆಯ ಅಪರಾಧ ಮತ್ತು ಸಮಾಜ ವಿರೋಧಿ ಕಾರ್ಯಗಳಲ್ಲಿ ತೊಡಗಿದ್ದರು. ಹಣ ಸಂಪಾದನೆಗಾಗಿ ಸುಳ್ಳು, ಮೋಸ, ವಂಚನೆ, ಲೈಂಗಿಕ ಅಪರಾಧಗಳು, ಮಾದಕ ವಸ್ತುಗಳ ಮಾರಾಟ, ಕಳ್ಳಸಾಗಣೆ, ಮನೆಯ ವಸ್ತುಗಳನ್ನು ಕದ್ದು ಮಾರಾಟ ಮಾಡುವುದು ಇತ್ಯಾದಿ. ಸಹಜವಾಗಿ ಓದಿನಲ್ಲಿ, ಅಧ್ಯಯನದಲ್ಲಿ ಅವರ ಆಸಕ್ತಿ ಕಡಿಮೆಯಾಗಿತ್ತು. ತಮ್ಮ ಬಗ್ಗೆ ತಮ್ಮ ಭವಿಷ್ಯದ ಬಗ್ಗೆ ಅಸಹಾಯಕತೆ ಮನೆ ಮಾಡಿತ್ತು.

ನೀವು ಏಕೆ ಮತ್ತು ಹೇಗೆ ಮಾದಕ ವಸ್ತುವನ್ನು ಸೇವಿಸಲು ಆರಂಭಿಸಿದಿರಿ ಎಂಬ ಪ್ರಶ್ನೆಗೆ ಬಂದ ಸಾಮಾನ್ಯ ಉತ್ತರ "ಕುತೂಹಲಕ್ಕಾಗಿ" "ಹೊಸ ಬಗೆಯ ಅನುಭವ ಪಡೆಯುವುದಕ್ಕಾಗಿ" "ನನ್ನ ಸ್ನೇಹಿತರ ಬಲವಂತಕ್ಕಾಗಿ–ಅವರ ಕಂಪನಿಯಲ್ಲಿ ಉಳಿಯುವುದಕ್ಕಾಗಿ" "ಮನಸ್ಸಿನ ಬೇಸರ–ದುಃಖವನ್ನು ಮರೆಯುವುದಕ್ಕಾಗಿ" ಎಂದು. ಹೀಗೆ ಪ್ರಾರಂಭವಾದ ಮಾದಕ ವಸ್ತುವಿನ ಸೇವನೆ ಆಮೇಲೆ ಕೆಲವರಲ್ಲಿ ಚಟವಾಗಿ ಪರಿಣಮಿಸಲು ಕೆಲವು ಕಾರಣಗಳಿವೆ. ಉದಾಹರಣೆಗೆ ದುರ್ಬಲ ಅಥವಾ ದೋಷಪೂರ್ಣ ವ್ಯಕ್ತಿತ್ವ, ಮನಸ್ಸಿನ ಆತಂಕ ಮತ್ತು ಖಿನ್ನತೆ.

ಮಾನಸಿಕ ಆತಂಕ ಮತ್ತು ಖಿನ್ನತೆ : ಈ ಮೊದಲೇ ಹೇಳಿದಂತೆ ಹದಿವಯಸ್ಸು, ಆತಂಕದ ಅವಧಿ. ತನ್ನಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ವ್ಯಕ್ತಿ ಹೊಂದಿಕೊಳ್ಳಲು ಶ್ರಮಪಡುತ್ತಿರುವ ಕಾಲ. ತನ್ನ ಅಸ್ತಿತ್ವದ ಅರ್ಥವನ್ನು ಹುಡುಕಲು ಹೋರಾಡುವ ಅವಧಿ. ಇದರ ಜೊತೆಗೆ ತಂದೆ ತಾಯಿಗಳ ನಡುವಿನ ವಿರಸದಿಂದಲೋ, ಮನೆಯ ಇತರರ ಮನಸ್ತಾಪ, ಮೂರ್ಖತನಗಳಿಂದಲೋ, ಹಣಕಾಸಿನ ಕೊರತೆಯಿಂದಲೋ, ಇನ್ನಿತರ ಸಂಬಂಧಪಟ್ಟ ಕಾರಣಗಳಿಂದಲೋ ಹರೆಯದವರು ದುಃಖಕ್ಕೆ, ಖಿನ್ನತೆಗೆ ಒಳಗಾಗಬಹುದು. ಈ ವಯಸ್ಸಿಗೆ ಸಹಜವಾದ ಆತಂಕ ಮತ್ತು ಪರಿಸರದ ಕಾರಣಗಳಿಂದ ಉಂಟಾದ ಖಿನ್ನತೆಯನ್ನು ನಿವಾರಿಸಲು ಆರೋಗ್ಯಕರ ಮಾರ್ಗಗಳು ತೋಚದೆ ಇದ್ದಾಗ, ವ್ಯಕ್ತಿ ಮಾದಕ ವಸ್ತುವಿನ ಮೊರೆಹೋಗುತ್ತಾನೆ. ಅವುಗಳ ಸೇವನೆಯಿಂದ, ಭ್ರಮಾವೃತನಾಗಿ, ತನ್ನ ಆತಂಕ, ಖಿನ್ನತೆಗಳನ್ನು ಮರೆಯಲು ಪ್ರಯತ್ನಿಸುತ್ತಾನೆ. ಅಲ್ಕೋಹಾಲ್ ಆಗಲೀ, ಇತರ ಮಾದಕ

Sri Vidyabharathi Book Centre Sringeri

CC-O. In Public Domain. Digitized by eGangotri
ಪದಾರ್ಥ ಪ್ರಾರಂಭದಲ್ಲಿ ವ್ಯಕ್ತಿಗೆ 'ನಾನು ಚೆನ್ನಾಗಿದ್ದೇನೆ. ನನಗೆ ಯಾವ ನೋವು, ದುಃಖವಿಲ್ಲ. ಖುಷಿಯಾಗಿದ್ದೇನೆ' ಎನ್ನುವ ಭ್ರಮಾತ್ಮಕ ಅನಿಸಿಕೆ ಯನ್ನುಂಟು ಮಾಡಿ, ಅವನನ್ನು ಆಕರ್ಷಿಸುತ್ತದೆ. ಈ ಸುಖಕ್ಕಾಗಿ, ಆತ ಆ ವಸ್ತುವನ್ನು ಮೇಲಿಂದ ಮೇಲೆ ಸೇವಿಸಲು ತೊಡಗುತ್ತಾನೆ. ತನ್ನ ಸಮಸ್ಯೆಗೆ ಇದೇ ಮದ್ದು ಎಂದು ನಿರ್ಧರಿಸುತ್ತಾನೆ.

ತಾಳಿಕೆ : ಈ ಎಲ್ಲ ಮಾದಕವಸ್ತುಗಳ ದೊಡ್ಡ ದುರ್ಗುಣವೆಂದರೆ, ವ್ಯಕ್ತಿಯ ಮಿದುಳಿನ ನರಕೋಶಗಳು ಈ ವಸ್ತುಗಳಿಗೆ ಹೊಂದಿಕೊಂಡು 'ತಾಳಿಕೆ'ಯನ್ನು ಪ್ರದರ್ಶಿಸುತ್ತವೆ. ಅಂದರೆ ಪ್ರಾರಂಭದಲ್ಲಿ ಒಂದು ಪೆಗ್ ಆಲ್ಕೋಹಾಲ್ ಕೊಡುವ 'ಕಿಕ್' ಸ್ವಲ್ಪ ದಿನಗಳ ನಂತರ ಇರುವುದಿಲ್ಲ. ಆ 'ಕಿಕ್' ಪಡೆಯಲು ವ್ಯಕ್ತಿ ಹೆಚ್ಚು ಆಲ್ಕೋಹಾಲ್ ಸೇವಿಸಬೇಕಾಗುತ್ತದೆ. ಅಂದರೆ ದಿನೇ ದಿನೇ ವ್ಯಕ್ತಿ ಸೇವನೆಯ ಪ್ರಮಾಣವನ್ನು ಹೆಚ್ಚಿಸುತ್ತಲೇ ಹೋಗಬೇಕಾಗುತ್ತದೆ. ಇದನ್ನು ಚೀನೀ ಗಾದೆ ಬಹು ಚೆನ್ನಾಗಿ ವಿವರಿಸುತ್ತದೆ. "ಮನುಷ್ಯ ಮೊದಲು ಪೇಯವನ್ನು ಕುಡಿಯುತ್ತಾನೆ. ನಂತರ ಈ ಪೇಯವೇ ಮತ್ತಷ್ಟು ಪೇಯವನ್ನು ಕುಡಿಯುತ್ತದೆ. ಆಮೇಲೆ ಪೇಯವೇ ಮನುಷ್ಯ ನನ್ನು ಕುಡಿಯುತ್ತದೆ."

ಹಿಂದೆಗೆತದ ಚಿಹ್ನೆಗಳು : ತಾಳಿಕೆ ಹೆಚ್ಚಿದಂತೆ, ನರಕೋಶಗಳು ಮಾದಕ ವಸ್ತುವಿಗೆ ಹೊಂದಿಕೊಳ್ಳುವುದಷ್ಟೇ ಅಲ್ಲ, ಅದರ ಮೇಲೆ ಅವಲಂಬಿತವಾಗು ತ್ತವೆ. ಅಂದರೆ ಮಾದಕ ವಸ್ತುವಿದ್ದರೆ ಮಾತ್ರ ಕೆಲಸ ಮಾಡುತ್ತವೆ. ಮಾದಕ ವಸ್ತುವಿಲ್ಲದಿದ್ದರೆ, ನಿಷ್ಕ್ರಿಯವಾಗುತ್ತವೆ. ಪ್ರತಿಭಟಿಸುತ್ತವೆ. ಈ ಪ್ರತಿಭಟನೆಯೇ ಹಿಂದೆಗೆತದ ಚಿಹ್ನೆಗಳ ರೂಪದಲ್ಲಿ ಪ್ರಕಟವಾಗಿ (ವಿತ್‌ಡ್ರಾಯಲ್ ಸಿಂಪ್ಟಮ್ಸ್) ವ್ಯಕ್ತಿಗೆ ದೈಹಿಕವಾಗಿ, ಮಾನಸಿಕವಾಗಿ ಸಹಿಸಲಸಾಧ್ಯವಾದ ವೇದನೆಯುಂಟುಮಾಡುತ್ತದೆ. ಉದಾಹರಣೆಗೆ ವಿಪರೀತ ಚಡಪಡಿಕೆ, ಮಾಂಸಖಂಡಗಳ ಸೆಳೆತ, ನೋವು, ಅಜೀರ್ಣ, ವಾಕರಿಕೆ, ವಾಂತಿ, ನಿದ್ರಾಹೀನತೆ, ಶೂನ್ಯದಲ್ಲಿ ಧ್ವನಿ ಕೇಳಿಸುವುದು ಅಥವಾ ಭಯಾನಕ ದೃಶ್ಯ ಕಾಣಿಸುವುದು, ಅತಿಭಯ, ವಿಪರೀತ ಬೆವರು, ಜ್ವರ, ಫಿಟ್ಸ್ ಇತ್ಯಾದಿ. ಈ ಕೋಟಲೆಗಳು ಮಾದಕ ವಸ್ತುವಿನ ಸೇವನೆಯಿಂದ ಕಡಿಮೆಯಾಗುವುದರಿಂದ, ಮಾದಕ ವಸ್ತು ವ್ಯಕ್ತಿಯ ಪಾಲಿಗೆ ಅತ್ಯಗತ್ಯವಾಗುತ್ತದೆ. ಅವನ ಪಾಲಿನ ದೇವರಾಗುತ್ತದೆ. ಹೀಗಾಗಿ ಒಂದು ದಿನ, ಒಂದು ಗಂಟೆ ಮಾದಕ ವಸ್ತುವಿನ ಸೇವನೆಯನ್ನು ಆತ ಬಿಟ್ಟಿರಲಾಗದ ಸ್ಥಿತಿ ಬಂದು ಬಿಡುತ್ತದೆ.

Sri Vidyabharathi Book Centre, Sringeri
ಮಾದಕ ವಸ್ತುವಿನ ಚಟಕ್ಕೊಳಗಾದ ವ್ಯಕ್ತಿ ಅದರ ಸಂಪಾದನೆಗೆ

CC-O. In Public Domain. Digitized by eGangotri

ಯಾವ ಮಾರ್ಗವನ್ನಾದರೂ ಹಿಡಿಯುತ್ತಾನೆ. ಮಾನವೀಯ ಭಾವನೆಗಳನ್ನು ಕಳೆದುಕೊಳ್ಳುತ್ತಾನೆ. ಯಾವುದೇ ಅಪರಾಧ ಮಾಡಲು ಹಿಂಜರಿಯುವುದಿಲ್ಲ. ಆಗ ಆತ ತನಗೆ ತನ್ನ ಮನೆಯವರಿಗೆ ತನ್ನ ಸಮಾಜಕ್ಕೆ 'ಮನುಷ್ಯನನ್ನು ಬೇಟೆಯಾಡುವ ಹುಲಿಯಂತೆ' ಅಪಾಯಕಾರಿಯಾಗುತ್ತಾನೆ.

ಚಿಕಿತ್ಸೆ ಏನು ?

ಮಾದಕ ವಸ್ತುವಿನ ಚಟಕ್ಕೆ ಚಿಕಿತ್ಸೆ ಇದೆ. ಯಾವುದೇ ಮಾನಸಿಕ ಆಸ್ಪತ್ರೆ ಅಥವಾ ಮಾನಸಿಕ ಆರೋಗ್ಯ ವಿಭಾಗದಲ್ಲಿ, ಮನೋವೈದ್ಯಕೀಯ ತಂಡ ಈ ಚಿಕಿತ್ಸೆಯನ್ನು ನೀಡಬಲ್ಲದು. ರೋಗಿಯನ್ನು ಆಸ್ಪತ್ರೆಗೆ ಸೇರಿಸಬೇಕಾಗುತ್ತದೆ. ಮಾದಕ ವಸ್ತುವನ್ನು ತಕ್ಷಣ ನಿಲ್ಲಿಸಿ, ಹಿಂದೆಗೆತದ ಚಿಹ್ನೆಗಳನ್ನು ಹತೋಟಿಯಲ್ಲಿಡಲು ಶಮನಕಾರಿ ಔಷಧವನ್ನು ಕೊಡಬೇಕಾಗುತ್ತದೆ. ಜೊತೆಗೆ ಚಟಕ್ಕೆ ಬಿದ್ದ ರೋಗಿಗೆ ಇತರ ಶಾರೀರಕ ಅಥವಾ ಮಾನಸಿಕ ಕಾಯಿಲೆ ಇದ್ದರೆ (ಉದಾಹರಣೆ ಜಠರದ ಹುಣ್ಣು, ವಿಟಮಿನ್ ಕೊರತೆ, ಲಿವರ್ ನ್ಯೂನತೆ, ಸೋಂಕು, ಚಿತ್ತವಿಕಲತೆ, ಒಳಜನ್ಯ ಖಿನ್ನತೆ, ಸಿಫಿಲಿಸ್ ಇತ್ಯಾದಿ) ಅದಕ್ಕೆ ಸೂಕ್ತ ಔಷಧೋಪಚಾರವಾಗಬೇಕು. ಅನಂತರ ವ್ಯಕ್ತಿಯ ವ್ಯಕ್ತಿತ್ವ ದೋಷವನ್ನು ಅಥವಾ ಪರಿಸರ ಜನ್ಯ ಆತಂಕ, ಖಿನ್ನತೆಯನ್ನು ಸರಿಪಡಿಸಲು ಮನೋಚಿಕಿತ್ಸೆ ನೀಡಬೇಕಾಗುತ್ತದೆ. ಮನಸ್ಸಿನ ಮಾದಕ ವಸ್ತುವಿನ ವ್ಯಾಮೋಹವನ್ನು ಬಿಡಿಸಲು 'ನಡೆವಳಿಕೆ ಚಿಕಿತ್ಸೆ' ಮೂಲಕ, ಮನಸ್ಸಿಗೆ ಆರೆಂಟು ವಾರಗಳ ತರಪೇತಿಯನ್ನು ಕ್ರಮವಾಗಿ ನೀಡಬೇಕಾಗುತ್ತದೆ. ಈ ಎಲ್ಲ ಚಿಕಿತ್ಸೆ ಮುಗಿದ ನಂತರ, ವ್ಯಕ್ತಿ ಉಪಯುಕ್ತ ಉದ್ಯೋಗದಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕು. ಮಾದಕ ವಸ್ತುವನ್ನು ಸೇವಿಸಲು ಪ್ರೇರೇಪಿಸುವ ಪರಿಸರ ಮತ್ತು ಸ್ನೇಹಿತರಿಂದ ಆತನನ್ನು ದೂರವಾಗಿಡುವುದೂ ಮುಖ್ಯ. ಮನೆಯವರು, ಬಂಧು ಮಿತ್ರರು ಆತನನ್ನು ಸ್ವೀಕರಿಸಿ, ಪ್ರೀತಿ ವಿಶ್ವಾಸ ಆಸರೆಯನ್ನೀಯುವುದು ರೋಗಿಯ ಪಾಲಿಗೆ ಅಮೃತ ಸೇಚನವಾಗಬಲ್ಲದು. ರೋಗಿಯ ಮತ್ತು ಎಲ್ಲರ ಸಹಕಾರದಿಂದ ಮಾತ್ರ, ಚಿಕಿತ್ಸೆ ಯಶಸ್ವಿಯಾಗಬಲ್ಲದು.

ಮುಂಜಾಗ್ರತೆ ಕ್ರಮ : ಮಾದಕ ವಸ್ತುವಿನಿಂದ ಆದಷ್ಟು ದೂರವಿರುವುದೇ ಅತ್ಯಂತ ಸುರಕ್ಷಿತವಾದದ್ದು. ಜೇಡನ ಬಲೆಯ ಅಂದಕ್ಕೆ ಆಕರ್ಷಿತಗೊಂಡು ಸಾಯುವ [illegible] ಮದ್ಯಪಾನವಾಗಲೀ

Sri Vidyabharathi Book Centre, Sringeri

CC-O. In Public Domain. Digitized by eGangotri
ಮಾದಕ ವಸ್ತುವಾಗಲೀ ನೀಡುವ ಪ್ರಾರಂಭಿಕ 'ಸುಖ'ದ ಆಕರ್ಷಣೆಗೆ ನಾವು ಒಳಗಾದರೆ, ನಮ್ಮ ಸ್ಥಿತಿ ದುರಂತವಾಗುತ್ತದೆ. ಶರೀರ ಮತ್ತು ಮನಸ್ಸು ಜರ್ಝರಿತವಾಗಿ, ರೋಗಗ್ರಸ್ತವಾಗುತ್ತವೆ. ಹೀನಾಯ ರೀತಿಯ ಸಾವು ಬರುತ್ತದೆ. ಆದ್ದರಿಂದ ಹರೆಯದವರು ಮಾದಕ ವಸ್ತುಗಳ ಬಗ್ಗೆ ವಿಶೇಷ ಎಚ್ಚರಿಕೆ ವಹಿಸುವುದು ಮತ್ತು ಈ ದಿಸೆಯಲ್ಲಿ ದೊಡ್ಡವರ, ವೈದ್ಯರ ಮಾರ್ಗ ದರ್ಶನ ಅವರಿಗೆ ಅತ್ಯಗತ್ಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹರೆಯದಲ್ಲೇ ಮದುವೆಯಾದ ಹುಡುಗಿ

ಹದಿನೆಂಟು ವರ್ಷ ವಯಸ್ಸಾದ ನಂತರವೇ ಹುಡುಗಿ ಮದುವೆಯಾಗಲು ಅರ್ಹಳಾಗುತ್ತಾಳೆ. ಆ ವಯಸ್ಸಿಗಿಂತ ಕಡಿಮೆ ವಯಸ್ಸಿನ ಹುಡುಗಿಗೆ ಮದುವೆ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ನಮ್ಮ ದೇಶದ ಕಾನೂನು ಹೇಳುತ್ತದೆ. ಇತ್ತೀಚಿಗೆ ಕೇರಳದ ಮಂತ್ರಿಯೊಬ್ಬರು ಅಪ್ರಾಪ್ತ ವಯಸ್ಸಿನ ತಮ್ಮ ಮಗಳಿಗೆ ಮದುವೆ ಮಾಡಿದರೆಂದು ಕೋರ್ಟಿನಲ್ಲಿ ಯಾರೋ ಒಬ್ಬರು ಮೊಕದ್ದಮೆ ಹೂಡಿದಾಗ, ಆ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡ ಬೇಕಾಯಿತು. ಆದರೂ ಪ್ರತಿ ವರ್ಷ ನೂರಾರು ಚಿಕ್ಕವಯಸ್ಸಿನ ಹೆಣ್ಣು ಮಕ್ಕಳು ಮದುವೆಯಾಗಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ. ಹಳ್ಳಿಗಳಲ್ಲಿ, ಸಣ್ಣ ಸಣ್ಣ ಊರುಗಳಲ್ಲಿ, ಪಟ್ಟಣಗಳಲ್ಲಿರುವ ಸಂಪ್ರದಾಯಸ್ಥ ಮನೆಗಳಲ್ಲಿ ಹುಡುಗಿಗೆ ಹದಿನೈದು ವರ್ಷ ತುಂಬುತ್ತಿದ್ದಂತೆ ವರಾನ್ವೇಷಣೆಗೆ ತರಾತುರಿ ಯಿಂದ ಓಡಾಡುತ್ತಾರೆ. ತಮಗೆ ಒಪ್ಪಿಗೆಯಾದ ಗಂಡು ಸಿಕ್ಕಿದ ಕೂಡಲೇ ಮದುವೆ ಮಾಡಿ ಬಿಡುತ್ತಾರೆ. ಆಕೆಯನ್ನು ಮದುವೆಯಾದ ಹುಡುಗ ಬುದ್ಧಿ ವಂತನಾಗದಿದ್ದರೆ, ಒಂದು ವರ್ಷದೊಳಗೆ, ಆಕೆ ಮಗುವೊಂದರ ತಾಯಾಗು ತ್ತಾಳೆ. 'ಆಡುವ ಕೂಸಿಗೆ ಒಂದು ಕಾಡುವ ಕೂಸು, ಎನ್ನುವ ಉಕ್ತಿಯಂತೆ. ಹದಿವಯಸ್ಸಿನ ಬಾಲೆಯ ಮೇಲೆ ತಾಯ್ತನದ ಜವಾಬ್ದಾರಿ ಬೀಳುತ್ತದೆ. ಋತುಮತಿಯಾಗಿ, ಹೆಣ್ತನವೇನು ಎಂದು ಪೂರ್ಣವಾಗಿ ತಿಳಿಯುವ ಮೊದಲೇ, ಆಕೆ ಪತ್ನಿಯಾಗಿ, ಸೊಸೆಯಾಗಿ, ತಾಯಿಯಾಗಿ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಮದುವೆಯಾಯಿತೆಂದರೆ, ವಿದ್ಯಾಭ್ಯಾಸಕ್ಕೆ ಪೂರ್ಣ ವಿರಾಮ. ಮದುವೆಯಾದ ಹೆಂಡತಿಯನ್ನು ಕಾಲೇಜಿಗೆ ಓದಲು ಕಳುಹಿಸುವ ಗಂಡ, ಅತ್ತೆಮಾವಂದಿರು ನಮ್ಮ ದೇಶದಲ್ಲಿ ಅಪರೂಪದ ವ್ಯಕ್ತಿಗಳು! ಮದುವೆಗೆ ಮೊದಲು ಶಾಲೆಗೆ ಹೋಗುತ್ತಾ, ಗೆಳತಿಯರೊಂದಿಗೆ ಆಟವಾಡಿ ಕೊಳ್ಳುತ್ತಾ ಹಕ್ಕಿಯಂತೆ ಕಲಕಲ ಮಾಡುತ್ತಿದ್ದ ಶೋಡಷಿ, ಮದುವೆಯಾದ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

 CC-O. In Public Domain. Digitized by eGangotri

ಕೂಡಲೇ ಮನೆಯೊಳಗೆ ಬಂದಿಯಾಗುತ್ತಾಳೆ. ಹಿರಿಯು ಹೇಂಗಸಿನಂತೆ ನಡೆದು ಕೊಳ್ಳಬೇಕಾಗುತ್ತದೆ. ಹೊಸ ಮನೆ, ಹೊಸ ಜನ, ಹೊಸ ಪರಿಸರದಲ್ಲಿ ತನ್ನ ಹೊಸ ಜೀವನದ ಓಂ ನಾಮವನ್ನು ಬರೆಯಬೇಕಾಗುತ್ತದೆ. ಇದರ ನಡುವೆ ಆಕೆಯ ಮತ್ತು ಗಂಡನ ವಯಸ್ಸಿನ ಅಂತರ ಹೆಚ್ಚಿದ್ದರೆ, ಇನ್ನಷ್ಟು ಸಮಸ್ಯೆಗಳು ಉದ್ಭವವಾಗುತ್ತವೆ. ಈಗ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗಂಡಸು ತನ್ನ ವಿದ್ಯಾಭ್ಯಾಸ ಮುಗಿಸಿ, ಉದ್ಯೋಗ ಸಂಪಾದಿಸಿ, ಮದುವೆ ಯಾಗಲು ನಿರ್ಧರಿಸುವ ವೇಳೆಗೆ ಆತನ ವಯಸ್ಸು 28 ಅಥವಾ 30 ಅಥವಾ ಇನ್ನೂ ಹೆಚ್ಚಾಗಿರಲು ಸಾಧ್ಯವಿದೆ. ಈ ವಯಸ್ಸಿನ ಪುರುಷ ಹದಿನಾರೋ, ಹದಿನೇಳರ ಬಾಲೆಯನ್ನು ವಿವಾಹವಾದರೆ, ಪತಿಪತ್ನಿಯರ ನಡುವಿನ ವಯಸ್ಸಿನ ಅಂತರ ಹತ್ತುವರ್ಷಕ್ಕೂ ಮೇಲಾಗುತ್ತದೆ. ಪತ್ನಿ ಇನ್ನೂ ಆಡುವ ಕಿಶೋರಿ. ಪತಿ ಪ್ರೌಢವಯಸ್ಕ. ಅವರ ಅಭಿರುಚಿ, ಭಾವನೆ, ಕ್ರಿಯೆ ಪ್ರತಿ ಕ್ರಿಯೆಗಳಲ್ಲಿ ಭಾರೀ ಅಂತರ ಕಂಡು ಬಂದು, ಅವರದು ಇಜ್ಜೋಡಿಯಾಗುವ ಸಂಭವ ಹೆಚ್ಚುತ್ತದೆ. ಪುರುಷ, ಸಮಾಜದಲ್ಲಿನ ತನ್ನ ಸ್ಥಾನ ಬಲದಿಂದ. ತನ್ನ ಇಷ್ಟಾನಿಷ್ಟಗಳನ್ನು ಹೆಂಡತಿಯ ಮೇಲೆ ಹೇರಿ, ತಾನು ಸಂತೋಷ ಪಡು ತ್ತಾನೆ. ಆದರೆ ಹೆಂಡತಿಯಾದವಳು ಎಷ್ಟೋಸಲ ಮೌನವಾಗಿ ನೋವನ್ನೂ ದುಃಖವನ್ನೂ ಅನುಭವಿಸುತ್ತಾ, ತನ್ನ ಆಸೆ ಆಕಾಂಕ್ಷೆಗಳನ್ನು ಸುಟ್ಟು ಬೂದಿ ಮಾಡುತ್ತಾ ನರಳಬಹುದು. ಸದಾ ಅತೃಪ್ತಿ, ಅಸಮಾಧಾನದ ಅಗ್ನಿ ಪರ್ವತವನ್ನು ಎದೆಯೊಳಗೆ ಇಟ್ಟುಕೊಂಡು ನರಕ ವೇದನೆಯನ್ನು ಅನುಭವಿಸ ಬಹುದು. ಇವರಲ್ಲಿ ಕೆಲವರು, ಆತಂಕ, ಖಿನ್ನತೆ, ಉನ್ಮಾದಗಳಂತಹ ಮನೋ ಬೇನೆಗೆ ತುತ್ತಾಗಬಹುದು. ಅವರ, ನೋವು ನಿರಾಶೆ ಇತರರ ಗಮನಕ್ಕೆ ಬರದೇ ಹೋಗುವುದು ಒಂದು ದೊಡ್ಡ ದುರಂತ.

ಈ ಬಗೆಯ ನೋವಿಗೆ ತುತ್ತಾದ ಸೋದರಿಯೊಬ್ಬಳ ಪತ್ರವನ್ನು ಓದಿ :

"ಡಾಕ್ಟರಿಗೆ ನನ್ನ ವಂದನೆಗಳು.

ನೀವು ಬರೆಯುವ ಮನೋವೈದ್ಯಕೀಯ ಲೇಖನಗಳನ್ನು ನಾನು ಬಿಡದೆ ಓದುತ್ತೇನೆ. ಒಬ್ಬರ ಮನಸ್ಸನ್ನು ಅರ್ಥಮಾಡಿಕೊಂಡು, ಅವರ ಕಷ್ಟ ಸುಖ, ನೋವು ನಲಿವನ್ನು ಗುರುತಿಸಿ ಸ್ಪಂದಿಸುವುದು ಕೆಲವರಿಗೆ ಮಾತ್ರ ಸಾಧ್ಯ ಬಹಳ ಜನ, ಒಬ್ಬ ವ್ಯಕ್ತಿಯ ಮನಸ್ಸಿನ ಭಾವನೆಗಳಿಗೆ ಕಿವುಡಾಗುತ್ತಾರೆ. ಕುರುಡ ರಾಗುತ್ತಾರೆ. ಮನೋವೈದ್ಯರಾಗಿ ನೀವು ಬಹಳ ಸಂವೇದನಾಶೀಲರಾಗಿ ರೋಗಿಗಳ ಮನೋ ಭಾವನೆಗಳನ್ನು ಲೇಖನಗಳಲ್ಲಿ ವಿವರಿಸುತ್ತೀರಿ. ಓದಿದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri
ಬಹಳ ಸಂತೋಷವಾಗುತ್ತದೆ. ನೆಮ್ಮದಿ ಸಿಗುತ್ತದೆ. ನನಗೆ ನನ್ನ ಸಮಸ್ಯೆಗಳನ್ನೂ ಅನಿಸಿಕೆಗಳನ್ನೂ ನಿಮ್ಮ ಮುಂದೆ ಇಡುವ ಅವಕಾಶ ಕೊಡಿ. ನನ್ನ ಪತ್ರವನ್ನು ಓದಿ, ಕೆಲವು ಸಲಹೆ-ಸಮಾಧಾನಗಳನ್ನು ಕೊಡುತ್ತೀರೆಂದು ನಂಬಿದ್ದೇನೆ.

ನಾನು ಹುಟ್ಟಿ ಬೆಳೆದದ್ದು ಹಳ್ಳಿಯೊಂದರ ಮಧ್ಯಮ ವರ್ಗದ ಕುಟುಂಬ ಒಂದರಲ್ಲಿ. ನನ್ನ ತಂದೆ ತಾಯಿಗಳು ಧರ್ಮ ಭೀರುಗಳು ಸಂಪ್ರದಾಯಸ್ಥರು. ಶಿಸ್ತು, ವಿನಯ, ಗುರು ಹಿರಿಯರಿಗೆ ಗೌರವ ಕೊಡುವಂತೆ, ಒಳ್ಳೆಯ ನಡತೆಯನ್ನು ತೋರಿಸುವಂತೆ ನನ್ನನ್ನು ತಿದ್ದಿ ಬೆಳೆಸಿದರು. ಹಿರಿಯ ಮಗಳಾದ ನಾನು ಅವರ ಅಕ್ಕರೆಯ ಕೂಸಾಗಿ ಬೆಳೆದೆ. ಹೈಸ್ಕೂಲಿನವರೆಗೆ ನನ್ನ ವಿದ್ಯಾಭ್ಯಾಸ ನಡೆಯಿತು.

ಜೀವನ ಎಂದರೇನು ಎಂಬ ಅರಿವು ಮೂಡುವ ಮೊದಲೇ ಅಂದರೆ ಹದಿನಾರನೇ ವರ್ಷ ವಯಸ್ಸಿಗೆ ನನ್ನ ಮದುವೆ ನಡೆದು ಹೋಯಿತು. ನನ್ನ ಪತಿ ದೊಡ್ಡ ಹುದ್ದೆಯಲ್ಲಿದ್ದಾರೆ. ಮದುವೆಯಾದಾಗ ಅವರ ವಯಸ್ಸು ಮೂವತ್ತು. ನಮ್ಮಿಬ್ಬರ ವಯಸ್ಸಿನ ಅಂತರ 14 ವರ್ಷ-ತುಂಬಾ ಜಾಸ್ತಿ ಅಲ್ಲವೇ ಡಾಕ್ಟರೇ ? ಮೊದಲಿನಿಂದಲೂ ನಾನು ಸ್ವಲ್ಪ ಭಾವಜೀವಿ. ಆಗಲೇ ಬಹಳ ಕಥೆ ಕಾದಂಬರಿಗಳನ್ನು ಓದುತ್ತಿದ್ದೆ. ದಾಂಪತ್ಯ ಜೀವನದ ಬಗ್ಗೆ ಬಣ್ಣ ಬಣ್ಣದ ಕಿನ್ನರ ಲೋಕವನ್ನು, ರಸಿಕ ಜೊತೆಗಾರನನ್ನು ಕಲ್ಪಿಸಿಕೊಂಡಿದ್ದೆ. ಆಗಿನ ನನ್ನ ಕಲ್ಪನೆ ಎಂದರೆ ಚೆನ್ನಾಗಿ ಸಿಂಗರಿಸಿಕೊಂಡು, ಗಂಡನೊಡನೆ ಸುತ್ತಾಡುವುದು, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು, ಯಾವ ಕೆಲಸವೂ ಇಲ್ಲದೆ, ನಿರಾಳವಾಗಿ ಕುಳಿತು ಪ್ರೀತಿ-ಅನುರಾಗದ ಸಂಭಾಷಣೆ ನಡೆಸುವುದು, ಒಬ್ಬರನ್ನೊಬ್ಬರು ಅಗಲದೆ ಸದಾ ಜೋಡಿ ಹಕ್ಕಿಗಳ ಹಾಗೆ ನಗುತ್ತಾ ನಮ್ಮದೇ ಆದ ಮನೆಯಲ್ಲಿರುವುದು, ನಮ್ಮಿಬ್ಬರಲ್ಲದೆ ಬೇರೆ ಯಾರೂ ಇರಬಾರದು, ಇನ್ಯಾವ ಬಂಧನವೂ ಇರಬಾರದುಇತ್ಯಾದಿ ಮಕ್ಕಳಾಟಿಕೆಯ ಬೇಡಿಕೆಗಳು. ನನ್ನನ್ನು ಮದುವೆ ಮಾಡಿಕೊಳ್ಳುವ ಹುಡುಗನ ರೂಪ, ಗುಣ, ನಡೆವಳಿಕೆಗಳ ಬಗ್ಗೆ ನನ್ನದೇ ಆದ ಆಸೆಗಳಿದ್ದುವು. ಆದರೆ ನನ್ನ ತಂದೆ ತಾಯಿ ಆಯ್ಕೆ ಮಾಡಿದ ವರ ನನ್ನ ಕಲ್ಪನೆಗೆ ತೀರಾ ವಿರುದ್ಧವಾಗಿದ್ದ. ಅಂದರೆ ಕುರೂಪಿಯೇನೂ ಅಲ್ಲ. ನನ್ನ ಕಲ್ಪನೆಯ ಜೊತೆಗಾರನಂತೆ ಇರಲಿಲ್ಲ ಅಷ್ಟೆ. ನಾನು ಹುಡುಗನನ್ನು ಒಪ್ಪಲು ಮೀನ ಮೇಷ ಎಣಿಸಿದಾಗ, ತಂದೆ ತಾಯಿ ಅಜ್ಜಿ ಚಿಕ್ಕಪ್ಪಂದಿರೆಲ್ಲ ನನ್ನನ್ನು ತರಾಟೆಗೆ ತೆಗೆದುಕೊಂಡರು. "ಬುದ್ಧಿ ಇಲ್ಲವೇನೇ ನಿನಗೆ, ಪೂರ್ವ ಜನ್ಮದ ಪುಣ್ಯ ನಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ಒಳ್ಳೆಯ ಸಂಬಂಧ ಸಿಕ್ಕಿರುವುದು. ಹುಡುಗ ಪ್ರತಿಭಾವಂತ. ಈ ವಯಸ್ಸಿಗೇ ದೊಡ್ಡ ಕೆಲಸದಲ್ಲಿದ್ದಾನೆ. ಯಾವ ದುಶ್ಚಟವೂ ಇಲ್ಲವಂತೆ. ಸಿಗರೇಟು ಕೂಡ ಸೇದೊಲ್ಲವಂತೆ. ಸುಮ್ಮನೆ ಒಪ್ಪಿಕೋ. ಇದಕ್ಕಿಂತ ಒಳ್ಳೆಯ ಗಂಡು ನಮ್ಮ ಜನದಲ್ಲಿ ಸಿಗೋದಿಲ್ಲ" ಎಂದು ಒತ್ತಾಯ ಹಾಕಿ, ಮದುವೆಯನ್ನು ಮಾಡಿಯೇ ಬಿಟ್ಟರು.

ನನ್ನ ಚಂದದ ಕನಸಿನ ಸೌಧ ಮದುವೆಯಾದ ಕೆಲವೇ ದಿನಗಳಲ್ಲಿ ಕುಸಿಯಿತು. ನನಗೆ ಇಷ್ಟವಿಲ್ಲದ, ಜವಾಬ್ದಾರಿ ಹೊರಲಾರದ ಸಮಯದಲ್ಲೇ ನಾನು ಗರ್ಭಧರಿಸಿದೆ. "ಬೇಗ ನಮಗೆ ಮಗು ಬೇಡಾರಿ, ಎರಡು ಮೂರು ವರ್ಷ ಹಾಯಾಗಿರೋಣ" ಎಂದು ನನ್ನ ಪತಿಗೆ ಹೇಳಿದಾಗ ಅವರು 'ನೋಡೇ, ನನಗೆ ಈಗ ಮೂವತ್ತು ವರ್ಷ ಆಯಿತು. ಈಗ ಮಗುವಾದರೆ, ನನಗೆ ಐವತ್ತು, ಐವತ್ತೈದು ವರ್ಷ ವಯಸ್ಸಾಗುವ ವೇಳೆಗೆ, ಆ ನಮ್ಮ ಮಗನಿಗೆ ಇಪ್ಪತ್ತು ಇಪ್ಪತ್ತೈದು ವರ್ಷವಾಗಿರುತ್ತದೆ. ರಿಟೈರ್ ಆಗೋದರೊಳಗೆ ಆತ ಒಂದು ನೆಲೆಗೆ ಬಂದು ನಮ್ಮನ್ನು ಸಾಕುತ್ತಾನೆ. ಮಗಳಾದರೆ, ಅಷ್ಟುಹೊತ್ತಿಗೆ ಮದುವೆಯಾಗಿ ನಮ್ಮ ಜವಾಬ್ದಾರಿ ಕಳೆದಿರುತ್ತದೆ. ಮಗುವಾಗುವುದು ಮೂರು ನಾಲ್ಕು ವರ್ಷ ತಡವಾದರೆ, ನಾನು ರಿಟೈರ್ ಆದ ಮೇಲೂ, ನನ್ನ ಮಕ್ಕಳು ನನ್ನ ಮೇಲೇ ಅವಲಂಬಿತರಾಗಿರುತ್ತಾರೆ. ಅದು ನನಗಿಷ್ಟವಿಲ್ಲ. ನೀನೇ ಯೋಚಿಸು" ಎಂದು ನನ್ನ ಬಾಯಿ ಮುಚ್ಚಿಸಿದರು. ಮದುವೆಯ ಮೊದಲ ವಾರ್ಷಿಕೋತ್ಸವ ದಿನದಂದು ನಾನಾಗಲೇ ಒಂದು ತಿಂಗಳ ಮಗುವಿನ ತಾಯಿಯಾಗಿದ್ದೆ. ಆಗ ನಾನು ಆ ಪರಿಸ್ಥಿತಿಗೆ ಹೊಂದಿಕೊಳ್ಳಲು ಎಷ್ಟು ಕಷ್ಟಪಟ್ಟೆನೆಂಬುದು, ಕೈಹಿಡಿದ ನನ್ನ ಪತಿಗೆ ಅರಿವಿರಲಿಲ್ಲ. ನನ್ನ ವಯಸ್ಸಿನ ನನ್ನ ಸ್ನೇಹಿತರು ಆರಾಮವಾಗಿ ಕಾಲೇಜಿಗೆ ಹೋಗುತ್ತಾ, ಸಂತೋಷವಾಗಿದ್ದ ಅವಧಿಯಲ್ಲಿ ನಾನು ಅಳುವ ಮಗುವನ್ನು ಸುಧಾರಿಸುತ್ತಾ ಮನೆಕೆಲಸ ಮಾಡುತ್ತಾ ಮನೆಯೊಳಗೆ ಬಂದಿಯಾಗಿದ್ದೆ. "ಅದೃಷ್ಟವಂತೆ, ಗಂಡುಮಗುವಿನ ತಾಯಿ" ಎಂದು ಇತರರು ಉದ್ಗರಿಸಿದಾಗ, ನನಗೆ ಸಿಟ್ಟು ಬರುತ್ತಿತ್ತು, ನನ್ನಂತಹ ದುರದೃಷ್ಟವಂತೆ ಬೇರಿಲ್ಲ ಎಂದು ಚೀರಬೇಕು ಎನಿಸುತ್ತಿತ್ತು.

ಮುಂದೆ ಐದು ವರ್ಷಗಳಲ್ಲಿ ಮತ್ತೆ ಇನ್ನೊಂದು ಮಗುವಾಯಿತು. ಈ ಮಧ್ಯೆ ನನ್ನ ಒತ್ತಾಯದ ಮೇರೆಗೆ ಮೂರು ಬಾರಿ ವೈದ್ಯಕೀಯ ಗರ್ಭಪಾತ ಆಯಿತು. ಆಗ ನನ್ನ ಅಂತರಂಗವನ್ನು ಅರಿತು, ಪ್ರೀತಿಸುವ ರಸಿಕ ಬಾಳ ಸಂಗಾತಿಗಾಗಿ ಹಂಬಲಿಸಿದೆ, "ದಯವಿಟ್ಟು ಒಂದೇ ಒಂದು ದಿನವಾದರೂ,

Sri Vidyabharathi Book Centre, Sringeri

CC-O. In Public Domain. Digitized by eGangotri
ಮನೆಯಲ್ಲಿ ನನ್ನ ಜೊತೆಗಿರಿ ಮನಸ್ಸಿಗೇನೋ ಬೇಜಾರು" ಎಂದು ನನ್ನ ಪತಿಯನ್ನು ಬೇಡಿಕೊಂಡೆ. ಅವರು ನನ್ನ ಬೇಡಿಕೆಯನ್ನು ಅರ್ಥ ಮಾಡಿ ಕೊಳ್ಳಲೇ ಇಲ್ಲ. 'ಇದೇನಿದು, ಈ ನಿನ್ನ ಹುಚ್ಚು ಮಾತು. ಮನೆಯಲ್ಲಿದ್ದು ಕೊಂಡು ನಾನು ಏನು ಮಾಡಲಿ ? ಬೆಳಗಿನಿಂದ ಸಂಜೆಯವರೆಗೆ ಮನೆಯಲ್ಲಿದ್ದರೆ ನನ್ನ ತಲೆ ಕೆಡುತ್ತದೆ ಅಷ್ಟೆ. ನನ್ನ ಮೊದಲ ಪ್ರಾಶಸ್ತ್ಯ ನನ್ನ ಉದ್ಯೋಗಕ್ಕೆ. ಕೆಲಸ ಕರ್ತವ್ಯಗಳನ್ನು ಬಿಟ್ಟು ರಜೆ ಹಾಕಿ ಮನೆಯಲ್ಲಿ ಕುಳಿತರೆ ನೋಡಿದವರು ಏನೆಂದಾರು. ಹೋಗು ನಿನ್ನ ಕೆಲಸ ನೋಡು" ಎಂದು ಬಿಡುತ್ತಿದ್ದರು. ಸದಾ ಆಫೀಸು...ಕೆಲಸ.. ಪ್ರವಾಸ...ಪ್ರಮೋಶನ್ ..ಇದೇ ಅವರ ಪ್ರಪಂಚವಾಯಿತು. ನನ್ನ ಆಸೆ ಆಕಾಂಕ್ಷೆಗಳಿಗೆ, ಬಯಕೆ ಬೇಡಿಕೆಗಳಿಗೆ ಅವರು ಸ್ಪಂದಿಸಲೇ ಇಲ್ಲ. ಇದಕ್ಕೆ ನಮ್ಮ ವಯಸ್ಸಿನ ಅಂತರವೇ ಕಾರಣ ಎಂದು ನನ್ನ ಅನಿಸಿಕೆ. ನನಗಿಂತ ಎರಡೋ ಮೂರೋ ವರ್ಷದಷ್ಟು ದೊಡ್ಡವನಾದ ಪತಿ ಸಿಕ್ಕಿದ್ದರೆ...

ನನ್ನ ಭಾವನೆಗಳೇ ಬೇರೆ. ಅವರ ಭಾವನೆಗಳೇ ಬೇರೆ. ನಾನು ತುಂಬಾ ಭಾವನಾಜೀವಿ. ಹಗಲುಗನಸು ಕಾಣುವವಳು. ಅವರು ತುಂಬಾ ಗಂಭೀರ, ಪ್ರೌಢರಾಗಿದ್ದಾರೆ. ಯಾವಾಗಲೂ ಸ್ಥಿತ ಪ್ರಜ್ಞರಂತೆ ಇರುತ್ತಾರೆ. ನಾನೋ ಸ್ವಲ್ಪ ಚೆಲ್ಲು ಚೆಲ್ಲಾಗಿ, ತಮಾಷೆ ಮಾಡುತ್ತಾ ನಕ್ಕು ನಲಿಯ ಬೇಕೆನ್ನುವವಳು. ಹೀಗಾಗಿ ನನ್ನ ಅವರ ನಡುವೆ ಆತ್ಮೀಯತೆಯ ಭಾವ ಮೊಳೆಯಲೇ ಇಲ್ಲ. ನನಗೆ ಅವರನ್ನು ಕಂಡರೆ ಗೌರವ, ಭಕ್ತಿ, ಭಯ ಇದೆ. ಆದರೆ ಸಲಿಗೆಯಾಗಲೀ, ಹೃತ್ಪೂರ್ವಕ ಸ್ನೇಹವಾಗಲೀ ಇಲ್ಲ ಎಂದು ಕಂಡು ಕೊಂಡಾಗ ತುಂಬಾ ನಿರಾಶೆಯಾಗುತ್ತದೆ. ನನ್ನ ಈ ಅಳಲನ್ನು ಅವರಿಗೆ ಹೇಳಿದರೆ "ನೋಡು ನೀನು ತುಂಬಾ ಕಥೆ ಕಾದಂಬರಿಗಳನ್ನು ಓದಿ ಕಲ್ಪನಾ ಲೋಕದಲ್ಲೇ ಇರುತ್ತೀಯ. ಈ ಜೀವನ ಸುಂದರವಾದ ಸಿನಿಮಾ ಅಲ್ಲ. ಹೂವಿನ ಹಾಸಿಗೆ ಅಲ್ಲ. ಜವಾಬ್ದಾರಿ ಬೆಳೆಸಿಕೋ" ಎಂದು ಉಪದೇಶ ಮಾಡುತ್ತಾರೆ.

ಸದಾ ಅತೃಪ್ತಳಾದ ನಾನು ಮಂಕಾಗಿಬಿಟ್ಟೆ. ಆಗಾಗ ಮನೆಯವರ ಮೇಲೆ ಕೋಪದಿಂದ ಕೂಗಾಡತೊಡಗಿದೆ. ಮೃದುವಾದ ಮಲ್ಲಿಗೆಯಂತಿದ್ದ ನಾನು ಮುಳ್ಳಿನಂತೆ ಕಠಿಣಳಾದೆ. ನನ್ನ ಈ ಬದಲಾವಣೆ ನನಗೇ ಜಿಗುಪ್ಸೆ ತರಿಸಿತು. ನನ್ನ ಬಗ್ಗೆ ತಿರಸ್ಕಾರ ಮೂಡಲಾರಂಭಿಸಿತು. ಆತ್ಮವಿಶ್ವಾಸ ಕಳೆದುಕೊಳ್ಳತೊಡಗಿದೆ. ಹೀಗೆ ಬದುಕು ಯಾಂತ್ರಿಕವಾಗಿ, ಅನಾಕರ್ಷಣೀಯ ವಾಗಿ ಬಿಟ್ಟಿತು.
Sri Vidyabharathi Book Centre, Sringeri

CC-O. In Public Domain. Digitized by eGangotri

ಮದುವೆಯಾದ ಹತ್ತು ವರ್ಷಗಳು ಈ ರೀತಿಯ ಜಂಜಾಟದಿಂದ ಕಳೆದುವು. ಕಳೆದ ಮೂರು ವರ್ಷಗಳಿಂದ ಮತ್ತೊಂದು ಹೊಸ ಸಮಸ್ಯೆ ಎದುರಾಗಿದೆ. ಈಗ ನನ್ನವರಿಗೆ ನಲವತ್ತು ಮೂರು ವರ್ಷ ವಯಸ್ಸು. ಅವರಿಗೆ ಲೈಂಗಿಕ ಚಟುವಟಿಕೆಯಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಬಂದಿದೆ. ತಿಂಗಳಿಗೆ ಒಂದು ಸಲವೋ, ಎರಡು ಸಲವೋ ಕೂಡಿದರೆ ಮುಗಿಯಿತು. ಉಳಿದೆಲ್ಲ ದಿವಸಗಳಲ್ಲಿ ನನ್ನಿಂದ ದೂರವೇ ಇರುತ್ತಾರೆ. ಮಕ್ಕಳು ದೊಡ್ಡವರಾಗು ತ್ತಿದ್ದಾರೆ. ಮಗನಿಗೆ ಹನ್ನೆರಡು ವರ್ಷ. ಈಗಲೂ ನಿನಗೆ ಆಸೆಯೇ ಎನ್ನುತ್ತಾರೆ. ನನ್ನ ವಯಸ್ಸು ಇಪ್ಪತ್ತೊಂಭತ್ತು ಮಾತ್ರ ಎಂಬುದನ್ನು ಮರೆಯುತ್ತಾರೆ. ಈಗ ಅವರಿಗೆ ಕೆಲಸದ ಜೊತೆಗೆ, ಸ್ನೇಹಿತರು, ಕಾರ್ಡ್ಸ್, ಸಂಘದ ಚಟುವಟಿಕೆ, ರಾಜಕೀಯ ಹೀಗೆ ಕೆಲವಾರು ಹವ್ಯಾಸಗಳು. ಮನೆಗೆ ಬರುವುದೇ ಎಂಟೂವರೆ, ಒಂಭತ್ತಕ್ಕೆ. ಬರುವಾಗಲೇ ಆಯಾಸ, ಸುಸ್ತು ಎಂದು ಬರುತ್ತಾರೆ. ಊಟ ಮಾಡಿದ ಕೂಡಲೇ, ಹಾಸಿಗೆ ಸೇರಿ ಗೊರಕೆ ಹೊಡೆಯುತ್ತಾರೆ. ನಾನು ನನ್ನ ಆಸೆ, ಬಯಕೆಗಳನ್ನೆಲ್ಲಾ ನನ್ನ ಮುಂದೆ ಗುಡ್ಡೆ ಹಾಕಿಕೊಂಡು ಕೂರುತ್ತೇನೆ. ಅತೃಪ್ತಿ ಅಸಮಾಧಾನಗಳಿಂದ ಎಷ್ಟೋ ಸಲ ತಲೆಯನ್ನು ಗೋಡೆಗೆ ಗಟ್ಟಿಸಿದ್ದೇನೆ. ಬಿಕ್ಕಳಿಸಿದ್ದೇನೆ. ಅತ್ತಿದ್ದೇನೆ.

ಇಂತಹ ಸಂದರ್ಭದಲ್ಲಿ, ಮನೆಯಲ್ಲಿ ಸಿಗದ ಸುಖ ಸಂತೋಷವನ್ನು, ಹೊರಗಡೆ, ವಿವಾಹೇತರ ಸಂಬಂಧ ಮಾಡಿ, ಪಡೆಯುವ ಹಕ್ಕು (?) ಗಂಡಸಿಗಿದೆ. ಅದನ್ನು ಯಾರೂ ಆಕ್ಷೇಪಿಸುವುದಿಲ್ಲ. ಅದೇ ಹೆಣ್ಣಾದರೆ, ಇದು ಖಂಡಿತಾ ಸಾಧ್ಯವಿಲ್ಲ. ಅಕಸ್ಮಾತ್ ಪಡೆಯಲು ಯತ್ನಿಸಿದರೆ ಆಕೆ ಯನ್ನು ಪಾಪಿ, ಕಳಂಕಿನಿ, ದುಷ್ಟೆ ಎಂದು ಗಂಡನಿಂದ ಹಿಡಿದು, ಬೀದಿ ನಾಯಿಯವರೆಗೆ ಎಲ್ಲರೂ ಅವಹೇಳನ ಮಾಡಿ ಹೊರಕ್ಕೆ ಅಟ್ಟಿ ಬಿಡುತ್ತಾರೆ. ಆಸೆ ಬಯಕೆಗಳು ಗಂಡಾಗಲೀ ಹೆಣ್ಣಾಗಲೀ ಇಬ್ಬರಿಗೂ ಸಮಾನ ಎಂದು ಸಮಾಜ ಅರ್ಥ ಮಾಡಿಕೊಳ್ಳುವುದಿಲ್ಲ. ಅಂದರೆ ನಾನು ವಿವಾಹೇತರ ಸಂಬಂಧಕ್ಕಾಗಿ ಇಷ್ಟಪಡುತ್ತೇನೆ ಎಂದು ತಿಳಿಯಬೇಡಿ. ವಾದಕ್ಕಾಗಿ ಈ ಮಾತು ಹೇಳಿದೆ ಅಷ್ಟೆ. ಕಷ್ಟವಾದರೂ ನೈತಿಕ ಮೌಲ್ಯಗಳಿಗೆ ಬೆಲೆ ಕೊಡು ವವಳು ನಾನು. ಮಾನಕ್ಕಾಗಿ ಪ್ರಾಣವನ್ನಾದರೂ ಕೊಟ್ಟೇನು.

ತಿಂಗಳಿಗೊಮ್ಮೆ ಅಥವಾ ಎರಡು ಸಲ ಬರುತ್ತಿದ್ದ ಸಮಾಗಮ ಕ್ಷಣಕ್ಕೆ ನಾನು ಕಾತರಿಸುತ್ತಿದ್ದರೂ ಅವರಿಗೆ ಇದೊಂದು ಯಾಂತ್ರಿಕ ಚಟುವಟಿಕೆ. ದಿನದ ಎಲ್ಲ ಕೆಲಸಗಳಂತೆ ಇದೂ ಒಂದು ಎಂದು ಕೆಲವೇ ಕ್ಷಣಗಳಲ್ಲಿ ಮಾಡಿ ಮುಗಿಸುತ್ತಿದ್ದ ಅವರ ಅರಸಿಕತನವನ್ನು ಕಂಡು ಸಿಟ್ಟಿನಿಂದ ಕುದಿಯುತ್ತಿದ್ದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ವಯಸ್ಸಿಗೆ ಸರಿಯಾದ ಪತಿಯನ್ನು ಪಡೆದಿದ್ದರೆ ಎಂದು ಯೋಚಿಸಿ, ಖಿನ್ನಳಾಗುತ್ತಿದ್ದೆ. ನಾನು ಯಾರನ್ನು ನಿಂದಿಸಲಿ, ವಯಸ್ಸಾಯಿತೆಂದು ತಿಳಿಯುವ ಗಂಡನನ್ನೇ, ಆತನನ್ನು ಆಯ್ಕೆ ಮಾಡಿ, ನನಗೆ ಗಂಟು ಹಾಕಿದ ತಂದೆತಾಯಿಗಳನ್ನೇ, ನನ್ನ ವಿಧಿಯನ್ನೇ...? ನನ್ನ ಪ್ರೌಢಸ್ಥಿತಿಯಲ್ಲಿರುವ ಯೌವನ .. ಇವರ ಇಳಿಯುತ್ತಿರುವ ಸಾಮರ್ಥ್ಯ...ಇದು ಯಾರ ತಪ್ಪು ?

ಈ ಬಗೆಯ ನೋವು–ನಿರಾಶೆ, ಮನಸ್ಸಿನೊಳಗೇ ಹೆಪ್ಪುಗಟ್ಟಿದ ಕಾಮನೆಗಳು, ಹೊರಗೆ ತೋರಲಾಗದ ಸಿಟ್ಟು–ಇವುಗಳ ನಡುವೆ ಬದುಕು ಸಾಗಿಸಿದ ನನಗೆ ಕಳೆದ ಮೂರು ತಿಂಗಳಿಂದ ಮೈ ಮನಸ್ಸೆಲ್ಲಾ ಮರಗಟ್ಟಿದಂತೆ ಜಡವಾದಂತೆ ಭಾಸವಾಗುತ್ತದೆ. ಶಕ್ತಿಯೇ ಇಲ್ಲದಂತೆ, ಉತ್ಸಾಹವೇ ಇಲ್ಲದಂತಾಗಿ ಬಿಟ್ಟಿದೆ. ಲೈಂಗಿಕ ಬಯಕೆಯ ಬೆಂಕಿಯೂ ತಣ್ಣಗಾಗಿದೆ. ನನ್ನ ಪತಿಯೊಂದಿಗೆ ಸೇರಲಿ, ಸೇರದಿರಲಿ ಎಲ್ಲವೂ ಒಂದೇ ಎನಿಸುತ್ತಿದೆ. ಸುಖವಿಲ್ಲ, ದುಃಖವಿಲ್ಲ, ನೋವಿಲ್ಲ, ನಲಿವಿಲ್ಲ. ಜೀವನ ಇತ್ತ ಸುಂದರವೂ ಇಲ್ಲ, ಅಸಹ್ಯವೂ ಇಲ್ಲ. ನಿರ್ಲಿಪ್ತ ಭಾವನೆ ಬಂದು ಬಿಟ್ಟಿದೆ. ಇದು ಸರಿಯೋ ನನಗೆ ಗೊತ್ತಾಗುತ್ತಿಲ್ಲ. ನನ್ನ ಮನಸ್ಸಿನ ಈ ಸ್ಥಿತಿ ಹೀಗೇ ಮುಂದುವರೆಯಲೀ ಅಥವಾ ಪ್ರಯತ್ನ ಪೂರ್ವಕವಾಗಿ ಬದಲಿಸಬೇಕೋ ತಿಳಿಯುತ್ತಿಲ್ಲ. ಇದು ಈ ಚಿಕ್ಕವಯಸ್ಸಿಗೇ ಕಾಲಿಟ್ಟ ವೈರಾಗ್ಯವೇ. ಪರಿಸ್ಥಿತಿಗೆ ಹೊಂದಿಕೊಳ್ಳುವ ಮೈಮನಸ್ಸಿನ ಹುನ್ನಾರೇ. ನೀವೇ ಹೇಳಬೇಕು."

*　　*　　*

ಹೀಗೆ ಕಿಶೋರ ವಯಸ್ಸಿನಲ್ಲೇ ದಾಂಪತ್ಯ ಜೀವನಕ್ಕೆ ಕಾಲಿಡಬೇಕಾದ ಹುಡುಗಿಯರು ಸಾಕಷ್ಟು ನೋವು ಸಮಸ್ಯೆಗಳನ್ನು ಅನುಭವಿಸುತ್ತಾರೆ. ಲೈಂಗಿಕ ಚಟುವಟಿಕೆಗೆ ಅವರ ದೇಹ ಸಿದ್ಧವಾಗಿದ್ದರೂ, ಮನಸ್ಸು ಸಿದ್ಧವಾಗಿರದೆ ಅನೇಕ ಬಗೆಯ ಕಷ್ಟ ಕೋಟಲೆಗೆ ತುತ್ತಾಗುತ್ತಾರೆ. ಸುಖ ಸಂತೋಷವನ್ನು ಕೊಡಬೇಕಾದರೆ ಲೈಂಗಿಕ ಕ್ರಿಯೆ ಅವರ ಪಾಲಿಗೆ ತೊಂದರೆದಾಯಕ ಅನಿಷ್ಟವಾಗುತ್ತದೆ. ಹೂವಾಗಿ ಅರಳಬೇಕಾದ ದಾಂಪತ್ಯ, ಅರಳುವ ಮೊದಲೇ ಬಾಡಿ ಹೋಗಬಹುದು. ದಾಂಪತ್ಯವಿರಸ, ಮನಸ್ತಾಪ, ಜಗಳ ನಿತ್ಯ ಕಟ್ಟಳೆಯಾಗಿ, ದಂಪತಿಗಳ ಜೀವನ ನರಕ ಸದೃಶವಾಗಬಹುದು.

ಅಂದ ಬಳಿಕ ಹದಿಹರೆಯದಲ್ಲಿ ಮದುವೆಯಾಗುವುದನ್ನು ತಡೆಗಟ್ಟಬೇಕು. ವ್ಯಕ್ತಿ ಹೆಣ್ಣಾಗಲೀ, ಗಂಡಾಗಲೀ ಪ್ರೌಢ ವಯಸ್ಸಿಗೆ ಬಂದ ನಂತರವೇ ದಾಂಪತ್ಯ ಜೀವನಕ್ಕೆ ಕಾಲಿಡುವುದು ಅಪೇಕ್ಷಣೀಯ. ಹರೆಯದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ನೆಲೆಯನ್ನೇ ಇನ್ನೂ ಸರಿಯಾಗಿ ಕಂಡುಕೊಳ್ಳಲಾಗದೆ ಚಡಪಡಿಸುವ ವ್ಯಕ್ತಿಗೆ, ಸಂಸಾರದ ನೊಗವನ್ನು ಕುತ್ತಿಗೆಯ ಮೇಲಿಟ್ಟರೆ ಅನಾಹುತವಾಗುತ್ತದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಪತ್ರ ಬರೆದಿರುವ ಮಹಿಳೆ ಖಿನ್ನತೆಯಿಂದ ಬಳಲುತ್ತಿದ್ದಾಳೆ. ಮಾನಸಿಕ ನೋವು ನಿರಾಶೆಗಳಿಂದ ಉಂಟಾದ ಖಿನ್ನತೆಯಲ್ಲಿ ವ್ಯಕ್ತಿ ದುಃಖ, ನಿರಾಸಕ್ತಿ, ಅಸಹಾಯಕತೆ, ಲೈಂಗಿಕ ನಿರಾಸಕ್ತಿ ಅಥವಾ ದುರ್ಬಲತೆ, ಕೀಳರಿಮೆ, ಸ್ವಹತ್ಯೆಯ ಆಲೋಚನೆ ಮತ್ತು ಪ್ರಯತ್ನಗಳಿಂದ ವೈದ್ಯರ ನೆರವನ್ನು ಕೇಳುತ್ತಾನೆ. ನೋವು ನಿರಾಶೆಯ ವಿಶ್ಲೇಷಣೆ, ಸಂಬಂಧ ಪಟ್ಟವರ ಸಹಕಾರ, ಪರಿಸರದ ಬದಲಾವಣೆ, ಆತ್ಮೀಯರ ಪ್ರೀತಿವಿಶ್ವಾಸ, ಆಸರೆ ಮತ್ತು ವೈದ್ಯರ ಸಲಹೆ–ಸಹಾನುಭೂತಿ ಹಾಗೂ ಖಿನ್ನತೆ ನಿವಾರಕ ಔಷಧಗಳಿಂದ ಖಿನ್ನತೆ ಕಡಿಮೆಯಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹರೆಯದವರ ಅವಶ್ಯಕತೆಗಳು

ಹರೆಯದವರು ತಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡು ಅದನ್ನು ವೃದ್ಧಿಸಲು ಹಾಗೂ ಪ್ರೌಢರಾಗಿ ಬೆಳೆಯಲು ಹಿರಿಯರು ತಕ್ಕ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗುತ್ತದೆ. ಈ ವಯಸ್ಸಿನ ಸಹಜವಾದ ಗೊಂದಲವನ್ನು ನಿವಾರಿಸಿಕೊಂಡು, ವ್ಯಕ್ತಿತ್ವ ಪರಿಪೂರ್ಣವಾಗಿ ವಿಕಾಸ ಗೊಳ್ಳಲು ನೆರವಾಗಬೇಕಾಗುತ್ತದೆ. ಹರೆಯ ಹಲವು ಬದಲಾವಣೆ ಮತ್ತು ಬೆಳವಣಿಗೆಯ ಪರ್ವವಾದ್ದರಿಂದ, ಇದಕ್ಕೆ ಪೂರಕವಾಗುವಂತಹ ಅಂಶಗಳು, ಪ್ರಚೋದನೆಗಳು ಪರಿಸರದಲ್ಲಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ತಂದೆ ತಾಯಿಗಳ, ಹಿರಿಯ ಸೋದರ ಸೋದರಿಯರ, ಶಿಕ್ಷಕರ ಮತ್ತು ಕುಟುಂಬದ ಪಾತ್ರ ಬಹಳ ಮಹತ್ವದ್ದಾಗುತ್ತದೆ.

ಮಾನ್ಯತೆ : ಬಾಲ್ಯ ಕಳೆದು ಹರೆಯದ ಹೊಸ್ತಿಲಲ್ಲಿ ನಿಂತ ಹುಡುಗ, ಹುಡುಗಿಯ ಬೆಳವಣಿಗೆಯ ಈ ಹಂತವನ್ನು ಗುರುತಿಸಿ ಅದಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. "ನೀವು ಈಗ ದೊಡ್ಡವರಾಗುತ್ತಿದ್ದೀರಿ. ನಿಮ್ಮ ಸ್ಥಾನಮಾನದಲ್ಲಿ ಬದಲಾವಣೆ ಆಗಲಿದೆ. ಅದನ್ನು ನಾವು ಮಾನ್ಯ ಮಾಡುತ್ತೇವೆ" ಎಂದು ಸಮಾಜ ಹೇಳಬೇಕಾಗುತ್ತದೆ. ತಮ್ಮ ಮಕ್ಕಳು ಹರೆಯಕ್ಕೆ ಕಾಲಿಟ್ಟದ್ದನ್ನು ಮಾನ್ಯ ಮಾಡಲು ಜಗತ್ತಿನಾದ್ಯಂತ ಅನೇಕ ಜನಾಂಗಗಳಲ್ಲಿ ನಿರ್ದಿಷ್ಟ ಬಗೆಯ ಸಂಪ್ರದಾಯ–ಸಮಾರಂಭಗಳಿವೆ. ಕೆಲವು ಬುಡಕಟ್ಟಿನ ಜನಾಂಗಗಳಲ್ಲಿ ಹರೆಯಕ್ಕೆ ಬಂದವರನ್ನು ಮೂರು ದಿವಸಗಳ ಕಾಲ ಪ್ರತ್ಯೇಕ ವಸತಿಯಲ್ಲಿಟ್ಟು, ಉಪವಾಸವಿರಿಸಿ ಇತರ ಕಟ್ಟು–ಕಟ್ಟಳೆಗಳನ್ನು ವಿಧಿಸುತ್ತಾರೆ. ಅನಂತರ ಇಡೀ ಸಮುದಾಯವೇ ಸೇರುವ ಸಮಾರಂಭವನ್ನೇರ್ಪಡಿಸಿ, ಕುಣಿದು ಹಾಡಿ, ಮೋಜು ಮಾಡಿ, ಸಂಭ್ರಮ ಪಡಲಾಗುತ್ತದೆ. ಹರೆಯದವರಿಗೆ ಗುಂಪಿನ ಯಜಮಾನ ಕರ್ತವ್ಯ–ಕೆಲಸಗಳನ್ನು ವಿವರಿಸಿ, ಪ್ರೌಢರಾಗುವ ಜವಾಬ್ದಾರಿಯನ್ನು ಹೊರಿಸುತ್ತಾನೆ. ದೊಡ್ಡವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲ್ಲುವ ಸಕಲ ಮರ್ಯಾದೆ ಸವಲತ್ತುಗಳು ಈಗ ಅವರಿಗೂ ಸಿಗುತ್ತವೆ ಎಂದು ಘೋಷಿಸುತ್ತಾನೆ. ಈ ತತ್ವವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ತಂದೆತಾಯಿಗಳು ಮತ್ತು ಇತರರು ಹರೆಯಕ್ಕೆ ಕಾಲಿಟ್ಟ ಹುಡುಗನಿಗೆ; ಹುಡುಗಿಗೆ ಪ್ರಾಮುಖ್ಯತೆ ಕೊಡಬೇಕು. ಹಿಂದಿನಂತೆ 'ನೀನು ಇನ್ನೂ ಮಗು, ಏನನ್ನೂ ಅರಿಯದ ಹಸುಳೆ, ಅಸಹಾಯಕ' ಎನ್ನಬಾರದು. ಮನೆಯ ಕೆಲಸ ಕಾರ್ಯಗಳಲ್ಲಿ, ಮನೆವಾರ್ತೆಯಲ್ಲಿ ಅವರಿಗೆ ಸ್ವಲ್ಪ ಸ್ವಲ್ಪವಾಗಿ ಜವಾಬ್ದಾರಿ ಕೊಡಬೇಕು. ನಿರ್ಧಾರಗಳನ್ನು ಕೈಗೊಳ್ಳುವಾಗ (ಉದಾಹರಣೆಗೆ ಮನೆಗೆ ದೀರ್ಘ ಕಾಲ ಬಾಳಿಕೆ ಬರುವ ವಸ್ತುಗಳನ್ನು ತರುವಾಗ, ಉಳಿತಾಯದ ಹಣವನ್ನು ವಿಲೇವಾರಿ ಮಾಡುವಾಗ, ಚಿಕ್ಕವರ ವಿದ್ಯಾಭ್ಯಾಸದ ಬಗ್ಗೆ ಇತ್ಯಾದಿ) ಹದಿಹರೆಯದವರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕೊಡಬೇಕು. ಹೀಗೆ ಹದಿಹರೆಯದವರನ್ನು ಕುಟುಂಬದ ಜವಾಬ್ದಾರಿ ಸದಸ್ಯರೆಂದು ಮಾನ್ಯ ಮಾಡಬೇಕು. ಇದರಿಂದ ಅವರು ಸಂತುಷ್ಟರಾಗುವುದಲ್ಲದೆ, ಹಿರಿಯರೊಂದಿಗೆ ಹೆಗಲು ಕೊಟ್ಟು ದುಡಿಯಲು, ಕೌಶಲ ಚತುರತೆಗಳನ್ನು ಕಲಿಯಲು ಉತ್ಸಾಹ ತೋರಿಸುತ್ತಾರೆ. ತಮ್ಮ ತನವನ್ನು ಗುರುತಿಸಿಕೊಳ್ಳುತ್ತಾರೆ.

ಸ್ವಾತಂತ್ರ್ಯ : "ಹರೆಯದವರಿಗೆ ಸಲಿಗೆ ಕೊಟ್ಟರೆ, ತಲೆಯ ಮೇಲೇರಿ ಕುಳಿತುಕೊಳ್ಳುತ್ತಾರೆ. ಅವರಿಗೆ ಸ್ವಾತಂತ್ರ್ಯ ಕೊಟ್ಟರೆ, ಸ್ವೇಚ್ಛಾ ಪ್ರವೃತ್ತಿಗಿಳಿದು ಅಡ್ಡದಾರಿ ಹಿಡಿದು ಹಾಳಾಗುತ್ತಾರೆ. ಅವರನ್ನು ಹದ್ದು ಬಸ್ತಿನಲ್ಲಿಡಬೇಕು" ಎನ್ನುವ ಹಿರಿಯರಿಗೆ ಕೊರತೆ ಇಲ್ಲ. ಆದರೆ ಇದು ಅತಿರಂಜಿತ, ಕಾಲ್ಪನಿಕ ಭಯ ಎನ್ನದೆ ವಿಧಿ ಇಲ್ಲ. ಮಕ್ಕಳೇನೋ ಅಸಹಾಯಕರು, ಬುದ್ಧಿ ಅನುಭವದ ಕೊರತೆಯಿಂದಾಗಿ ಅವರು ದೊಡ್ಡವರ ರಕ್ಷಣೆಯಲ್ಲೇ ಇರಬೇಕಾಗುತ್ತದೆ. ಸರಿ ತಪ್ಪುಗಳ ವಿವೇಚನೆ, ಒಳ್ಳೆಯ ನಿರ್ಧಾರ, ಕೆಟ್ಟ ನಿರ್ಧಾರಗಳ ಅಂತರ ಗೊತ್ತಿಲ್ಲ. ಆದ್ದರಿಂದ ಅವರು ಪರಾವಲಂಬಿಗಳಾಗಿರುವುದೇ ಕ್ಷೇಮ. ಆದರೆ ಹರೆಯದವರು...? ತುಟಿಯ ಮೇಲೆ ಮೀಸೆ ಮೂಡುವ ವಯಸ್ಸಿನಲ್ಲಿ, ಕಾಲ ದೇಶ ಕಾಣುವುದಿಲ್ಲ ಎಂಬ ಗಾದೆ ಇದೆ, ಅಂದರೆ ಅವರು ದುಡುಕುತ್ತಾರೆ. ತಮಗೆ ಅರಿವಿಲ್ಲದಂತೆಯೋ ತಪ್ಪು ಮಾಡುತ್ತಾರೆ. ಆದ್ದರಿಂದ ಅವರಿಗೆ ಸ್ವಾತಂತ್ರ್ಯ ಸಲ್ಲದು ಎನ್ನಲಾಗುತ್ತದೆ. ಅವರನ್ನು ಮಕ್ಕಳಂತೆಯೇ ಪರಿಗಣಿಸಲಾಗುತ್ತದೆ. ಕೆಲವು ತಂದೆ ತಾಯಿಗಳು ಹರೆಯದವರಿಗೆ ಸಣ್ಣ ಪುಟ್ಟ ಸ್ವಾತಂತ್ರ್ಯವನ್ನೂ ಕೊಡುವುದಿಲ್ಲ. ಒಂದು ಪುಸ್ತಕ ಖರೀದಿ ಮಾಡಬೇಕಾಗಲೀ, ಒಂದು ಬಟ್ಟೆ ಕೊಂಡುಕೊಳ್ಳಬೇಕಾಗಲೀ

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಅವರೇ ಮಾಡುತ್ತಾರೆ. ಹರೆಯದ ಮಗ/ಮಗಳಿಗೆ ಅದನ್ನು ಬಿಟ್ಟು ಕೊಡುವುದಿಲ್ಲ. 'ಅವನಿಗೇನು ಗೊತ್ತಾಗುತ್ತೆ. ಹೆಚ್ಚು ಹಣ ತೆತ್ತು ಕಳಪೆ ವಸ್ತು ತರುತ್ತಾನೆ' ಎಂದು ಮೂದಲಿಸುತ್ತಾರೆ. ಅವನು ಯಾವ ಶಾಲೆಗೆ ಸೇರಬೇಕು, ನಂತರ ಯಾವ ಐಚ್ಛಿಕ ವಿಷಯ ತೆಗೆದುಕೊಳ್ಳಬೇಕು, ಯಾವ ಉದ್ಯೋಗ ಮಾಡಬೇಕು ಎಲ್ಲವನ್ನೂ ತಂದೆ ತಾಯಿಗಳೇ ನಿರ್ಧರಿಸುತ್ತಾರೆ. ಹರೆಯದವರ ಆಸೆ, ಆಸಕ್ತಿಗೆ ಎರಡನೇ ಸ್ಥಾನ. ಆದರೆ ಹರೆಯದವರು ಬಾಲ್ಯದ ಪರಾವಲಂಬಿತನದ ನೊಗ ಕಳಚಿ, ಸ್ವಾತಂತ್ರ–ಸ್ವಾವಲಂಬಿತನಕ್ಕಾಗಿ ಹಂಬಲಿಸುತ್ತಾರೆ. ಅದನ್ನು ಹಿರಿಯರು ಕೊಡದಿದ್ದಾಗ, ನಿರಾಶರಾಗುತ್ತಾರೆ. ಪ್ರತಿಭಟಿಸುತ್ತಾರೆ. ಹಿರಿಯರ ಕಣ್ಣಿಗೆ ಮಣ್ಣೆರಚಿ, ಸ್ವಾತಂತ್ರ್ಯ ಸ್ವಾವಲಂಬಿ ತನದ ರುಚಿ ಕಾಣಲು ಪ್ರಯತ್ನಿಸುತ್ತಾರೆ. ಸಿಗರೇಟ್ ಸೇವನೆ, ಶಾಲೆಗೆ ಚಕ್ಕರ್ ಹೊಡೆದು ಸಿನೇಮಾ ನೋಡುವುದು, ಹತ್ತಿರದ ಸ್ಥಳಗಳಿಗೆ ಪಿಕ್‌ನಿಕ್‌ಗೆ ಹೋಗುವುದು, ಉಳಿತಾಯದ ಹಣದಲ್ಲಿ ತನಗೆ ಬೇಕಾದ ವಸ್ತುವನ್ನು ಖರೀದಿಸುವುದು ಇತ್ಯಾದಿ ಸಣ್ಣ ಪುಟ್ಟ ಸಾಹಸಗಳನ್ನು ಮಾಡತೊಡಗುತ್ತಾರೆ. ಆದ್ದರಿಂದ ಹರೆಯದವರಿಗೆ ಜವಾಬ್ದಾರಿಯುತ ಸ್ವಾತಂತ್ರ್ಯವನ್ನು ಹಂತ ಹಂತವಾಗಿ ಕೊಡುವುದು ಅಪೇಕ್ಷಣೀಯ. "ಇದು ನಮ್ಮ ಇತಿಮಿತಿ, ನೀನು ಪ್ರೌಢನಾಗಬೇಕು. ನಿರ್ಧಾರ ಮಾಡಿ, ವ್ಯವಸ್ಥಿತವಾಗಿ ನಡೆದುಕೋ. ಸ್ವಾವಲಂಬಿಯಾಗು" ಎಂದು ಪ್ರೋತ್ಸಾಹಿಸಬೇಕು.

ಮಾದರಿ : ಹರೆಯದವರು ತಮ್ಮತನವನ್ನು ಗುರುತಿಸಿಕೊಳ್ಳುವಾಗ, ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ 'ಮಾದರಿ'ಗಾಗಿ ಕಣ್ಣು ಹಾಯಿಸುತ್ತಾರೆ. 'ನಾನು ಏನಾಗಬೇಕೆಂದರೆ ಅವರಂತೆ ಆಗಬೇಕು' ಎನ್ನಬಹುದಾದ ಮಾದರಿ ವ್ಯಕ್ತಿಗಾಗಿ ಅರಸುತ್ತಾರೆ. ಒಬ್ಬ ವ್ಯಕ್ತಿಯನ್ನು ಈ ರೀತಿ ಆಯ್ಕೆ ಮಾಡಿಕೊಂಡ ಮೇಲೆ, ಆತನನ್ನು ಆರಾಧಿಸುತ್ತಾರೆ. ಆತನ ಗುಣ ಮತ್ತು ಅವಗುಣಗಳೆರಡನ್ನೂ ಅನುಕರಿಸಲು ಪ್ರಾರಂಭಿಸುತ್ತಾರೆ. ಅನುಕರಣೆಗೆ ಸುಲಭವಾದ ಬಾಹ್ಯ ನಡೆವಳಿಕೆ, ಶೈಲಿ, ಮಾತು, ಉಡುಗೆ ತೊಡುಗೆಗಳನ್ನು ಅನುಕರಿಸುತ್ತಾರೆ. ನಂತರ ಆ ವ್ಯಕ್ತಿಯ ಮಟ್ಟಕ್ಕೆ ಏರಲು ಪ್ರಯತ್ನಿಸುತ್ತಾರೆ. "ನನ್ನ ಚಿಕ್ಕಪ್ಪ ಪೋಲಿಸ್ ಆಫೀಸರ್. ಆತ ಎದೆ ಸೆಟೆಸಿ ನಡೆಯುವ ಶೈಲಿ ಎಷ್ಟು ಚಂದ, ನಾನು ಹಾಗೇ ನಡೆಯಬೇಕು. ಆತ ಧ್ವನಿ ಏರಿಸಿ, ಕೇಳುವವರು ಬೆಚ್ಚುವಂತೆ ಮಾತಾಡುವ ಗತ್ತು ನೋಡು. ನಾನೂ ಹಾಗೇ ಮಾತಾಡಬೇಕು. ಆತ ಸಿಗರೇಟ್ ಸೇದುವ ರೀತಿ, ಹೊಗೆ ಬಿಡುವ ವೈಖರಿ ನೋಡುವುದಕ್ಕೆ ಸೊಗಸು. ನಾನೂ ಹಾಗೇ ಸಿಗರೇಟ್ ಸೇದಬೇಕು. ನಾನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಂತಹ ಆಫೀಸರ್ ಆಗಬೇಕು" ಎಂದು ಹರೆಯದ ವ್ಯಕ್ತಿ ಆಲೋಚಿಸ ತೊಡಗುತ್ತಾನೆ. ಇದಕ್ಕೆ ಮನೆಯವರ ಒತ್ತಾಸೆಯೂ ಸೇರಬಹುದು. "ನೋಡು ಚಿಕ್ಕಪ್ಪ ಬಂದಿದ್ದಾರೆ, ನಮಸ್ಕಾರ ಮಾಡು, ನೀನೂ ಅವರಂತೆ ಆಗಬೇಕು. ಕೀರ್ತಿ ಸಂಪಾದಿಸಬೇಕು" ಎಂದು ಹುಡುಗನಿಗೆ ತಂದೆತಾಯಿಯೇ ಮಾದರಿ ಹಾಕಿಕೊಡುತ್ತಾರೆ. ಅಂದರೆ ಹರೆಯದವರಿಗೆ, ದೊಡ್ಡವರೇ ಮಾದರಿ ಆಗಬೇಕು. ನಡೆ ನುಡಿಯಲ್ಲಿ ಅನುಕರಿಸಲು ಸತ್ವ ಇರುವ ಗುಣಗಳ ಒಡೆಯರು ನಾವಾಗಬೇಕು. ಬರಿ ಮಾತಿನಲ್ಲಿ ಆದರ್ಶದ ಆಕಾಶ ತೋರಿಸಿ, ಕ್ರಿಯೆಯಲ್ಲಿ ತದ್ವಿರುದ್ಧವಾದುದನ್ನು ಮಾಡುವ ದೊಡ್ಡವರನ್ನು ಹರೆಯ ದವರು ದ್ವೇಷಿಸುತ್ತಾರೆ. ನುಡಿದಂತೆ ನಡೆಯುವ ದೊಡ್ಡವರಿಗೆ ಅವರ ಮರ್ಯಾದೆ ಸಲ್ಲುತ್ತದೆ. ಜೀವನದ ಕಷ್ಟ ನಷ್ಟಗಳನ್ನು, ದ್ವಂದ್ವಗಳನ್ನು, ಎದುರಿಸುವ ಕೌಶಲ ಕಲಿಯಲು ಉದಾಹರಣೆಗಳನ್ನು ಅವರ ಮುಂದಿಡ ಬೇಕಾಗುತ್ತದೆ. ಮಾತಿನ ಮಾರ್ಗದರ್ಶನ ಮಾತ್ರವಲ್ಲದೆ, ಕೃತಿಯ ಮೂಲಕ ದಾರಿತೋರುವ ಮಾದರಿ ವ್ಯಕ್ತಿಗಳನ್ನು ಅವರ ಮುಂದೆ ನಿಲ್ಲಿಸಬೇಕಾಗುತ್ತದೆ.

ಲೈಂಗಿಕ ಶಿಕ್ಷಣ : ಹರೆಯದ ಅವಧಿಯಲ್ಲಿ ಹುಡುಗನಲ್ಲಿ ಪುರುಷ ಲಕ್ಷಣಗಳೂ ಹುಡುಗಿಯಲ್ಲಿ ಸ್ತ್ರೀಲಕ್ಷಣಗಳೂ ಕಾಣಿಸಿಕೊಂಡು, ಸಂತಾನೋತ್ಪತ್ತಿಗೆ ಅವರನ್ನು ಅಣಿಮಾಡುವ ಪ್ರಕೃತಿದತ್ತ ಬದಲಾವಣೆಗಳನ್ನು, ಹರೆಯದವರಿಗೆ ತಿಳಿಯ ಹೇಳಬೇಕಾಗುತ್ತದೆ. ಲೈಂಗಿಕ ರಸದೂತಗಳ ಚಟುವಟಿಕೆಯಿಂದ, ಮೈಮನದೊಳಗೆ ಮೂಡುವ ಲೈಂಗಿಕ ಆಸಕ್ತಿ, ಬಯಕೆ ಗಳ ಸ್ವರೂಪವನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜನನಾಂಗ ಗಳ ರಚನೆ, ವಿಕಾಸ, ಅವುಗಳ ಕಾರ್ಯವಿಧಾನ, ಸಂತಾನೋತ್ಪತ್ತಿ, ತಂದೆ ತಾಯಿತನ, ಮಕ್ಕಳ ಪಾಲನೆ–ಪೋಷಣೆ ಇತ್ಯಾದಿ ವಿಚಾರಗಳ ಬಗ್ಗೆ ವೈಜ್ಞಾನಿಕ ಮಾಹಿತಿ ನೀಡಬೇಕಾಗುತ್ತದೆ. ಸಾಮಾಜಿಕ ಧಾರ್ಮಿಕ ಮತ್ತು ನೈತಿಕ ಕಟ್ಟು–ಪಾಡುಗಳ ಚೌಕಟ್ಟಿನೊಳಗೆ ಲೈಂಗಿಕ ಆಸಕ್ತಿಯ ಪ್ರಕಟಣೆ ಹೇಗೆ, ಲೈಂಗಿಕ ಚಟುವಟಿಕೆಗಳ ನಿರ್ವಹಣೆ ಹೇಗೆ ಎಂಬುದನ್ನು ತಿಳಿಸ ಬೇಕಾಗುತ್ತದೆ. ನಿಯಂತ್ರಣವಿಲ್ಲದ, ಅಡ್ಡಾದಿಡ್ಡಿಯ, ಸ್ವೇಚ್ಛಾಚಾರದ ಲೈಂಗಿಕ ಚಟುವಟಿಕೆಯಿಂದ ಒದಗಬಹುದಾದ ತೊಂದರೆಗಳು, ಅನಾಹುತ ಅಪಾಯಗಳ ಬಗ್ಗೆ ಅರಿವನ್ನು ಮೂಡಿಸಬೇಕಾಗುತ್ತದೆ.

ಲೈಂಗಿಕ ಕ್ರಿಯೆ ಜೀವಿಯ ಪ್ರಾಥಮಿಕ ಅವಶ್ಯಕತೆಗಳಲ್ಲಿ ಒಂದು. ಅದೊಂದು ಸಹಜ ಸ್ವಾಭಾವಿಕ ಕ್ರಿಯೆ. ಗುಟ್ಟಿನ, ಕೊಳಕು ಅಥವಾ ಕೆಟ್ಟ ಅಥವಾ ಪೋಲಿ ಕೆಲಸವಲ್ಲ. ಮೈಮನಗಳ ಆರೋಗ್ಯಕ್ಕೆ ಅದು ಒತ್ತಾಸೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ನೀಡಬಲ್ಲದು ಸುಖ-ಆನಂದವನ್ನು ನೀಡಬಲ್ಲದು. ಅದರ ಬಗ್ಗೆ ವಾಸ್ತವಿಕ ಹಾಗೂ ಆರೋಗ್ಯಕರ ನಿಲುವು, ಧೋರಣೆಯನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು ಹರೆಯುದವರಿಗೆ ತಿಳಿಸಿ ಹೇಳುವ ಶಿಕ್ಷಣದ ಅವಶ್ಯಕತೆ ಇದೆ. ತಂದೆ ತಾಯಿಗಳು, ಅಕ್ಕ ಅಣ್ಣಂದಿರು, ಶಿಕ್ಷಕರು ಹಾಗೂ ವೈದ್ಯರು ಹರೆಯುದವರಿಗೆ ಆರೋಗ್ಯಕರ ಲೈಂಗಿಕ ಆರೋಗ್ಯ ಶಿಕ್ಷಣವನ್ನು ನೀಡಲು ಮುಂದಾಗಬೇಕು.

"ಲೈಂಗಿಕ ವಿಚಾರವನ್ನು ಗುಟ್ಟು ಮಾಡಿ, ಅದರ ಬಗ್ಗೆ ಆಸಕ್ತಿ ತೋರಿಸ ಬೇಡಿ, ಮಾತಾಡಬೇಡಿ" ಎಂದು ಒತ್ತಾಯ ತಂದರೆ, ಹರೆಯುದವರಿಗೆ ಅದರ ಬಗ್ಗೆ ಮತ್ತೂ ಹೆಚ್ಚಿನ ಕುತೂಹಲ ಹುಟ್ಟುತ್ತದೆ. ನೇರವಾಗಿ ಮಾಹಿತಿ ಸಿಗದಿದ್ದಾಗ ಅಡ್ಡದಾರಿಗಳಿಂದ ಅದನ್ನು ಪಡೆಯಲು ಪ್ರಯತ್ನಿಸುತ್ತಾರೆ. ಸಣ್ಣ ಪುಟ್ಟ ಲೈಂಗಿಕ ದುಸ್ಸಾಹಸಗಳನ್ನು ಮಾಡತೊಡಗುತ್ತಾರೆ. ನೇರ ಶಿಕ್ಷಣದಿಂದ ಇದನ್ನು ತಪ್ಪಿಸಬಹುದು.

ಅಭಿಪ್ರಾಯ-ಅನಿಸಿಕೆಗಳ ಪ್ರಕಟಣೆಗೆ ಅವಕಾಶ : "ತಲೆಮಾರಿನ ಅಂತರ...ಜನರೇಶನ್ ಗ್ಯಾಪ್ ಬಗ್ಗೆ ಎಲ್ಲರೂ ಮಾತಾಡುತ್ತಾರೆ. ಹರೆಯು ದವರ ಆಸೆ ಆಕಾಂಕ್ಷೆಗಳನ್ನು ದೊಡ್ಡವರು ಅರ್ಥ ಮಾಡಿಕೊಳ್ಳುವುದಿಲ್ಲ ಎಂದು ಹರೆಯುದವರು ದೂರಿದರೆ, 'ನಮ್ಮ ಅನುಭವದ ಬುದ್ಧಿ ಮಾತನ್ನು, ಎಚ್ಚರಿಕೆಗಳನ್ನು ಈ ಹುಡುಗರು ಕೇಳುವುದೇ ಇಲ್ಲ' ಎಂದು ದೊಡ್ಡವರು ದೂರುತ್ತಾರೆ. ಹದಿಹರೆಯುದವರು ತಮ್ಮ ಅನುಭವ, ಅನಿಸಿಕೆಗಳನ್ನು ತಮ್ಮ ವಯಸ್ಸಿನವರೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತಾರೆ, ಏಕೆಂದರೆ ಸೂಕ್ತ ಪ್ರತಿಕ್ರಿಯೆ, ಸಲಹೆ-ಪ್ರೋತ್ಸಾಹಗಳು ಅವರಿಂದ ದೊರೆಯುತ್ತದೆ. ಹಿರಿಯರ ಅನುಭವ, ಕಿರಿಯರ ಉತ್ಸಾಹ ಆದರ್ಶಗಳು ಜೊತೆ ಸೇರಿದರೆ ಅದ್ಭುತಗಳನ್ನು ಸಾಧಿಸಬಹುದು. ಆದ್ದರಿಂದ ಹರೆಯುದ ಹುಡುಗ ಅಥವಾ ಹುಡುಗಿ, ತಮ್ಮ ಆಸೆ ನಿರಾಸೆಗಳನ್ನು, ಯೋಜನೆಗಳನ್ನು, ಅನಿಸಿಕೆ ಅನುಭವಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವಂತೆ, ಸಾಕಷ್ಟು ಅವಕಾಶಗಳನ್ನು ಸಂದರ್ಭಗಳನ್ನು ಹಿರಿಯರು ವ್ಯವಸ್ಥೆ ಮಾಡಬೇಕು. ತೆರೆದ ಮನಸ್ಸಿನಿಂದ ಅವುಗಳನ್ನು ಕೇಳಿ, ವಿಶ್ಲೇಷಿಸಿ, ತಮ್ಮ ಅಭಿಪ್ರಾಯ – ಸಲಹೆಗಳನ್ನು ನೀಡಬೇಕು. ಆ ಸಲಹೆಗಳನ್ನು ಹರೆಯು ದವರು ಪಾಲಿಸಲೇಬೇಕು ಎಂಬ ಶರತ್ತನ್ನು ಹಾಕಬಾರದು. ಹರೆಯುದವರ ಮತ್ತು ಹಿರಿಯರ ನಡುವೆ ಈ ಬಗೆಯ ಸಂಪರ್ಕ ಹೆಚ್ಚಾದಂತೆ, ಅವರ ನಡುವಿನ ಭಿನ್ನಾಭಿಪ್ರಾಯ, ಅಪನಂಬಿಕೆ ಕಡಿಮೆಯಾಗತೊಡಗುತ್ತವೆ, ಅನ್ಯೋನ್ಯತೆ ಬೆಳೆಯುತ್ತದೆ. ಹರೆಯುದವರ ಮಾನಸಿಕ ಗೊಂದಲ ಕಡಿಮೆ ಯಾಗುತ್ತದೆ. ಸೃಜನಾತ್ಮಕವಾಗಿ ಅವರು ಆಲೋಚಿಸಲು ಮತ್ತು ಕೆಲಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಲು ಸಾಧ್ಯವಾಗುತ್ತದೆ. ಆತಂಕ, ಖಿನ್ನತೆ, ಉನ್ಮಾದ ಮನೋಬೇನೆಗೆ ಎಡೆ ಇರುವುದಿಲ್ಲ. ಅವರ ಮಾನಸಿಕ ಆರೋಗ್ಯ ವೃದ್ಧಿಸುತ್ತದೆ.

ಆರೋಗ್ಯಕರ ಹವ್ಯಾಸಗಳಿಗೆ ಅವಕಾಶ, ಪ್ರೋತ್ಸಾಹ: ಹರೆಯದವರು ಉತ್ಸಾಹದ ಬುಗ್ಗೆಗಳಾಗಿರುತ್ತಾರೆ. ಕಂಡ ಕನಸುಗಳನ್ನು ನನಸನ್ನಾಗಿಸಲು ದುಡಿಯಲು ಸಿದ್ಧರಾಗಿರುತ್ತಾರೆ. ಅವರ ಈ ಶಕ್ತಿ–ಸಾಮರ್ಥ್ಯ–ಉತ್ಸಾಹಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ಸಮಾಜ ಸಜ್ಜಾಗಬೇಕು. ಆರೋಗ್ಯಕರ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಹರೆಯದವರಿಗೆ ಅವಕಾಶ, ಅನುಕೂಲತೆಗಳನ್ನು ಮಾಡಿಕೊಡಬೇಕು. ಉದಾಹರಣೆಗೆ ಆರೋಗ್ಯಕರ ಸ್ಪರ್ಧೆ ಇರುವ ವಿವಿಧ ಕ್ರೀಡೆಗಳು, ವ್ಯಾಯಾಮದ ಚಟುವಟಿಕೆಗಳು, ಸಮಾಜ ಕಲ್ಯಾಣ ಮತ್ತು ಅಭಿವೃದ್ಧಿಯ ಗುರಿಹೊತ್ತ ಸಮಾಜ ಸೇವಾ ಕಾರ್ಯಗಳು, ಸೃಜನಾತ್ಮಕ ಚಟುವಟಿಕೆಗಳಾದ ಸಾಹಿತ್ಯ ರಚನೆ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಇತ್ಯಾದಿ ಲಲಿತ ಕಲೆಗಳ ಕಲಿಯುವಿಕೆ ಅಥವಾ ಭಾಗವಹಿಸುವಿಕೆ, ಅಪರೂಪ ವಸ್ತುಗಳ ಸಂಗ್ರಹ ಇತ್ಯಾದಿ. ಈ ರೀತಿಯ ಪಠ್ಯೇತರ ಚಟುವಟಿಕೆಯಲ್ಲಿ ಹರೆಯದವರು ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು. ಬಹುಮಾನ, ಪ್ರಶಸ್ತಿ, ಮಾನ್ಯತೆಗಳನ್ನು ಕೊಟ್ಟು ಉತ್ತೇಜಿಸಬೇಕು. ಇಲ್ಲದಿದ್ದರೆ ಹರೆಯದವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅನಾರೋಗ್ಯಕರ ಚಟುವಟಿಕೆಗಳು, ಸಮಾಜ ವಿರೋಧಿ ಕಾರ್ಯಗಳಿಗೆ ವಿನಿಯೋಗಿಸುತ್ತಾ, ತಾವು ಕೆಡುವುದಲ್ಲದೆ, ಸಮಾಜಕ್ಕೂ ಕಂಟಕರಾಗುತ್ತಾರೆ, ಆರೋಗ್ಯಕರ ಹವ್ಯಾಸಗಳಿಂದ ಅವರ ಮಾನಸಿಕ ಆರೋಗ್ಯವೂ ವೃದ್ಧಿಯಾಗಿ, ಅವರ ವ್ಯಕ್ತಿತ್ವ ದೃಢವಾಗುತ್ತದೆ, ಪರಿಪೂರ್ಣವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆರೋಗ್ಯದ ಕುರಿತು ಪುಸ್ತಕಗಳು

ಡಾ॥ ಸಿ. ಆರ್. ಚಂದ್ರಶೇಖರ್

1. ನಿಮ್ಮ ಮಗುವಿನ ಮನಸ್ಸು ... 3–50
(ಮಕ್ಕಳ ಮಾನಸಿಕ ಆರೋಗ್ಯದ ಕುರಿತು ಲೇಖನಗಳು)
2. ಮನೋರೋಗ
ನಿಮ್ಮ ನಂಬಿಕೆ ಎಷ್ಟು ಸರಿ ; ಎಷ್ಟು ತಪ್ಪು ? ... 5–00
3. ಸೃಷ್ಟಿಯ ಅದ್ಭುತ : ಮಿದುಳು ... 15–00
4. ಹದಿ ಹರೆಯ : ಮಾನಸಿಕ ಸಮಸ್ಯೆಗಳು

ಡಾ॥ ಪಿ. ಎಸ್. ಶಂಕರ್

1. ಆರೋಗ್ಯದ ಅರಿವು ... 10–00
2. ಆರೋಗ್ಯ ಸಂಪದ ... 10–00
3. ಏಡ್ಸ್ ಜಗತ್ತನ್ನೇ ತಲ್ಲಣಗೊಳಿಸುತ್ತಿರುವ ಮಾರಕ ರೋಗ ... 3–50
4. ಮಕ್ಕಳ ಆರೋಗ್ಯ–ಜನಾಂಗದ ಭಾಗ್ಯ

ಡಾ॥ ಕೆ. ಎಸ್. ನಾಗೇಶ್

1. ದಂತ ರಕ್ಷಣೆ

ಪ್ರತಿಗಳಿಗಾಗಿ ಬರೆಯಿರಿ :

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–560 001

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹದಿಹರೆಯ
ಬಾಳಿನ ರಸ ಸಮಯ.
ಆಸೆ ಆದರ್ಶಗಳ ನಡುವೆ
ಕಲ್ಪನೆ ವಾಸ್ತವಿಕತೆಗಳ ಮಧ್ಯೆ
ತನ್ನತನದ ಹುಡುಕಾಟ.
ಕಲಿಕೆಯ ಬೆನ್ನತ್ತಿ
ಉದ್ಯೋಗದ ಅನ್ವೇಷಣೆ,
ಮೈಮನಗಳಲ್ಲಿ ಲೈಂಗಿಕತೆ
ಅನುಪಮ ಅನುಭವಗಳ ಒರತೆ.
ಅತ್ತ ಬಾಲ್ಯದ ಮುಗ್ಧತೆ ಇಲ್ಲ
ಇತ್ತ ವಯಸ್ಸಿನ ಪ್ರೌಢತೆ ಇಲ್ಲ.
ನಡುವೆ ಎಲ್ಲೋ ತ್ರಿಶಂಕು ಸ್ಥಿತಿ
ಮನದ ತುಂಬ ಗೊಂದಲದ ಆಂದೋಲನ
ಆಗೊಮ್ಮೆ ಈಗೊಮ್ಮೆ ಸುಖದ ಮಿಂಚಿನ ಗೊಂಚಲು
ಹದಿಹರೆಯದ ಈ ವಿವಿಧ ಮುಖಗಳ
ಚಿತ್ರಣ ಈ ಹೊತ್ತಿಗೆಯ ಹೂರಣ.

Sri Vidyabharathi Book Centre, Sringeri